## ಅಧ್ಯಾಯ–೩

# ಜನತೆ

ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳಂತಹ ಅಂಶಗಳ ಪರಿಶೀಲನೆಯೂ ಆವಶ್ಯವಾಗಿರುತ್ತವೆ. ಈ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುವುದು ಸಹಜವಾಗಿರುತ್ತದೆ. ಮಂಡ್ಯ ಜಿಲ್ಲೆಯಲ್ಲಿಯೂ ವಿವಿಧ ಜಾತಿ ಮತ್ತು ಬುಡಕಟ್ಟು, ಮತ–ಧರ್ಮ, ಆಚಾರ–ವಿಚಾರ, ನಂಬಿಕೆ, ಆಹಾರಾಭ್ಯಾಸ, ವೇಷ–ಭೂಷಣ, ಭಾಷೆಗಳೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡುಬರುತ್ತವೆ.

ರಾಜ್ಯದ ಜಿಲ್ಲಾವಾರು ಜನಸಂಖ್ಯಾ ಗಣತಿಯಲ್ಲಿ ಏಳನೇ ಸ್ಥಾನವನ್ನು ಪಡೆದಿರುವ ಮಂಡ್ಯ ಜಿಲ್ಲೆಯು ಏಳು ತಾಲೂಕುಗಳನ್ನೊಳಗೊಂಡಿದ್ದು, ೧೯೯೧ರ ಜನಗಣತಿಯಂತೆ ಇಲ್ಲಿಯ ಜನಸಂಖ್ಯೆಯು ೧೬,೪೪,೩೭೪ ಆಗಿರುತ್ತದೆ (೨೦೦೧ರ ಜನಗಣತಿಯ ತಾತ್ಕಾಲಿಕ ಅಂಕಿ–ಅಂಶಗಳಂತೆ ಈ ಜಿಲ್ಲೆಯ ದಶಕದ ಜನಸಂಖ್ಯೆಯಲ್ಲಿ ಶೇ.೭.೧೪ರಷ್ಟು ಹೆಚ್ಚಳ ಕಂಡಿದ್ದು, ಒಟ್ಟು ಜನಸಂಖ್ಯೆ ೧೭,೬೧,೭೧೮ ಆಗಿದ್ದಿತು). ಈ ಜನಸಂಖ್ಯೆಯು ಜಿಲ್ಲೆಯ ೧೩೬೫ ಗ್ರಾಮ ಮತ್ತು ೧೧ ಪಟ್ಟಣಗಳಲ್ಲಿ ಹಂಚಿಹೋಗಿದೆ. ಮಂಡ್ಯ ತಾಲೂಕು ಅತಿ ಹೆಚ್ಚಿನ ಜನಸಂಖ್ಯೆಯನ್ನು (೩,೮೩,೦೩೦) ಹೊಂದಿದ್ದು, ೨,೮೨,೭೨೬ ಜನಸಂಖ್ಯೆಯನ್ನೊಳಗೊಂಡಿರುವ ಮದ್ದೂರು ತಾಲೂಕು ಎರಡನೇ ಸ್ಥಾನವನ್ನು ಪಡೆದಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೪೦.೪೮ ರಷ್ಟು ಜನಸಂಖ್ಯೆಯು ಈ ಎರಡು ತಾಲೂಕುಗಳಲ್ಲಿ ಹಂಚಲ್ಪಟ್ಟಿದೆ. ನಾಗಮಂಗಲ ತಾಲೂಕು ವಿಸ್ತೀರ್ಣದ ಅನುಸಾರ ಜಿಲ್ಲೆಯ ಅತ್ಯಂತ ವಿಶಾಲವಾದ ತಾಲೂಕಾಗಿದ್ದರೂ ಅದರ ಜನಸಂಖ್ಯೆ ೧,೭೮,೬೬೩ ಮಾತ್ರ ಆಗಿದ್ದು ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೧೦.೮೭ರಷ್ಟು ಮಾತ್ರ ಆಗಿರುತ್ತದೆ. ಜಿಲ್ಲೆಯ ಅತಿ ಚಿಕ್ಕ ತಾಲೂಕಾದ ಶ್ರೀರಂಗಪಟ್ಟಣ ತಾಲೂಕಿನ ಜನಸಂಖ್ಯೆಯು ೧,೪೬,೭೪೧ ಆಗಿದ್ದು, ಇದು ಒಟ್ಟು ಜನಸಂಖ್ಯೆಯ ಶೇ.೯.೪೦ ಮಾತ್ರ ಆಗಿದ್ದಿತು. ಈ ಮುಂದಿನ **ಕೋಷ್ಟಕ ೩.೧ರಲ್ಲಿ** ೧೯೭೧ ರಿಂದ ೨೦೦೧ರವರೆಗಿನ ಜನಗಣತಿಯನ್ವಯ ಜಿಲ್ಲೆಯ ತಾಲೂಕುವಾರು ಜನಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಿದೆ.

**ಕೋಷ್ಟಕ ೩.೧ ೧೯೭೧ ರಿಂದ ೨೦೦೧ರವರೆಗಿನ ತಾಲೂಕುವಾರು ಜನಸಂಖ್ಯಾ ವಿವರ**

| **ತಾಲೂಕು** | | **೧೯೭೧** | **೧೯೮೧** | **೧೯೯೧** | **೨೦೦೧(ತಾತ್ಕಾಲಿಕ)** |
|---|---|---|---|---|---|
| ಕೃಷ್ಣರಾಜಪೇಟೆ | ಗ್ರಾಮ | ೧,೪೪,೬೦೧ | ೧,೭೩,೮೫೭ | ೨,೦೩,೧೦೪ | ೨,೨೫,೨೮೪ |
| | ನಗರ | ೯,೬೩೧ | ೧೨,೮೦೦ | ೧೭,೯೯೯ | ೨೨,೪೭೩ |
| | ಒಟ್ಟು | ೧,೫೪,೨೩೨ | ೧,೮೬,೬೫೭ | ೨,೨೧,೧೦೩ | ೨,೪೭,೭೫೭ |
| ಮದ್ದೂರು | ಗ್ರಾಮ | ೧,೮೫,೦೦೨ | ೨,೨೭,೦೬೮ | ೨,೬೦,೬೧೧ | ೨,೬೩,೨೪೮ |
| | ನಗರ | ೧೨,೦೮೯ | ೧೭,೪೦೨ | ೨೨,೧೧೫ | ೨೬,೪೫೬ |
| | ಒಟ್ಟು | ೧,೯೭,೦೯೧ | ೨,೪೪,೪೭೦ | ೨,೮೨,೭೨೬ | ೨,೮೯,೭೦೪ |
| ಮಳವಳ್ಳಿ | ಗ್ರಾಮ | ೧,೬೫,೧೦೧ | ೧,೯೭,೯೧೫ | ೨,೨೬,೯೭೧ | ೨,೪೫,೫೪೫ |
| | ನಗರ | ೨೪,೫೪೪ | ೩೧,೫೧೦ | ೩೭,೧೦೪ | ೩೫,೮೦೦ |
| | ಒಟ್ಟು | ೧,೮೯,೬೪೫ | ೨,೨೯,೪೨೫ | ೨,೬೪,೦೭೫ | ೨,೮೧,೩೪೫ |
| ಮಂಡ್ಯ | ಗ್ರಾಮ | ೧,೯೧,೧೭೯ | ೨,೩೦,೯೯೪ | ೨,೬೨,೭೬೫ | ೨,೭೪,೬೮೭ |
| | ನಗರ | ೭೨,೧೩೨ | ೧,೦೦,೨೮೫ | ೧,೨೦,೨೬೫ | ೧,೩೧,೨೧೧ |
| | ಒಟ್ಟು | ೨,೬೩,೩೧೧ | ೩,೩೧,೨೭೯ | ೩,೮೩,೦೩೦ | ೪,೦೫,೮೯೮ |
| ನಾಗಮಂಗಲ | ಗ್ರಾಮ | ೧,೧೭೮೮೩ | ೧,೪೧,೪೮೮ | ೧,೫೮,೩೮೦ | ೧,೭೪,೭೬೪ |
| | ನಗರ | ೧೨,೯೦೬ | ೧೬,೫೨೨ | ೨೦,೨೮೩ | ೧೬,೦೫೦ |
| | ಒಟ್ಟು | ೧,೩೦,೭೮೯ | ೧,೫೮,೦೧೦ | ೧,೭೮,೬೬೩ | ೧,೯೦,೮೧೪ |
| ಪಾಂಡವಪುರ | ಗ್ರಾಮ | ೧,೦೦,೪೦೩ | ೧,೧೯,೧೨೮ | ೧,೪೦,೯೦೩ | ೧,೫೬,೭೭೨ |
| | ನಗರ | ೧೩,೩೮೬ | ೧೭,೧೨೨ | ೧೯,೨೫೨ | ೧೮,೨೩೬ |
| | ಒಟ್ಟು | ೧,೧೩,೭೮೯ | ೧,೩೬,೨೫೦ | ೧,೬೦,೧೫೫ | ೧,೭೫,೦೦೮ |
| ಶ್ರೀರಂಗಪಟ್ಟಣ | ಗ್ರಾಮ | ೯೧,೪೧೭ | ೧,೦೭,೬೩೪ | ೧,೨೪,೮೩೬ | ೧,೩೯,೨೩೪ |
| | ನಗರ | ೧೪,೧೦೦ | ೨೪,೩೮೪ | ೨೧,೯೦೫ | ೨೩,೪೪೮ |
| | ಒಟ್ಟು | ೧,೦೫,೫೧೭ | ೧,೩೨,೦೧೮ | ೧,೪೬,೭೪೧ | ೧,೬೨,೬೮೨ |
| ಕೃಷ್ಣರಾಜಸಾಗರ | (ಎನ್.ಎ.ಸಿ) | – | – | ೭,೮೮೧ | ೮,೫೧೦ |
| **ಜಿಲ್ಲೆಯ ಒಟ್ಟು** | **ಗ್ರಾಮ** | **೯,೯೫,೫೮೬** | **೧೧,೯೮,೦೮೪** | **೧೩,೭೭,೫೭೦** | **೧೪,೭೯,೫೩೪** |
| | **ನಗರ** | **೧,೫೮,೭೮೬** | **೨,೨೦,೦೨೫** | **೨,೬೬,೮೦೪** | **೨,೮೨,೧೮೪** |
| | **ಒಟ್ಟು** | **೧೧,೫೪,೩೭೪** | **೧೪,೧೮,೧೦೯** | **೧೬,೪೪,೩೭೪** | **೧೭,೬೧,೭೧೮** |

ಜಿಲ್ಲೆಯ ೧೯೦೧ ರಿಂದ ೧೯೯೧ರವರೆಗಿನ ಜನಸಂಖ್ಯೆಯನ್ನು ಗಮನಿಸಿದರೆ ಪ್ರತೀ ದಶಕದಲ್ಲೂ ಜನಸಂಖ್ಯೆಯ ಹೆಚ್ಚಳ ಕಂಡುಬರುತ್ತದೆ. ೧೯೦೧ ರಿಂದ ೧೯೧೧ರ ದಶಕದಲ್ಲಿ ರಾಜ್ಯದ ಜನಸಂಖ್ಯೆಯ ದಶಕದ ವ್ಯತ್ಯಾಸವು ಹಲವಾರು ಕಾರಣಗಳಿಂದ ಕುಗ್ಗಿದ್ದರೂ, ಈ ಪ್ರವೃತ್ತಿ ಮಂಡ್ಯ ಜಿಲ್ಲೆಯಲ್ಲಿ ಕಂಡುಬಂದಿಲ್ಲ. ೧೯೬೧ ರಿಂದ ೧೯೭೧ರ ದಶಕದ ಶೇಕಡಾ ಬೆಳವಣಿಗೆಯು ಅತ್ಯಂತ ಹೆಚ್ಚಾಗಿದ್ದು (ಶೇ.೨೮.೩೮) ಆನಂತರದ ದಶಕಗಳಲ್ಲಿ ಈ ಏರಿಕೆಯ ದರವು ಇಳಿಮುಖವಾಗಿದೆ. ಜನಸಂಖ್ಯಾ ನಿಯಂತ್ರಣವೇ ಇದಕ್ಕೆ ಕಾರಣವಾಗಿರಬಹುದು. ಜಿಲ್ಲೆಯ ೧೯೮೧ ರಿಂದ ೧೯೯೧ರವರೆಗಿನ ಜನಸಂಖ್ಯೆಯ ಹೆಚ್ಚಳವು ಶೇ.೧೫.೯೬ ಆಗಿದ್ದು, ಇದು ರಾಜ್ಯದ ಹೆಚ್ಚಳಕ್ಕಿಂತ (ಶೇ.೨೧.೧೨) ಕಡಿಮೆಯಾಗಿರುತ್ತದೆ. ಈ ದಶಕದಲ್ಲಿ ಜಿಲ್ಲೆಯ ತಾಲೂಕುಗಳ ಜನಸಂಖ್ಯೆಯ ಹೆಚ್ಚಳದ ದರವನ್ನು ಗಮನಿಸಿದರೆ ಕೃಷ್ಣರಾಜಪೇಟೆ ತಾಲೂಕಿನಲ್ಲಿ ಹೆಚ್ಚಿನ ಬೆಳವಣಿಗೆಯನ್ನೂ (ಶೇ.೧೮.೪೫), ನಾಗಮಂಗಲ ತಾಲೂಕಿನಲ್ಲಿ ಕಡಿಮೆ ಬೆಳವಣಿಗೆಯನ್ನೂ (ಶೇ.೧೩.೦೭) ಕಾಣಬಹುದಾಗಿದೆ. ಈ ದಶಕದಲ್ಲಿ ಮಂಡ್ಯ ತಾಲೂಕಿನ ಜನಸಂಖ್ಯೆಯು ಹೆಚ್ಚಾಗಿರುವುದೂ (೫೧,೭೫೧), ನಾಗಮಂಗಲ ತಾಲೂಕಿನ ಜನಸಂಖ್ಯೆಯು ಕಡಿಮೆಯಾಗಿರುವುದೂ (೨೦,೬೫೩) ಕಂಡುಬಂದಿದೆ. ಈ ಮುಂದಿನ **ಕೋಷ್ಟಕ ೩.೨ರಲ್ಲಿ** ೧೯೦೧ ರಿಂದ ೨೦೦೧ರವರೆಗಿನ ಜಿಲ್ಲೆಯ

ಜನಸಂಖ್ಯೆಯ ವ್ಯತ್ಯಾಸ ಹಾಗೂ ಶೇಕಡವಾರು ಬೆಳವಣಿಗೆಯನ್ನು ನೀಡಲಾಗಿದ್ದು, ರಾಜ್ಯದ ದಶಕದ ವ್ಯತ್ಯಾಸದ ಪ್ರತಿಶತದ ಅಂಕಿ ಅಂಶವನ್ನು ಆವರಣದಲ್ಲಿ ನೀಡಲಾಗಿದೆ.

**ಕೋಷ್ಟಕ ೩.೨**

| ಜನಗಣತಿಯ ವರ್ಷ | ಒಟ್ಟು ಜನಸಂಖ್ಯೆ | ದಶಕದ ವ್ಯತ್ಯಾಸ | ದಶಕದ ವ್ಯತ್ಯಾಸದ ಪ್ರತಿಶತ | ಪುರುಷರು | ಸ್ತ್ರೀಯರು |
|---|---|---|---|---|---|
| ೧೯೦೧* | ೪,೮೨,೫೮೧ | – | – | ೨,೩೮,೭೨೧ | ೨,೪೩,೮೬೦ |
| ೧೯೧೧ | ೫,೦೪,೧೫೭ | +೨೧,೫೭೬ | +೪.೪೭(+೩.೬೦) | ೨,೪೮,೫೭೪ | ೨,೫೫,೫೮೩ |
| ೧೯೨೧ | ೫,೪೨,೪೨೧ | +೩೮,೨೬೪ | +೭.೫೯(−೧.೦೯) | ೨,೭೧,೩೩೧ | ೨,೭೧,೦೯೦ |
| ೧೯೩೧ | ೫,೮೧,೮೩೬ | +೩೯,೪೧೫ | +೭.೨೭(+೯.೩೮) | ೨,೯೧,೬೮೬ | ೨,೯೦,೧೫೦ |
| ೧೯೪೧ | ೬,೩೪,೭೨೭ | +೫೨,೮೯೧ | +೯.೦೯(+೧೧.೦೯) | ೩,೨೦,೩೨೩ | ೩,೧೪,೪೦೪ |
| ೧೯೫೧ | ೭,೧೬,೫೮೩ | +೮೧,೮೫೬ | +೧೨.೯೦(+೧೯.೩೬) | ೩,೬೦,೦೧೪ | ೩,೫೬,೫೬೯ |
| ೧೯೬೧ | ೮,೯೯,೨೧೦ | +೧,೮೨,೬೨೭ | +೨೫.೪೯(+೨೧.೫೭) | ೪,೫೭,೧೪೩ | ೪,೪೨,೦೬೭ |
| ೧೯೭೧ | ೧೧,೫೪,೩೭೪ | +೨,೫೫,೧೬೪ | +೨೮.೩೮(+೨೪.೨೨) | ೫,೮೮,೯೧೪ | ೫,೬೫,೪೬೦ |
| ೧೯೮೧ | ೧೪,೧೮,೧೦೯ | +೨,೬೩,೭೩೫ | +೨೨.೮೫(+೨೬.೭೫) | ೭,೨೩,೬೭೪ | ೬,೯೪,೪೩೫ |
| ೧೯೯೧ | ೧೬,೪೪,೩೭೪ | +೨,೨೬,೨೬೫ | +೧೫.೯೬(+೨೧.೧೨) | ೮,೩೭,೫೯೭ | ೮,೦೬,೭೭೭ |
| ೨೦೦೧ (ತಾತ್ಕಾಲಿಕ) | ೧೭,೬೧,೭೧೮ | +೧,೧೭,೩೪೪ | +೭.೧೪(೧೭.೨೫) | ೮,೮೭,೩೦೭ | ೮,೭೪,೪೧೧ |

* ಸೂಚನೆ : ಮಂಡ್ಯ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ೧೯೩೯ರಲ್ಲಿ ಪ್ರತ್ಯೇಕಗೊಂಡು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಈ ಜಿಲ್ಲಾ ಭಾಗದ ಪಟ್ಟಣ ಹಾಗೂ ಗ್ರಾಮಗಳಲ್ಲಿ ೧೯೦೧ರಿಂದಲೇ ಗಣತಿಯಾಗಿದ್ದ ಅಂಕಿ–ಅಂಶಗಳನ್ನು ಆಗಿನ ಮೈಸೂರು ಜಿಲ್ಲೆಯಿಂದ ಆಯ್ದುಕೊಂಡು ಜನಗಣತಿ ಇಲಾಖೆಯು ಈ ಪಟ್ಟಿ ನೀಡಿರುತ್ತದೆ.

**ಆಕರ :** Census of India, 1991, General Population Tables, p-417.

**ಜನಸಾಂದ್ರತೆ**

ಒಂದು ಪ್ರದೇಶದ ಪ್ರತೀ ಚದರ ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನಸಾಂದ್ರತೆಯು ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ಜಿಲ್ಲೆಯ ಜನಸಾಂದ್ರತೆಯು ೧೯೯೧ರ ಜನಗಣತಿಯಂತೆ ೩೩೧ ಆಗಿದ್ದು ಇದು ರಾಜ್ಯದ ಜನಸಾಂದ್ರತೆಗಿಂತ (೨೩೫) ಅಧಿಕವಾಗಿದೆ. ನಗರದ ಜನಸಾಂದ್ರತೆಯು ೪,೫೦೮ ಮತ್ತು ಗ್ರಾಮೀಣ ಜನಸಾಂದ್ರತೆಯು ೨೮೧ ಆಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಮದ್ದೂರು ತಾಲೂಕು ಹೆಚ್ಚಿನ ಜನಸಾಂದ್ರತೆಯನ್ನು (೪೨೫) ಮತ್ತು ನಗರ ಪ್ರದೇಶಗಳಲ್ಲಿ ಮಳವಳ್ಳಿ ತಾಲೂಕು ಹೆಚ್ಚಿನ ಜನಸಾಂದ್ರತೆಯನ್ನು (೧೪,೪೩೭) ಹೊಂದಿದೆ. ಈ ಮುಂದಿನ **ಕೋಷ್ಟಕ ೩.೩ರಲ್ಲಿ** ೧೯೭೧, ೧೯೮೧ ಹಾಗೂ ೧೯೯೧ರ ಜನಗಣತಿಯಂತೆ ತಾಲೂಕುವಾರು ಜನಸಾಂದ್ರತೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೩ ಜನಸಾಂದ್ರತೆ**

| ತಾಲೂಕುಗಳು | ೧೯೭೧ | | | ೧೯೮೧ | | | ೧೯೯೧ | | |
|---|---|---|---|---|---|---|---|---|---|
| | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| ಕೃಷ್ಣರಾಜಪೇಟೆ | ೧೬೨ | ೭೨೮ | ೧೭೦ | ೧೯೩ | ೩೦೦೫ | ೨೦೬ | ೨೨೬ | ೪೨೨೫ | ೨೪೪ |
| ಮದ್ದೂರು | ೩೦೨ | ೨೧೨೧ | ೩೧೯ | ೩೭೧ | ೩೦೫೩ | ೩೯೫ | ೪೨೫ | ೩೮೮೦ | ೪೫೭ |
| ಮಳವಳ್ಳಿ | ೨೦೮ | ೨೨೮೫ | ೨೩೬ | ೨೪೫ | ೧೨೨೬೧ | ೨೮೩ | ೨೮೧ | ೧೪೪೩೭ | ೩೨೬ |
| ಮಂಡ್ಯ | ೨೭೪ | ೪೨೮೩ | ೩೬೮ | ೩೩೦ | ೫೯೫೫ | ೪೬೩ | ೩೭೬ | ೭೧೪೨ | ೫೩೫ |
| ನಾಗಮಂಗಲ | ೧೧೪ | ೩೧೧೭ | ೧೨೬ | ೧೩೬ | ೩೧೭೧ | ೧೫೧ | ೧೫೨ | ೩೮೯೩ | ೧೭೧ |
| ಪಾಂಡವಪುರ | ೧೯೨ | ೧೨೯೨ | ೨೧೩ | ೨೨೪ | ೧೯೮೬ | ೨೫೨ | ೨೬೫ | ೨೨೩೩ | ೨೯೭ |
| ಶ್ರೀರಂಗಪಟ್ಟಣ | ೨೬೯ | ೧೯೮೦ | ೩೦೪ | ೩೧೭ | ೧೩೭೪ | ೩೭೦ | ೩೬೫ | ೧೮೮೫ | ೪೧೫ |
| ಕೃಷ್ಣರಾಜಸಾಗರ | – | – | – | – | – | – | – | – | ೧೮೦೮ |
| **ಒಟ್ಟು** | **೨೦೪** | **೨೩೩೧** | **೨೩೩** | **೨೪೫** | **೩೬೧೦** | **೨೮೬** | **೨೮೧** | **೪೫೦೮** | **೩೩೧** |

**ಸೂಚನೆ:** ೧) ೧೯೯೧ರ ಜನಗಣತಿಯಲ್ಲಿ ಕೃಷ್ಣರಾಜಸಾಗರವನ್ನು ಅಧಿಸೂಚಿತ ಪ್ರದೇಶ ಸಮಿತಿ (ಎನ್.ಎ.ಸಿ) ಎಂದು ಪರಿಗಣಿಸಲಾಗಿದೆ. ೧೯೯೧ರ ತಾಲೂಕುವಾರು ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಸಾಂದ್ರತೆಯನ್ನು ಜನಗಣತಿಯಲ್ಲಿ ನೀಡಿರುವ ವಿಸ್ತೀರ್ಣ ಮತ್ತು ಜನಸಂಖ್ಯೆಯ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

೨) ೨೦೦೧ರ ಜನಗಣತಿಯ ತಾತ್ಕಾಲಿಕ ಲೆಕ್ಕದಂತೆ ಜಿಲ್ಲೆಯ ಜನಸಾಂದ್ರತೆ ೩೫೫ ಆಗಿರುತ್ತದೆ (ತಾಲೂಕುವಾರು ವಿವರಗಳು ಅಧಿಕೃತವಾಗಿ ಲಭ್ಯವಿರುವುದಿಲ್ಲ).

**ವಾಸದ ಮನೆಗಳು ಮತ್ತು ಕುಟುಂಬಗಳು**

ಜನಗಣತಿಯ ವ್ಯಾಖ್ಯಾನದ ಪ್ರಕಾರ, ವಾಸದ ಮನೆಯೆಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕುಟುಂಬಗಳು ವಾಸಿಸುವ ಪೂರ್ತಿ ಅಥವಾ ಭಾಗಶಃ ಕಟ್ಟಡ ಎಂದರ್ಥ. ಕುಟುಂಬವೆಂದರೆ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡುಗೆಮನೆಯಲ್ಲಿ ತಯಾರಿಸಿದ ಅಡುಗೆಯನ್ನು (ಅನೇಕ ಸಂದರ್ಭಗಳಲ್ಲಿ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನ ಸಮೂಹ ಎಂದರ್ಥ. ಕೆಲವು ಕುಟುಂಬಗಳಿಗೆ ವಾಸದ ಮನೆಗಳಿರುವುದಿಲ್ಲ. ಅಂತಹ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳು ಎಂದು ಕರೆಯುತ್ತಾರೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ೨,೯೪,೧೦೩ ವಾಸದ ಮನೆಗಳಿದ್ದು, ಅವುಗಳಲ್ಲಿ ೩,೦೭,೯೪೭ ಕುಟುಂಬಗಳು ವಾಸವಾಗಿದ್ದವು. ಅಂದರೆ ಅಂದಾಜಿನಲ್ಲಿ ಪ್ರತೀ ಸಾವಿರ ವಾಸದ ಮನೆಗಳಿಗೆ ೧,೦೪೭ ಕುಟುಂಬಗಳಿದ್ದವು. ಇದು ರಾಜ್ಯದ ಪ್ರಮಾಣಕ್ಕಿಂತ (೧,೦೨೩ ಕುಟುಂಬಗಳು) ಅಧಿಕವಾಗಿದೆ. ಈ ಮುಂದಿನ **ಕೋಷ್ಟಕ ೩.೪ರಲ್ಲಿ** ೧೯೭೧, ೧೯೮೧ ಮತ್ತು ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿಯ ವಾಸದ ಮನೆಗಳು ಹಾಗೂ ಕುಟುಂಬಗಳನ್ನು ತಾಲೂಕು, ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ. (೨೦೦೧ರ ಅಂಕಿ-ಅಂಶಗಳು ಇನ್ನೂ ಅಧಿಕೃತವಾಗಿ ಪ್ರಕಟಗೊಂಡಿಲ್ಲ)

**ಕೋಷ್ಟಕ ೩.೪ ವಾಸದ ಮನೆಗಳು ಮತ್ತು ಕುಟುಂಬಗಳು**

| ತಾಲೂಕುಗಳು | ೧೯೭೧ | | | ೧೯೮೧ | | | ೧೯೯೧ | | |
|---|---|---|---|---|---|---|---|---|---|
| | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| **ಕೃಷ್ಣರಾಜಪೇಟೆ** | | | | | | | | | |
| ವಾಸದ ಮನೆಗಳು | ೧೯೫೬೧ | ೧೧೬೧ | ೨೦೭೨೨ | ೩೦೨೩೪ | ೨೩೦೮ | ೩೨೫೪೨ | ೩೪೭೨೭ | ೩೩೩೪ | ೩೮೦೬೧ |
| ಕುಟುಂಬಗಳು | ೨೪೭೬೫ | ೧೮೧೫ | ೨೬೫೮೦ | ೩೦೪೬೯ | ೨೩೧೯ | ೩೨೭೮೮ | ೩೭೪೪೨ | ೩೪೦೭ | ೪೦೮೪೯ |
| **ಮದ್ದೂರು** | | | | | | | | | |
| ವಾಸದ ಮನೆಗಳು | ೨೬೦೮೧ | ೧೬೨೬ | **೨೭೭೦೭** | ೩೭೪೩೬ | ೩೧೭೬ | ೪೦೬೧೨ | ೪೬೩೫೧ | ೪೧೧೯ | ೫೦೪೭೦ |
| ಕುಟುಂಬಗಳು | ೩೩೬೦೯ | ೨೧೯೩ | ೩೫೮೦೨ | ೩೮೮೪೬ | ೩೨೫೨ | ೪೨೦೯೮ | ೪೮೬೦೭ | ೪೩೭೬ | ೫೨೯೮೩ |
| **ಮಳವಳ್ಳಿ** | | | | | | | | | |
| ವಾಸದ ಮನೆಗಳು | ೨೩೮೨೯ | ೩೩೧೭ | ೨೭೧೪೬ | ೩೫೩೯೨ | ೫೨೮೨ | ೪೦೬೭೪ | ೪೧೪೫೯ | ೬೪೫೪ | ೪೭೯೧೩ |
| ಕುಟುಂಬಗಳು | ೨೮೭೯೨ | ೪೨೭೧ | ೩೩೦೬೩ | ೩೫೫೮೪ | ೫೩೦೫ | ೪೦೮೮೯ | ೪೨೮೭೫ | ೬೭೪೫ | ೪೯೬೨೦ |
| **ಮಂಡ್ಯ** | | | | | | | | | |
| ವಾಸದ ಮನೆಗಳು | ೨೮೩೯೭ | ೧೧೪೭೯ | ೩೯೮೭೬ | ೩೮೫೦೨ | ೧೭೩೯೧ | ೫೫೮೯೩ | ೪೫೩೭೨ | ೨೨೯೧೨ | ೬೮೨೮೪ |
| ಕುಟುಂಬಗಳು | ೩೨೭೬೯ | ೧೪೫೮೬ | ೪೭೩೫೫ | ೩೮೭೧೫ | ೧೭೭೭೯ | ೫೬೪೯೪ | ೪೭೧೦೯ | ೨೩೨೦೫ | ೭೦೩೧೪ |
| **ನಾಗಮಂಗಲ** | | | | | | | | | |
| ವಾಸದ ಮನೆಗಳು | ೧೯೬೨೮ | ೨೦೪೨ | ೨೧೬೭೦ | ೨೪೭೦೯ | ೨೯೪೪ | ೨೭೬೫೩ | ೨೯೦೪೫ | ೩೭೪೨ | ೩೨೭೮೭ |
| ಕುಟುಂಬಗಳು | ೨೧೪೮೩ | ೨೩೧೮ | ೨೩೮೦೧ | ೨೪೭೯೮ | ೨೯೬೭ | ೨೭೭೬೫ | ೨೯೭೭೩ | ೩೮೪೪ | ೩೩೬೧೭ |
| **ಪಾಂಡವಪುರ** | | | | | | | | | |
| ವಾಸದ ಮನೆಗಳು | ೧೨೮೭೪ | ೧೮೪೦ | ೧೪೭೧೪ | ೨೦೫೦೬ | ೩೧೪೦ | ೨೩೬೪೬ | ೨೩೩೮೬ | ೩೬೩೯ | ೨೭೦೨೫ |
| ಕುಟುಂಬಗಳು | ೧೮೨೦೮ | ೨೪೧೧ | ೨೦೬೧೯ | ೨೦೭೭೨ | ೩೧೬೧ | ೨೩೯೩೩ | ೨೫೭೮೮ | ೩೮೦೪ | ೨೯೫೯೨ |
| **ಶ್ರೀರಂಗಪಟ್ಟಣ** | | | | | | | | | |
| ವಾಸದ ಮನೆಗಳು | ೧೩೮೮೮ | ೨೩೭೧ | ೧೬೨೫೯ | ೧೯೩೯೬ | ೪೫೪೯ | ೨೩೯೪೫ | ೨೩೫೩೩ | ೪೩೭೩ | ೨೭೯೦೬ |
| ಕುಟುಂಬಗಳು | ೧೬೮೦೬ | ೨೭೦೨ | ೧೯೫೦೮ | ೧೯೬೬೯ | ೪೫೯೧ | ೨೪೨೬೦ | ೨೪೮೩೧ | ೪೪೭೫ | ೨೯೩೦೬ |
| **ಕೃಷ್ಣರಾಜಸಾಗರ** (ಎನ್.ಎ.ಸಿ) | | | | | | | | | |
| ವಾಸದ ಮನೆಗಳು | – | – | – | – | – | – | – | ೧೬೫೭ | ೧೬೫೭ |
| ಕುಟುಂಬಗಳು | – | – | – | – | – | – | – | ೧೬೬೬ | ೧೬೬೬ |
| **ಜಿಲ್ಲೆಯ ಒಟ್ಟು** | | | | | | | | | |
| ವಾಸದ ಮನೆಗಳು | ೧೪೪೨೫೮ | ೨೩೮೩೬ | ೧೬೮೦೯೪ | ೨೦೬೧೭೫ | ೩೮೭೯೦ | ೨೪೪೯೬೫ | ೨೪೩೮೭೩ | ೫೦೨೩೦ | ೨೯೪೧೦೩ |
| ಕುಟುಂಬಗಳು | ೧೭೬೪೩೨ | ೩೦೨೯೬ | ೨೦೬೭೨೮ | ೨೦೮೮೫೩ | ೩೯೩೭೪ | ೨೪೮೨೨೭ | ೨೫೬೪೨೫ | ೫೧೫೨೨ | ೩೦೭೯೪೭ |

**ಸೂಚನೆ:** ೧೯೯೧ರ ಜನಗಣತಿಯಲ್ಲಿ ಕೃಷ್ಣರಾಜಸಾಗರವನ್ನು ಅಧಿಸೂಚಿತ ಪ್ರದೇಶವೆಂದು (ಎನ್.ಎ.ಸಿ) ಗುರುತಿಸಲಾಗಿದ್ದು, ಇದು ಜಿಲ್ಲೆಯ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿಗೆ ಸೇರಿದ ಮೂರು ಗ್ರಾಮಗಳ ಪ್ರದೇಶವನ್ನೊಳಗೊಂಡಿರುವುದರಿಂದ ಅದನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಆಕರ: ಡಿಸ್ಟ್ರಿಕ್ ಸೆನ್ಸಸ್ ಹ್ಯಾಂಡ್ ಬುಕ್ ಆಫ್ ಮಂಡ್ಯ, ೧೯೭೧, ೧೯೮೧, ೧೯೯೧

## ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ

ಜನಗಣತಿಯ ಪ್ರಕಾರ ವಿದ್ಯಾರ್ಥಿನಿಲಯ, ಭೋಜನ ಗೃಹ, ಸೆರೆಮನೆ, ಆಶ್ರಮ ಮುಂತಾದವುಗಳಲ್ಲಿ ವಾಸಿಸುವ ಜನರ ಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ೩೩೫ ಸಾಂಸ್ಥಿಕ ಕುಟುಂಬಗಳಿದ್ದು ಅವುಗಳಲ್ಲಿ ೮,೪೦೪ ಜನ ವಾಸಿಸುತ್ತಿದ್ದರು. ಈ ಮುಂದಿನ **ಕೋಷ್ಟಕ ೩.೫**ರಲ್ಲಿ ೧೯೭೧, ೧೯೮೧ ಹಾಗೂ ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಸಾಂಸ್ಥಿಕ ಕುಟುಂಬಗಳು ಮತ್ತು ಅವುಗಳಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಯನ್ನು ತಾಲೂಕುವಾರು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

### ಕೋಷ್ಟಕ ೩.೫ ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ

| ತಾಲೂಕುಗಳು | | ೧೯೭೧ | | | | ೧೯೮೧ | | | | ೧೯೯೧ | | | |
|---|---|---|---|---|---|---|---|---|---|---|---|---|---|
| | | ಸಾಂ | ಗಂ | ಹೆಂ | ಒ | ಸಾಂ | ಗಂ | ಹೆಂ | ಒ | ಸಾಂ | ಗಂ | ಹೆಂ | ಒ |
| ಕೃಷ್ಣರಾಜಪೇಟೆ | ಗ್ರಾಮ | ೯೨ | ೧೬೮ | ೬೪ | ೨೩೨ | ೬ | ೨೫೧ | – | ೨೫೧ | ೧೬ | ೬೨೩ | ೨೪ | ೬೪೭ |
| | ನಗರ | ೧೨ | ೧೫೪ | – | ೧೫೪ | ೭೦ | ೬೦೪ | ೨೯ | ೬೩೩ | ೭ | ೩೬೧ | ೨೮ | ೩೮೯ |
| | ಒಟ್ಟು | ೧೦೪ | ೩೨೨ | ೬೪ | ೩೮೬ | ೭೬ | ೮೫೫ | ೨೯ | ೮೮೪ | ೨೩ | ೯೮೪ | ೫೨ | ೧೦೩೬ |
| ಮದ್ದೂರು | ಗ್ರಾಮ | ೧೫೯ | ೩೫೫ | ೩೮೭ | ೭೪೨ | ೪೮ | ೫೩೫ | ೨೪ | ೫೫೯ | ೨೨ | ೧೦೮೨ | ೧೨೫ | ೧೨೦೭ |
| | ನಗರ | ೨೪ | ೧೧೧ | ೧೭ | ೧೨೮ | ೨೦ | ೨೦೪ | ೬೭ | ೨೭೧ | ೧೬ | ೧೩೫ | ೮೪ | ೨೧೯ |
| | ಒಟ್ಟು | ೧೮೩ | ೪೬೬ | ೪೦೪ | ೮೭೦ | ೬೮ | ೭೩೯ | ೯೧ | ೮೩೦ | ೩೮ | ೧೨೧೭ | ೨೦೯ | ೧೪೨೬ |
| ಮಳವಳ್ಳಿ | ಗ್ರಾಮ | ೨೮ | ೪೯ | ೫೩ | ೧೦೨ | ೧೩ | ೮೬ | ೬೨ | ೧೪೮ | ೨೭ | ೪೦೦ | ೮೮ | ೪೮೮ |
| | ನಗರ | ೧೧ | ೧೪ | ೨೦ | ೩೪ | ೧೮ | ೨೧೫ | ೯೯ | ೩೧೪ | ೧೭ | ೨೯೬ | ೧೫೦ | ೪೪೬ |
| | ಒಟ್ಟು | ೩೯ | ೬೩ | ೭೩ | ೧೩೬ | ೩೧ | ೩೦೧ | ೧೬೧ | ೪೬೨ | ೪೪ | ೬೯೬ | ೨೩೮ | ೯೩೪ |
| ಮಂಡ್ಯ | ಗ್ರಾಮ | ೪೮ | ೭೭ | ೪೨ | ೧೧೯ | ೭ | ೬೮ | ೫ | ೭೩ | ೯ | ೩೬೮ | ೬ | ೩೭೪ |
| | ನಗರ | ೨೭೬ | ೧೩೪೭ | ೨೮೭ | ೧೬೩೪ | ೧೮೧ | ೨,೦೮೬ | ೪೭೦ | ೨೫೫೬ | ೧೨೯ | ೧೬೬೨ | ೫೬೭ | ೨೨೨೯ |
| | ಒಟ್ಟು | ೩೨೪ | ೧೪೨೪ | ೩೨೯ | ೧೭೫೩ | ೧೮೮ | ೨೧೫೪ | ೪೭೫ | ೨೬೨೯ | ೧೩೮ | ೨೦೩೦ | ೫೭೩ | ೨೬೦೩ |
| ನಾಗಮಂಗಲ | ಗ್ರಾಮ | ೭ | ೯೨ | ೦೬ | ೯೮ | ೧೮ | ೮೨೪ | ೯ | ೮೩೩ | ೪೪ | ೧೦೨೦ | ೨೦೫ | ೧೨೨೫ |
| | ನಗರ | ೪೦ | ೨೬೨ | ೨೭ | ೨೮೯ | ೫೭ | ೩೮೫ | ೧೯ | ೪೦೪ | ೧೯ | ೨೫೨ | ೧೦೧ | ೩೫೩ |
| | ಒಟ್ಟು | ೪೭ | ೩೫೪ | ೩೩ | ೩೮೭ | ೭೫ | ೧೨೦೯ | ೨೮ | ೧೨೩೭ | ೬೩ | ೧೨೭೨ | ೩೦೬ | ೧೫೭೮ |
| ಪಾಂಡವಪುರ | ಗ್ರಾಮ | ೪೮ | ೬೭ | ೨೦ | ೮೭ | ೨ | ೮ | – | ೮ | ೧೧ | ೧೯೮ | ೬ | ೨೦೪ |
| | ನಗರ | ೧೩ | ೨೧೪ | ೩೮ | ೨೫೨ | ೧೬ | ೨೯೨ | ೬೫ | ೩೫೭ | ೭ | ೨೧೧ | ೬೯ | ೨೮೦ |
| | ಒಟ್ಟು | ೬೧ | ೨೮೧ | ೫೮ | ೩೩೯ | ೧೮ | ೩೦೦ | ೬೫ | ೩೬೫ | ೧೮ | ೪೦೯ | ೭೫ | ೪೮೪ |
| ಶ್ರೀರಂಗಪಟ್ಟಣ | ಗ್ರಾಮ | ೩೯ | ೭೫ | ೬೮ | ೧೪೩ | ೯ | ೩೬ | ೯ | ೪೫ | ೫ | ೧೦೯ | ೧೪ | ೧೨೩ |
| | ನಗರ | ೧೨ | ೮೫ | ೮ | ೯೩ | ೧೩ | ೨೨೬ | – | ೨೨೬ | ೬ | ೧೫೩ | ೬೭ | ೨೨೦ |
| | ಒಟ್ಟು | ೫೧ | ೧೬೦ | ೭೬ | ೨೩೬ | ೨೨ | ೨೬೨ | ೯ | ೨೭೧ | ೧೧ | ೨೬೨ | ೮೧ | ೩೪೩ |
| **ಜಿಲ್ಲೆಯ ಒಟ್ಟು** | ಗ್ರಾಮ | ೪೨೧ | ೮೮೩ | ೬೪೦ | ೧೫೨೩ | ೧೦೩ | ೧೮೦೮ | ೧೦೯ | ೧೯೧೭ | ೧೩೪ | ೩೮೦೦ | ೪೬೮ | ೪೨೬೮ |
| | ನಗರ | ೩೮೮ | ೨೧೮೭ | ೩೯೭ | ೨೫೮೪ | ೩೭೫ | ೪೦೧೨ | ೭೪೯ | ೪೭೬೧ | ೨೦೧ | ೩೦೭೦ | ೧೦೬೬ | ೪೧೩೬ |
| | ಒಟ್ಟು | ೮೦೯ | ೩೦೭೦ | ೧೦೩೭ | ೪೧೦೭ | ೪೭೮ | ೫೮೨೦ | ೮೫೮ | ೬೬೭೮ | ೩೩೫ | ೬೮೭೦ | ೧೫೩೪ | ೮೪೦೪ |

**ಸೂಚನೆ : ಸಾಂ–**ಸಾಂಸ್ಥಿಕ ಕುಟುಂಬಗಳ ಸಂಖ್ಯೆ; ಗಂ–ಗಂಡಸರು; ಹೆಂ–ಹೆಂಗಸರು; ಒ–ಒಟ್ಟು

(ಈ ಕೋಷ್ಟಕಕ್ಕೆ ಸಂಬಂಧಿಸಿದ ೨೦೦೧ರ ಅಂಕಿ–ಅಂಶಗಳು ಇನ್ನೂ ಅಧಿಕೃತವಾಗಿ ಪ್ರಕಟಗೊಂಡಿರುವುದಿಲ್ಲ).

## ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರದೆ ಸಾಮಾನ್ಯವಾಗಿ ಬಸ್‌ನಿಲ್ದಾಣ, ರೈಲ್ವೆನಿಲ್ದಾಣ, ಹಳೇಕಟ್ಟಡ, ಮಂಟಪ, ರಸ್ತೆಬದಿಯಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯ ಪ್ರಕಾರ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ೧,೫೭೫ ನಿರ್ವಸಿತ ಕುಟುಂಬಗಳಿದ್ದು, ಅವುಗಳಲ್ಲಿ ೪,೮೮೦ ಜನರು ಇದ್ದರು. ಈ ಮುಂದಿನ **ಕೋಷ್ಟಕ ೩.೬**ರಲ್ಲಿ ೧೯೭೧, ೧೯೮೧ ಮತ್ತು ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ನಿರ್ವಸಿತ ಕುಟುಂಬಗಳು ಹಾಗೂ ಅವುಗಳ ತಾಲೂಕುವಾರು ಜನಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಿದೆ.

### ಕೋಷ್ಟಕ ೩.೬ ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ

| ತಾಲೂಕುಗಳು | | ೧೯೭೧ | | | | ೧೯೮೧ | | | | ೧೯೯೧ | | | |
|---|---|---|---|---|---|---|---|---|---|---|---|---|---|
| | | ನಿ | ಗಂ | ಹೆಂ | ಒ | ನಿ | ಗಂ | ಹೆಂ | ಒ | ನಿ | ಗಂ | ಹೆಂ | ಒ |
| ಕೃಷ್ಣರಾಜಪೇಟೆ | ಗ್ರಾಮ | ೧೩೭ | ೨೮೦ | ೨೭೫ | ೫೫೫ | ೧೫೨ | ೩೩೨ | ೩೦೪ | ೬೩೬ | ೧೯೦ | ೪೩೪ | ೩೬೦ | ೭೯೪ |
| | ನಗರ | ೭ | ೨೪ | ೧ | ೨೫ | ೧೧ | ೧೨ | ೨೩ | ೩೫ | ೯ | ೩೧ | ೨೨ | ೫೩ |
| | ಒಟ್ಟು | ೧೪೪ | ೩೦೪ | ೨೭೬ | ೫೮೦ | ೧೬೩ | ೩೪೪ | ೩೨೭ | ೬೭೧ | ೧೯೯ | ೪೬೫ | ೩೮೨ | ೮೪೭ |
| ಮದ್ದೂರು | ಗ್ರಾಮ | ೨೬೬ | ೫೦೨ | ೨೮೩ | ೭೮೫ | ೧೯೯ | ೪೦೩ | ೨೭೭ | ೬೮೦ | ೩೨೬ | ೫೯೯ | ೪೦೯ | ೧೦೦೮ |
| | ನಗರ | ೩೭ | ೫೬ | ೩೫ | ೯೧ | ೭೬ | ೧೩೧ | ೫೬ | ೧೮೭ | ೧೩೯ | ೧೬೨ | ೮೨ | ೨೪೪ |
| | ಒಟ್ಟು | ೩೦೩ | ೫೫೮ | ೩೧೮ | ೮೭೬ | ೨೭೫ | ೫೩೪ | ೩೩೩ | ೮೬೭ | ೪೬೫ | ೭೬೧ | ೪೯೧ | ೧೨೫೨ |
| ಮಳವಳ್ಳಿ | ಗ್ರಾಮ | ೬೧ | ೧೭೨ | ೧೦೦ | ೨೭೨ | ೧೭೧ | ೩೭೭ | ೩೦೧ | ೬೭೮ | ೧೫೫ | ೩೪೩ | ೨೪೯ | ೫೯೨ |
| | ನಗರ | ೧೧ | ೩೦ | ೧೭ | ೪೭ | ೨೩ | ೫೩ | ೪೫ | ೯೮ | ೨೧ | ೪೩ | ೩೦ | ೭೩ |
| | ಒಟ್ಟು | ೭೨ | ೨೦೨ | ೧೧೭ | ೩೧೯ | ೧೯೪ | ೪೩೦ | ೩೪೬ | ೭೭೬ | ೧೭೬ | ೩೮೬ | ೨೭೯ | ೬೬೫ |
| ಮಂಡ್ಯ | ಗ್ರಾಮ | ೨೧೩ | ೩೯೩ | ೨೮೨ | ೬೭೫ | ೨೦೨ | ೩೫೭ | ೨೬೧ | ೬೧೮ | ೧೨೧ | ೨೨೦ | ೧೬೫ | ೩೮೫ |
| | ನಗರ | ೨೯೮ | ೩೯೦ | ೨೪೦ | ೬೩೦ | ೧೭೪ | ೨೪೬ | ೮೬ | ೩೩೨ | ೧೦೪ | ೧೬೦ | ೬೪ | ೨೨೪ |
| | ಒಟ್ಟು | ೫೧೧ | ೭೮೩ | ೫೨೨ | ೧೩೦೫ | ೩೭೬ | ೬೦೩ | ೩೪೭ | ೯೫೦ | ೨೨೫ | ೩೮೦ | ೨೨೯ | ೬೦೯ |
| ನಾಗಮಂಗಲ | ಗ್ರಾಮ | ೨೫ | ೩೭ | ೨೫ | ೬೨ | ೮೯ | ೨೦೩ | ೧೬೨ | ೩೬೫ | ೧೮೪ | ೩೪೭ | ೨೮೮ | ೬೩೫ |
| | ನಗರ | ೨೧ | ೨೦ | ೧೯ | ೩೯ | ೧೬ | ೩೫ | ೨೬ | ೬೧ | ೨೧ | ೩೫ | ೨೩ | ೫೮ |
| | ಒಟ್ಟು | ೪೬ | ೫೭ | ೪೪ | ೧೦೧ | ೧೦೫ | ೨೩೮ | ೧೮೮ | ೪೨೬ | ೨೦೫ | ೩೮೨ | ೩೧೧ | ೬೯೩ |
| ಪಾಂಡವಪುರ | ಗ್ರಾಮ | ೭೪ | ೯೫ | ೭೦ | ೧೬೫ | ೩೮ | ೬೯ | ೬೦ | ೧೨೯ | ೭೦ | ೧೫೩ | ೧೧೫ | ೨೬೮ |
| | ನಗರ | ೩೪ | ೪೧ | ೨೬ | ೬೭ | ೨೧ | ೫೪ | ೪೮ | ೧೦೨ | ೬ | ೧೨ | ೬ | ೧೮ |
| | ಒಟ್ಟು | ೧೦೮ | ೧೩೬ | ೯೬ | ೨೩೨ | ೫೯ | ೧೨೩ | ೧೦೮ | ೨೩೧ | ೭೬ | ೧೬೫ | ೧೨೧ | ೨೮೬ |
| ಶ್ರೀರಂಗಪಟ್ಟಣ | ಗ್ರಾಮ | ೧೭೭ | ೨೯೨ | ೨೦೨ | ೪೯೪ | ೧೦೯ | ೧೯೬ | ೧೩೪ | ೩೩೦ | ೧೪೭ | ೨೩೫ | ೧೬೬ | ೪೦೧ |
| | ನಗರ | ೫೦ | ೭೯ | ೬೨ | ೧೪೧ | ೪೨ | ೫೫ | ೪೩ | ೯೮ | ೭೩ | ೮೪ | ೩೧ | ೧೧೫ |
| | ಒಟ್ಟು | ೨೨೭ | ೩೭೧ | ೨೬೪ | ೬೩೫ | ೧೫೧ | ೨೫೧ | ೧೭೭ | ೪೨೮ | ೨೨೦ | ೩೧೯ | ೧೯೭ | ೫೧೬ |
| ಕೃಷ್ಣರಾಜಸಾಗರ (ಎನ್.ಎ.ಸಿ) | | | | | | | | | | ೯ | ೧೦ | ೨ | ೧೨ |
| ಜಿಲ್ಲೆಯ ಒಟ್ಟು | ಗ್ರಾಮ | ೯೫೩ | ೧೭೭೧ | ೧೨೩೭ | ೩೦೦೮ | ೯೬೦ | ೧೯೩೭ | ೧೪೯೯ | ೩೪೩೬ | ೧೧೯೩ | ೨೩೩೧ | ೧೭೫೨ | ೪೦೮೩ |
| | ನಗರ | ೪೫೮ | ೬೪೦ | ೪೦೦ | ೧೦೪೦ | ೩೬೩ | ೫೮೬ | ೩೨೭ | ೯೧೩ | ೩೮೨ | ೫೩೭ | ೨೬೦ | ೭೯೭ |
| | ಒಟ್ಟು | ೧೪೧೧ | ೨೪೧೧ | ೧೬೩೭ | ೪೦೪೮ | ೧೩೨೩ | ೨೫೨೩ | ೧೮೨೬ | ೪೩೪೯ | ೧೫೭೫ | ೨೮೬೮ | ೨೦೧೨ | ೪೮೮೦ |

(ಈ ಕೋಷ್ಟಕಕ್ಕೆ ಸಂಬಂಧಿಸಿದ ಜನಗಣತಿಯ ೨೦೦೧ರ ಅಂಕಿಅಂಶಗಳು ಪ್ರಕಟಗೊಂಡಿರುವುದಿಲ್ಲ)

**ಸೂಚನೆ:** ನಿ-ನಿರ್ವಸಿತ ಕುಟುಂಬಗಳ ಸಂಖ್ಯೆ: ಗಂ-ಗಂಡಸರು; ಹೆಂ-ಹೆಂಗಸರು; ಒ-ಒಟ್ಟು

ಆಕರ: ಸೆನ್ಸಸ್ ಆಫ್ ಇಂಡಿಯಾ, ೧೯೭೧, ೧೯೮೧, ೧೯೯೧ ಜನರಲ್ ಪಾಪ್ಯುಲೇಶನ್ ಟೇಬಲ್ಸ್, ಕರ್ನಾಟಕ.

## ವಲಸೆ

ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ವಾಸಿಸುವುದನ್ನು ವಲಸೆ ಎಂದು ಪರಿಗಣಿಸಲಾಗುತ್ತದೆ. ವಲಸೆ ಹೋಗುವುದು ಬಹು ಹಿಂದಿನಿಂದಲೂ ನಡೆದುಬಂದಿರುವ ಒಂದು ಆರ್ಥಿಕ ಹಾಗೂ ಸಾಮಾಜಿಕ ಪ್ರಕ್ರಿಯೆ. ವಲಸೆಯು ತಾತ್ಕಾಲಿಕವಾಗಿರಬಹುದು, ಇಲ್ಲವೇ ಶಾಶ್ವತವಾಗಿರಬಹುದು. ತಾತ್ಕಾಲಿಕ ವಲಸೆಯು ವರ್ಷದ ಯಾವುದಾದರೂ ಒಂದು ಋತುಮಾನಕ್ಕೆ ಅಥವಾ ಒಂದು ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತದೆ. ಉದಾಹರಣೆಗೆ, ಸುಗ್ಗಿಯ ನಂತರ ಬಿಡುವಿನ ವೇಳೆಯಲ್ಲಿ ಮೈದಾನ ಪ್ರದೇಶದಿಂದ ಮಲೆನಾಡು ಪ್ರದೇಶಗಳಿಗೆ ವಲಸೆ ಹೋಗಿ ಬಳಿಕ ಬಿತ್ತನೆ ವೇಳೆಯಲ್ಲಿ ಹಿಂತಿರುಗುವುದು. ಭೀಕರ ಬರ, ತೀವ್ರ ಭೂಕಂಪ, ಪದೇಪದೇ ಯುದ್ಧದ ದಾಳಿ ಮೊದಲಾದ ಕಾರಣಗಳಿಂದ ಒಂದೆಡೆ ಬದುಕಲು ಕಷ್ಟವಾದವರು ಸುರಕ್ಷಿತ ಸ್ಥಳಕ್ಕೆ ಖಾಯಂ ಆಗಿ ಗುಳೇ ಹೋಗುವುದು ಶಾಶ್ವತ ವಲಸೆ ಆಗುತ್ತದೆ. ವಿವಾಹ, ಉದ್ಯೋಗ ಮೊದಲಾದ ಅಂಶಗಳೂ ವಲಸೆಗೆ ಕಾರಣವಾಗಿವೆ. ಈ ಮುಂದಿನ **ಕೋಷ್ಟಕ ೩.೭**ರಲ್ಲಿ ೧೯೯೧ನೇ ಜನಗಣತಿಯಂತೆ ಇತರೆಡೆಗಳಲ್ಲಿ ಹುಟ್ಟಿ ಮಂಡ್ಯ ಜಿಲ್ಲೆಯಲ್ಲಿ ಗಣತಿಯಾದವರ ಸಂಖ್ಯೆಯನ್ನು ನೀಡಲಾಗಿದೆ.

**ಕೋಷ್ಟಕ ೩.೭ ವಲಸೆ**

| | | ಒಟ್ಟು | | ಗ್ರಾಮಾಂತರ | | ನಗರ | |
|---|---|---|---|---|---|---|---|
| ಕ್ರ.ಸಂ | ಹುಟ್ಟಿದ ಸ್ಥಳ | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧. | ಭಾರತದಲ್ಲಿ | ೮,೩೫,೮೫೭ | ೮,೦೫,೪೩೭ | ೬,೯೮,೨೫೯ | ೬,೭೬,೫೯೧ | ೧,೩೭,೫೯೮ | ೧,೨೮,೮೪೬ |
| ೨. | ಕರ್ನಾಟಕದಲ್ಲಿ | ೮,೨೫,೫೭೭ | ೭,೯೬,೧೮೭ | ೬,೯೨,೪೫೯ | ೬,೭೧,೧೭೧ | ೧,೩೩,೧೩೮ | ೧,೨೫,೦೧೬ |
| ೩. | ಗಣತಿಯಾದ ಸ್ಥಳದಲ್ಲಿ | ೭,೦೮,೯೬೮ | ೪,೬೮,೩೧೪ | ೬,೧೭,೬೯೯ | ೩,೯೭,೭೭೭ | ೯೧,೨೬೯ | ೭೦,೫೩೭ |
| ೪. | ಜಿಲ್ಲೆಯಲ್ಲಿ | ೬೭,೯೭೦ | ೨,೨೭,೩೦೦ | ೪೮,೫೦೦ | ೨,೦೩,೪೨೧ | ೧೯,೪೭೦ | ೨೩,೮೭೯ |
| ೫ | ರಾಜ್ಯದ ಇತರ ಜಿಲ್ಲೆಗಳಲ್ಲಿ | ೪೮,೬೩೯ | ೧,೦೦,೫೭೩ | ೨೬,೨೪೦ | ೬೯,೯೭೩ | ೨೨,೩೯೯ | ೩೦,೬೦೦ |
| ೬. | ಇತರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ | ೧೦,೨೮೦ | ೯,೨೫೦ | ೫,೮೨೦ | ೫,೪೨೦ | ೪,೪೬೦ | ೩,೮೩೦ |
| ೭. | ಆಂಧ್ರಪ್ರದೇಶ | ೮೯೦ | ೮೬೦ | ೪೫೦ | ೪೦೦ | ೪೪೦ | ೪೬೦ |
| ೮. | ಕೇರಳ | ೧,೩೯೦ | ೮೮೦ | ೫೦೦ | ೨೯೦ | ೮೯೦ | ೫೯೦ |
| ೯. | ಮಹಾರಾಷ್ಟ್ರ | ೨೨೦ | ೩೬೦ | ೯೦ | ೧೫೦ | ೧೩೦ | ೨೧೦ |
| ೧೦ | ತಮಿಳುನಾಡು | ೬,೪೩೦ | ೬,೨೭೦ | ೪,೩೬೦ | ೪,೩೧೦ | ೨,೦೭೦ | ೧,೯೬೦ |
| ೧೧ | ಉತ್ತರಪ್ರದೇಶ | ೧೫೦ | ೯೦ | ೧೦೦ | ೬೦ | ೫೦ | ೩೦ |
| ೧೨ | ವಿದೇಶಗಳಲ್ಲಿ | ೩೮೦ | ೩೦೦ | ೧೦೦ | ೨೪೦ | ೨೮೦ | ೬೦ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧ ಸೀರಿಸ್ ೧೧ – ಕರ್ನಾಟಕ ಭಾಗ ೫ಎ ಮತ್ತು ೫ಬಿ–ಡಿ ಸೀರಿಸ್ ಸಂಪುಟ–೧ ಪು ೧೮೦– ೧೮೭

## ಸ್ತ್ರೀ – ಪುರುಷರ ಪ್ರಮಾಣ

ಸ್ತ್ರೀ–ಪುರುಷರ ಪ್ರಮಾಣವೆಂದರೆ ಪ್ರತೀ ಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆ. ಸ್ತ್ರೀ–ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯ, ವೈವಾಹಿಕ ಸ್ಥಾನಮಾನ, ಜನರ ವಲಸೆ, ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಒಟ್ಟಿನ ಜನಸಂಖ್ಯೆಯು ೧೬,೪೪,೩೭೪ ಆಗಿದ್ದು, ಇದರಲ್ಲಿ ೮,೩೭,೫೯೭ ಪುರುಷರೂ, ೮,೦೬,೭೭೭ ಸ್ತ್ರೀಯರೂ ಆಗಿದ್ದರು. ಸ್ತ್ರೀ–ಪುರುಷರ ಪ್ರಮಾಣವು ೯೬೩ ಆಗಿದ್ದಿತು. ರಾಜ್ಯದಲ್ಲಿ

೧೯೮೧-೯೧ರ ದಶಕದಲ್ಲಿನ ಸ್ತ್ರೀ ಪುರುಷರ ಪ್ರಮಾಣವು ೯೬೩ ರಿಂದ ೯೬೦ಕ್ಕೆ ಇಳಿಮುಖವಾದರೆ, ಜಿಲ್ಲೆಯಲ್ಲಿನ ಪ್ರಮಾಣವು ಇದೇ ದಶಕದಲ್ಲಿ ೯೬೦ ರಿಂದ ೯೬೩ಕ್ಕೆ ಹೆಚ್ಚಿರುತ್ತದೆ. ಸ್ತ್ರೀ-ಪುರುಷರ ಪ್ರಮಾಣವು ಗ್ರಾಮಾಂತರ ಪ್ರದೇಶಗಳಲ್ಲಿ (೯೬೯) ನಗರ ಪ್ರದೇಶಗಳಿಗಿಂತ (೯೩೫) ಅಧಿಕವಾಗಿದ್ದಿತು. ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲೂಕುಗಳ ಗ್ರಾಮಾಂತರ ಪ್ರದೇಶದಲ್ಲಿನ ಸ್ತ್ರೀ-ಪುರುಷರ ಪ್ರಮಾಣವು ಅಧಿಕವಾಗಿದ್ದು (ಕ್ರಮವಾಗಿ ೧೦೪೨ ಮತ್ತು ೧೧೧೪), ಮಳವಳ್ಳಿ ತಾಲೂಕಿನಲ್ಲಿ ಅದು (೯೩೧) ಕಡಿಮೆ ಇದ್ದಿತು. ನಗರ ಪ್ರದೇಶದಲ್ಲಿನ ಸರಾಸರಿ ಸ್ತ್ರೀ-ಪುರುಷರ ಪ್ರಮಾಣವು ೯೩೫ ಆಗಿದ್ದು, ಬೆಳ್ಳೂರಿನಲ್ಲಿ (೯೧೦) ಕಡಿಮೆ ಮತ್ತು ಬೆಳಕವಾಡಿಯಲ್ಲಿ (೯೯೨) ಅತ್ಯಧಿಕವಾಗಿ ಇದ್ದಿತು. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಜನಸಂದಣಿಯುಳ್ಳ ಮಂಡ್ಯ ನಗರದಲ್ಲೂ ಸ್ತ್ರೀ-ಪುರುಷರ ಪ್ರಮಾಣವು ಕಡಿಮೆಯಿರುವುದು (೯೨೩) ಕಂಡುಬಂದಿದೆ. ಜಿಲ್ಲೆಯ ೧೧ ಪಟ್ಟಣ ಪ್ರದೇಶಗಳಲ್ಲಿ ನಾಲ್ಕು ಪಟ್ಟಣಗಳಲ್ಲಿನ ಸ್ತ್ರೀ-ಪುರುಷರ ಪ್ರಮಾಣವು ಜಿಲ್ಲೆಯ ಸರಾಸರಿ ಸ್ತ್ರೀ-ಪುರುಷರ ಪ್ರಮಾಣಕ್ಕಿಂತ (೯೩೫) ಕಡಿಮೆಯಿದ್ದಿತು. ಈ ಮುಂದಿನ **ಕೋಷ್ಟಕ ೩.೮**ರಲ್ಲಿ ಜಿಲ್ಲೆಯಲ್ಲಿನ ಸ್ತ್ರೀ-ಪುರುಷರ ಪ್ರಮಾಣವನ್ನು ೧೯೦೧ರ ದಶಕದಿಂದ ೧೯೯೧ರವರೆವಿಗೆ (೨೦೦೧ರ ತಾತ್ಕಾಲಿಕ ಪ್ರಮಾಣ) ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ (ಕಂಸದಲ್ಲಿರುವ ಸಂಖ್ಯೆಗಳು ರಾಜ್ಯದಲ್ಲಿನ ಸ್ತ್ರೀ-ಪುರುಷರ ಪ್ರಮಾಣವನ್ನು ಸೂಚಿಸುತ್ತವೆ).

**ಕೋಷ್ಟಕ ೩.೮ ಸ್ತ್ರೀ-ಪುರುಷರ ಪ್ರಮಾಣ**

| ದಶಕಗಳು | ಗ್ರಾಮಾಂತರ | ನಗರ | ಒಟ್ಟು |
|---|---|---|---|
| ೧೯೦೧ | ೧೦೩೩(೯೮೪) | ೧೦೨೬(೯೭೬) | ೧೦೩೨(೯೮೩) |
| ೧೯೧೧ | ೧೦೩೦(೯೮೪) | ೯೯೭(೯೫೯) | ೧೦೨೮(೯೮೧) |
| ೧೯೨೧ | ೧೦೦೧(೯೭೫) | ೯೭೩(೯೩೬) | ೯೯೯(೯೬೯) |
| ೧೯೩೧ | ೯೯೮(೯೭೨) | ೯೫೮(೯೨೭) | ೯೯೫(೯೬೫) |
| ೧೯೪೧ | ೯೮೭(೯೬೫) | ೯೨೨(೯೩೫) | ೯೮೨(೯೬೦) |
| ೧೯೫೧ | ೯೯೯(೯೭೪) | ೯೨೦(೯೪೧) | ೯೯೦(೯೬೬) |
| ೧೯೬೧ | ೯೭೫(೯೭೩) | ೯೦೫(೯೧೩) | ೯೬೭(೯೫೯) |
| ೧೯೭೧ | ೯೬೮(೯೭೧) | ೯೧೪(೯೧೩) | ೯೬೦(೯೫೭) |
| ೧೯೮೧ | ೯೬೬(೯೭೮) | ೯೨೪(೯೨೬) | ೯೬೦(೯೬೩) |
| ೧೯೯೧ | ೯೬೯(೯೭೩) | ೯೩೫(೯೩೦) | ೯೬೩(೯೬೦) |
| ೨೦೦೧ | ೯೮೯(೯೭೬) | ೯೬೬(೯೪೦) | ೯೮೫(೯೬೪) |

## ವಯೋಮಾನದಂತೆ ವಿಂಗಡಣೆ

ವಯೋಮಾನದಂತೆ ಜನತೆಯನ್ನು ವಿಂಗಡಿಸುವುದು ಜನತೆಯ ಲಕ್ಷಣವನ್ನು ಸೂಚಿಸುವ ಒಂದು ಮುಖ್ಯ ಸಾಮಾಜಿಕ ಪ್ರಕ್ರಿಯೆ. ಈ ವಿಂಗಡಣೆಯಿಂದ ದುಡಿಯುವ ವಯಸ್ಸಿನವರನ್ನೂ ದುಡಿಯಲು ಸಾಧ್ಯವಿಲ್ಲದವರ ಸಂಖ್ಯೆಯನ್ನೂ ತಿಳಿಯಲು ಸಾಧ್ಯವಾಗುತ್ತದೆ. ದೇಶದ ಜನಶಕ್ತಿಯನ್ನು ತಿಳಿಯಲು ಸಹ ಇದು ನೆರವಾಗುತ್ತದೆ. ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ಹಾಗೂ ೬೦ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ವೃತ್ತಿ

ಯೋಗ್ಯರೆಂದು ಪರಿಗಣಿಸುವುದಿಲ್ಲ. ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿ ೨,೮೦,೮೪೫ ಪುರುಷರೂ ೨,೭೮,೮೯೨ ಸ್ತ್ರೀಯರೂ ಅಂದರೆ ಒಟ್ಟಾರೆ ೫,೫೯,೭೩೭ ಜನರು ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರು. ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಈ ವಯಸ್ಸಿನ ಶತಾಂಶವನ್ನು ರಾಜ್ಯದ ಒಟ್ಟಿನ ಜನಸಂಖ್ಯೆಯ ಈ ವಯಸ್ಸಿನ ಶತಾಂಶದೊಡನೆ ಹೋಲಿಸಿದರೆ, ಜಿಲ್ಲೆಯ ಶತಾಂಶವು ರಾಜ್ಯದ ಶತಾಂಶಕ್ಕಿಂತ ಸ್ವಲ್ಪ ಕಡಿಮೆಯಿರುವುದು ಕಂಡುಬಂದಿದೆ. ಈ ಮುಂದೆ ಕಂಸದಲ್ಲಿರುವ ಮೊದಲನೇ ಸಂಖ್ಯೆಯು ಜಿಲ್ಲೆಯ ಶತಾಂಶವನ್ನೂ, ಎರಡನೇ ಸಂಖ್ಯೆಯು ರಾಜ್ಯದ ಶತಾಂಶವನ್ನೂ ಸೂಚಿಸುತ್ತದೆ : ಪುರುಷರು (೩೩.೫೨% ; ೩೫.೭೮%); ಸ್ತ್ರೀಯರು (೩೪.೫೭% ; ೩೬.೨೮%) ಹಾಗೂ ಒಟ್ಟು (೩೪.೦೩% ; ೩೬.೦೧%) – ಇದೇ ರೀತಿ ೬೦ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರ ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಶತಾಂಶವನ್ನು ರಾಜ್ಯದಲ್ಲಿನ ಇದೇ ಗುಂಪಿನ ಒಟ್ಟಿನ ಜನಸಂಖ್ಯೆಯ ಶತಾಂಶಕ್ಕೆ ಹೋಲಿಸಿದರೆ ಜಿಲ್ಲೆಯ ಶತಾಂಶವು ರಾಜ್ಯದ ಶತಾಂಶಕ್ಕಿಂತ ಸ್ವಲ್ಪ ಅಧಿಕವಾಗಿರುವುದು ಕಂಡುಬಂದಿದೆ. ಜಿಲ್ಲೆಯಲ್ಲಿನ ಈ ವಯಸ್ಸಿನವರ ಜನಸಂಖ್ಯೆಯನ್ನು ಹಾಗೂ ಕಂಸದಲ್ಲಿ ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಇದರ ಶತಾಂಶ ಮತ್ತು ರಾಜ್ಯದಲ್ಲಿನ ಈ ವಯಸ್ಸಿನವರ ಒಟ್ಟಿನ ಜನಸಂಖ್ಯೆಯ ಶತಾಂಶದೊಂದಿಗೆ ಇಲ್ಲಿ ನೀಡಲಾಗಿದೆ: ಪುರುಷರು–೬೭,೪೮೫ (೮.೦೬% ; ೬.೮೦%); ಸ್ತ್ರೀಯರು ೬೫,೫೦೯ (೮.೧೧% ; ೭.೧೮೯%) ಹಾಗೂ ಒಟ್ಟು ೧,೩೨,೯೯೪ (೮.೦೮% ; ೬.೯೯%). ಈ ಮುಂದಿನ **ಕೋಷ್ಟಕ ೩.೯**ರಲ್ಲಿ ೧೯೯೧ ರ ಜನಗಣತಿಯಂತೆ ಜಿಲ್ಲೆಯಲ್ಲಿನ ವಿವಿಧ ವಯೋಗುಂಪುಗಳ ಜನಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೯ ವಯೋಮಾನದಂತೆ ವಿಂಗಡಣೆ**

| ವಯೋಗುಂಪು | ಗ್ರಾಮೀಣ ಜನಸಂಖ್ಯೆ | | ನಗರ ಜನಸಂಖ್ಯೆ | | ಒಟ್ಟು ಜನಸಂಖ್ಯೆ | |
|---|---|---|---|---|---|---|
| | **ಗಂಡಸರು** | **ಹೆಂಗಸರು** | **ಗಂಡಸರು** | **ಹೆಂಗಸರು** | **ಗಂಡಸರು** | **ಹೆಂಗಸರು** |
| ೦–೯ | ೧,೪೯,೬೩೨ | ೧,೪೮,೪೯೭ | ೨೯,೩೩೩ | ೨೭,೯೫೫ | ೧,೭೮,೯೬೫ | ೧,೭೬,೪೫೨ |
| ೧೦–೧೪ | ೮೫,೨೭೦ | ೮೫,೫೦೦ | ೧೬,೬೧೦ | ೧೬,೯೪೦ | ೧,೦೧,೮೮೦ | ೧,೦೨,೪೪೦ |
| ೧೫–೧೯ | ೭೪,೫೨೭ | ೬೮,೯೨೦ | ೧೫,೯೩೦ | ೧೩,೯೯೦ | ೯೦,೪೫೭ | ೮೨,೯೧೦ |
| ೨೦–೨೪ | ೬೩,೯೫೮ | ೫೯,೨೦೦ | ೧೩,೮೧೮ | ೧೨,೭೬೮ | ೭೭,೭೭೬ | ೭೧,೯೬೮ |
| ೨೫–೨೯ | ೫೨,೮೯೦ | ೫೯,೯೬೯ | ೧೦,೫೧೯ | ೧೨,೮೯೦ | ೬೩,೪೦೯ | ೭೨,೮೫೯ |
| ೩೦–೩೪ | ೪೪,೪೧೦ | ೪೬,೦೪೦ | ೧೦,೧೦೦ | ೯,೪೭೧ | ೫೪,೫೧೦ | ೫೫,೫೧೧ |
| ೩೫–೩೯ | ೪೬,೦೬೦ | ೪೩,೧೪೦ | ೧೦,೪೩೯ | ೮,೮೬೪ | ೫೬,೪೯೯ | ೫೨,೦೦೪ |
| ೪೦–೪೪ | ೩೯,೯೩೦ | ೩೬,೫೧೯ | ೭,೭೦೪ | ೬,೧೭೦ | ೪೭,೬೩೪ | ೪೨,೬೮೯ |
| ೪೫–೪೯ | ೩೩,೪೮೦ | ೨೭,೬೫೦ | ೬,೪೫೫ | ೪,೭೬೬ | ೩೯,೯೩೫ | ೩೨,೪೧೬ |
| ೫೦–೫೪ | ೩೧,೪೦೭ | ೨೯,೧೦೦ | ೪,೮೫೦ | ೪,೨೮೯ | ೩೬,೨೫೭ | ೩೩,೩೮೯ |
| ೫೫–೫೯ | ೧೬,೮೧೦ | ೧೩,೮೧೦ | ೩,೦೯೦ | ೨,೩೭೦ | ೧೯,೯೦೦ | ೧೬,೧೮೦ |
| ೬೦–೬೪ | ೨೩,೨೦೫ | ೨೨,೯೯೦ | ೩,೫೧೦ | ೩,೧೦೪ | ೨೬,೭೧೫ | ೨೬,೦೯೪ |
| ೬೫–೬೯ | ೧೧,೨೮೦ | ೧೦,೧೫೬ | ೧,೮೨೦ | ೧,೩೬೯ | ೧೩,೧೦೦ | ೧೧,೫೨೫ |
| ೭೦ + | ೨೪,೪೩೦ | ೨೪,೪೨೦ | ೩,೨೪೦ | ೩,೪೭೦ | ೨೭,೬೭೦ | ೨೭,೮೯೦ |
| ವಯಸ್ಸನ್ನೇ ಸೂಚಿಸದವರು | ೨,೪೩೦ | ೧,೯೪೦ | ೪೬೦ | ೫೧೦ | ೨,೮೯೦ | ೨,೪೫೦ |

## ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

ಜನಗಣತಿಯಲ್ಲಿ ವೈವಾಹಿಕ ಸ್ಥಿತಿಯ ಆಧಾರದ ಮೇಲೆ ವಿವಾಹಿತರು, ಅವಿವಾಹಿತರು, ವಿಚ್ಛೇದನ ಪಡೆದವರು, ಬೇರೆಯಾದವರು, ವಿಧುರರು ಮತ್ತು ವಿಧವೆಯರು ಎಂಬುದಾಗಿ ವಿಂಗಡಿಸುತ್ತಾರೆ. ಈ ವಿಂಗಡಣೆಯಿಂದ ಬಾಲ್ಯ ವಿವಾಹ, ವಿಧವಾ ವಿವಾಹ ಮೊದಲಾದ ವೈವಾಹಿಕ ಸ್ಥಿತಿಗತಿಗಳನ್ನು ತಿಳಿಯಬಹುದಲ್ಲದೇ ಈ ಅಂಶಗಳು ಜಿಲ್ಲೆಯ ಸಾಮಾಜಿಕ ಜೀವನದ ಬಗ್ಗೆ ತಿಳಿಯಲೂ ನೆರವಾಗುತ್ತವೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಗ್ರಾಮೀಣ ಪ್ರದೇಶದಲ್ಲಿ ೧೦–೧೪ ವಯೋಗುಂಪಿನವರಲ್ಲಿ ಶೇ.೦.೫೨ರಷ್ಟು ಪುರುಷರು ಮತ್ತು ಶೇ.೧.೪೪ರಷ್ಟು ಸ್ತ್ರೀಯರು; ೨೫–೨೯ ವಯೋಗುಂಪಿನವರಲ್ಲಿ ಶೇ.೬೧.೮೮ ಪುರುಷರು ಮತ್ತು ಶೇ.೯೩.೭೯ ಸ್ತ್ರೀಯರು ಹಾಗೂ ೩೦–೩೪ ವಯೋಗುಂಪಿನವರಲ್ಲಿ ಶೇ. ೯೦.೫೨ ಪುರುಷರು ಮತ್ತು ಶೇ.೯೩.೧೧ ಸ್ತ್ರೀಯರು ವಿವಾಹಿತರಾಗಿದ್ದರು. ನಗರ ಪ್ರದೇಶಗಳಲ್ಲಿ ೧೦–೧೪ ವಯೋಗುಂಪಿನಲ್ಲಿ ಶೇ.೦.೯೦ ಪುರುಷರೂ, ಶೇ.೧.೦೬ ಸ್ತ್ರೀಯರೂ, ೨೫–೨೯ ವಯೋಗುಂಪಿನಲ್ಲಿ ಶೇ.೫೨.೭೫ ಪುರುಷರು ಮತ್ತು ಶೇ.೮೯.೭೬ ಸ್ತ್ರೀಯರು ಹಾಗೂ ೩೦–೩೪ ವಯೋಗುಂಪಿನಲ್ಲಿ ಶೇ.೫೧.೭೫ರಷ್ಟು ಪುರುಷರೂ, ಶೇ.೮೦.೨೯ರಷ್ಟು ಸ್ತ್ರೀಯರೂ ವಿವಾಹಿತರಾಗಿದ್ದರು. **ಕೋಷ್ಟಕ ೩.೧೦**ರಲ್ಲಿ ೧೯೯೧ರ ಜನಗಣತಿಯಂತೆ ವಿವಿಧ ವಯೋಗುಂಪುಗಳಿಗೆ ಅನುಗುಣವಾಗಿದ್ದ ವೈವಾಹಿಕ ಸ್ಥಿತಿಯನ್ನು ನೀಡಲಾಗಿದೆ. ಇಲ್ಲಿ ೦ ಇಂದ ೯ ರ ವಯೋಗುಂಪಿನವರನ್ನು ಅವಿವಾಹಿತರೆಂದು ಪರಿಗಣಿಸಲಾಗಿದೆ.

## ಗ್ರಾಮೀಣ ಜನತೆ

ಹಳ್ಳಿಗಳಲ್ಲಿ ವಾಸ ಮಾಡುವ ಜನರನ್ನು ಗ್ರಾಮೀಣ ಜನತೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯು ಪಟ್ಟಣ ಪ್ರದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಈ ಅಂಶವು ಮಂಡ್ಯ ಜಿಲ್ಲೆಗೂ ಅನ್ವಯವಾಗುತ್ತದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ಗ್ರಾಮೀಣ ಜನಸಂಖ್ಯೆಯು ೧೩,೭೭,೫೭೦ ಇದ್ದು, ಇದು ಒಟ್ಟಿನ ಜನಸಂಖ್ಯೆಯ ಶೇ.೮೩.೭೭ ರಷ್ಟಾಗಿರುತ್ತದೆ. ತಾಲೂಕುವಾರು ಅಂಕಿಅಂಶಗಳನ್ನು ಗಮನಿಸಿದರೆ, ಕೃಷ್ಣರಾಜಪೇಟೆ (ಶೇ.೯೧.೮೬) ಮತ್ತು ಮದ್ದೂರು (ಶೇ.೯೨.೧೮) ತಾಲೂಕುಗಳಲ್ಲಿ ಗ್ರಾಮೀಣ ಜನಸಂಖ್ಯೆಯು ಅಧಿಕವಾಗಿದೆ. ಶೇ.೮೦ ರಿಂದ ಶೇ.೯೦ ರವರೆಗಿನ ಗ್ರಾಮೀಣ ಜನಸಂಖ್ಯೆಯನ್ನು ಶ್ರೀರಂಗಪಟ್ಟಣ (ಶೇ.೮೦.೭೪), ಮಳವಳ್ಳಿ (ಶೇ.೮೫.೯೫), ಪಾಂಡವಪುರ (ಶೇ.೮೭.೯೮) ಮತ್ತು ನಾಗಮಂಗಲ (ಶೇ.೮೮.೬೫) ತಾಲೂಕುಗಳಲ್ಲಿ ಕಾಣಬಹುದಾಗಿದೆ. ಮಂಡ್ಯ ತಾಲೂಕಿನಲ್ಲಿ ಗ್ರಾಮೀಣ ಜನಸಂಖ್ಯೆಯ ಶೇಕಡಾಂಶವು ಅತ್ಯಂತ ಕಡಿಮೆಯಿರುವುದನ್ನು (ಶೇ.೬೮.೬೦)ಕಾಣಬಹುದು. ಜಿಲ್ಲೆಯಲ್ಲಿರುವ ೧,೪೭೮ ಹಳ್ಳಿಗಳಲ್ಲಿ ೧೧೩ ಹಳ್ಳಿಗಳು ಜನವಸತಿ ಇಲ್ಲದ (ಬೇಚರಾಕ್) ಹಳ್ಳಿಗಳಾಗಿದ್ದು, ಇವು ಒಟ್ಟಿನ ಹಳ್ಳಿಗಳಲ್ಲಿ ಶೇ.೭.೬೪ರಷ್ಟಾಗಿವೆ. ಈ ಮುಂದಿನ **ಕೋಷ್ಟಕ ೩.೧೧**ರಲ್ಲಿ ೧೯೯೧ರ ಜನಗಣತಿಯಂತೆ ವಿವಿಧ ಶ್ರೇಣಿಗಳ ಗ್ರಾಮೀಣ ಜನಸಂಖ್ಯೆ ಹಾಗೂ ಗ್ರಾಮಗಳ ಸಂಖ್ಯೆಯನ್ನು ತಾಲೂಕುವಾರು ನೀಡಲಾಗಿದೆ. ಕಂಸದಲ್ಲಿರುವ ಸಂಖ್ಯೆಗಳು ಗ್ರಾಮಗಳ ಒಟ್ಟು ಸಂಖ್ಯೆಯ ಶೇಕಡಾಂಶವನ್ನು ಸೂಚಿಸುತ್ತವೆ.

## ಕೋಷ್ಟಕ ೩.೧೦ ೧೯೯೧ರ ಜನಗಣತಿಯಂತೆ ಮಂಡ್ಯ ಜಿಲ್ಲೆಯ ಜನತೆಯ ವಯಸ್ಸು ಹಾಗೂ ವೈವಾಹಿಕ ಸ್ಥಿತಿ

| ವಯೋಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧುರ | ವಿಧವೆ | ವಿಚ್ಛೇದಿತರು/ ಬೇರೆಯಾದವರು | | ವೈವಾಹಿಕಸ್ಥಿತಿ ತಿಳಿಸದವರು | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೮,೩೭,೫೯೭ | ೮,೦೬,೭೭೭ | ೪,೭೨,೧೩೫ | ೩,೫೪,೬೦೬ | ೩,೫೬,೨೪೨ | ೩,೭೬,೪೬೩ | ೮,೬೬೦ | ೭೩,೦೪೮ | ೪೯೦ | ೨,೬೩೦ | ೭೦ | ೩೦ |
| ೦–೯ | ೧,೭೮,೯೬೫ | ೧,೭೬,೪೫೨ | ೧,೭೮,೯೬೫ | ೧,೭೬,೪೫೨ | – | – | – | – | – | – | – | – |
| ೧೦–೧೪ | ೧,೦೧,೮೮೦ | ೧,೦೨,೪೪೦ | ೧,೦೧,೨೯೦ | ೧,೦೧,೦೧೦ | ೫೯೦ | ೧,೪೧೦ | – | ೨೦ | – | – | – | – |
| ೧೫–೧೯ | ೯೦,೪೫೭ | ೮೨,೯೧೦ | ೮೯,೧೯೭ | ೫೭,೧೪೦ | ೧,೧೮೦ | ೨೫,೫೧೦ | ೬೦ | ೧೭೦ | ೧೦ | ೯೦ | ೧೦ | – |
| ೨೦–೨೪ | ೭೭,೭೭೬ | ೭೧,೯೬೮ | ೬೫,೭೦೩ | ೧೧,೬೯೦ | ೧೧,೯೩೩ | ೫೯,೩೪೮ | ೧೧೦ | ೫೯೦ | ೨೦ | ೩೪೦ | ೧೦ | – |
| ೨೫–೨೯ | ೬೩,೪೦೯ | ೭೨,೮೫೯ | ೨,೪೯೫ | ೩,೧೦೦ | ೩೮,೨೭೯ | ೬೭,೮೧೯ | ೧೬೦ | ೧೩೬೦ | ೨೦ | ೫೮೦ | – | – |
| ೩೦–೩೪ | ೫೪,೫೧೦ | ೫೫,೫೧೧ | ೫,೫೭೦ | ೧,೪೧೦ | ೪೮,೭೩೦ | ೫೧,೬೩೧ | ೧೨೦ | ೨೦೩೦ | ೮೦ | ೪೪೦ | ೧೦ | – |
| ೩೫–೩೯ | ೫೬,೪೯೯ | ೫೨,೦೦೪ | ೧,೪೩೦ | ೫೪೪ | ೫೪,೭೯೯ | ೪೭,೮೪೦ | ೧೮೦ | ೩೧೬೦ | ೯೦ | ೪೬೦ | – | – |
| ೪೦–೪೪ | ೪೭,೬೩೪ | ೪೨,೬೮೯ | ೭೫೦ | ೪೧೦ | ೪೬,೪೪೪ | ೩೬,೮೬೯ | ೩೫೦ | ೫೧೫೦ | ೯೦ | ೨೬೦ | – | – |
| ೪೫–೪೯ | ೩೯,೯೩೫ | ೩೨,೪೧೬ | ೩೫೦ | ೨೪೦ | ೩೯,೧೪೫ | ೨೭,೨೫೬ | ೩೭೦ | ೪೭೭೦ | ೭೦ | ೧೫೦ | – | – |
| ೫೦–೫೪ | ೩೬,೨೫೭ | ೩೩,೩೮೯ | ೩೩೦ | ೧೨೦ | ೩೫,೧೩೭ | ೨೩,೮೬೦ | ೭೭೦ | ೯,೨೫೯ | ೨೦ | ೧೫೦ | – | – |
| ೫೫–೫೯ | ೧೯,೯೦೦ | ೧೬,೧೮೦ | ೨೦೦ | ೮೦ | ೧೯,೦೯೦ | ೧೦,೫೭೦ | ೬೦೦ | ೫,೪೯೦ | – | ೪೦ | ೧೦ | – |
| ೬೦–೬೪ | ೨೬,೭೧೫ | ೨೬,೦೯೪ | ೧೯೦ | ೧೩೦ | ೨೪,೯೩೫ | ೧೨,೩೯೪ | ೧,೫೬೦ | ೧೩,೫೦೦ | ೩೦ | ೭೦ | – | – |
| ೬೫–೬೯ | ೧೩,೧೦೦ | ೧೧,೫೨೫ | ೬೦ | ೫೦ | ೧೨,೧೨೦ | ೪,೯೦೬ | ೯೨೦ | ೬,೫೩೯ | – | ೩೦ | – | – |
| ೭೦+ | ೨೭,೬೭೦ | ೨೭,೮೯೦ | ೫೧೦ | ೧೦೦ | ೨೩,೭೩೦ | ೬,೮೨೦ | ೩,೪೬೦ | ೨೦,೯೫೦ | ೬೦ | ೨೦ | ೧೦ | – |
| ವಯಸ್ಸು ತಿಳಿಸದವರು | ೨,೮೯೦ | ೨,೪೫೦ | ೨,೬೪೦ | ೨,೧೩೦ | ೨೩೦ | ೨೩೦ | – | ೬೦ | – | – | ೨೦ | ೩೦ |

ಆಕರ: Census of India 1991, series 11-Karnataka, P-IVA-C series, p-88-90

**ಕೋಷ್ಟಕ ೩.೧೧ ಗ್ರಾಮೀಣ ಜನಸಂಖ್ಯೆ**

| ತಾಲೂಕು | ಜನವಸತಿ ಇರುವ ಒಟ್ಟು ಗ್ರಾಮಗಳ ಸಂಖ್ಯೆ | ೨೦೦ ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳು | ೨೦೦–೪೯೯ | ೫೦೦–೧೯೯೯ | ೨೦೦೦–೪೯೯೯ | ೫೦೦೦–೯೯೯೯ | ೧೦,೦೦೦ ಕ್ಕಿಂತ ಹೆಚ್ಚು |
|---|---|---|---|---|---|---|---|
| ಕೃಷ್ಣರಾಜಪೇಟೆ | ೨೯೬ | ೩೯(೧೩.೧೮) | ೯೫(೩೨.೦೯) | ೧೫೧(೫೧.೦೧) | ೧೧(೩.೭೨) | – | – |
| ಮದ್ದೂರು | ೧೫೩ | ೨(೧.೩೧) | ೧೨(೭.೮೪) | ೯೧(೫೯.೪೮) | ೪೪(೨೮.೭೬) | ೩(೧.೯೬) | ೧(೦.೬೫) |
| ಮಳವಳ್ಳಿ | ೧೭೨ | ೧೫(೮.೭೨) | ೨೫(೧೪.೫೪) | ೯೮(೫೬.೯೮) | ೩೧(೧೮.೦೨) | ೩(೧.೭೪ | – |
| ಮಂಡ್ಯ | ೧೭೪ | ೧೧(೬.೩೨) | ೨೬(೧೪.೯೪) | ೯೫(೫೪.೬೦) | ೩೭(೨೧.೨೭) | ೫(೨.೭) | – |
| ನಾಗಮಂಗಲ | ೩೪೩ | ೭೯(೨೩.೦೩) | ೧೫೪(೪೪.೯೦) | ೧೦೭(೩೧.೨೦) | ೩(೦.೮೭) | – | – |
| ಪಾಂಡವಪುರ | ೧೪೦ | ೧೩(೯.೨೮) | ೩೫(೨೫.೦೦) | ೭೯(೫೬.೪೩) | ೧೧(೭.೮೬) | ೨(೧.೪೩) | – |
| ಶ್ರೀರಂಗಪಟ್ಟಣ | ೮೭ | ೧೦(೧೧.೪೯) | ೧೬(೧೮.೩೯) | ೪೪(೫೦.೫೮) | ೧೩(೧೪.೯೪) | ೪(೪.೬೦) | – |
| **ಜಿಲ್ಲೆಯ ಒಟ್ಟು** | **೧೩೬೫** | **೧೬೯(೧೨.೩೮)** | **೩೬೩(೨೬.೫೯)** | **೬೬೫(೪೮.೭೨)** | **೧೫೦(೧೦.೯೯)** | **೧೭(೧.೨೫)** | **೧(೦.೦೭)** |

## ಪಟ್ಟಣಗಳ ಜನಸಂಖ್ಯೆ ಹಾಗೂ ಬೆಳವಣಿಗೆ

ಪಟ್ಟಣ ಮತ್ತು ನಗರಗಳ ಬೆಳವಣಿಗೆಯನ್ನು ನಗರೀಕರಣ ಎಂದು ಕರೆಯುತ್ತಾರೆ. ನಗರೀಕರಣವು ಒಂದು ಪ್ರಮುಖ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುವ ಅಂಶವೂ ಆಗಿದೆ. ಪಟ್ಟಣವನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಜನಗಣತಿಯಲ್ಲಿ ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಅದರಂತೆ ಪಟ್ಟಣಗಳ ಕನಿಷ್ಠ ಜನಸಂಖ್ಯೆ ಐದು ಸಾವಿರ ಇರಬೇಕು. ಶೇ.೭೫ರಷ್ಟು ಜನ ಕೃಷಿಯೇತರ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀ.ಗೆ ಕನಿಷ್ಟ ೪೦೦ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ (ನೋಟಿಫೈಡ್) ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಗೆ ಬರುತ್ತವೆ. ಜಿಲ್ಲೆಯಲ್ಲಿ ೧೯೮೧ರ ಜನಗಣತಿ ಪ್ರಕಾರ ನಗರಗಳ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ.೧೫.೫೨ರಷ್ಟಿದ್ದು ೧೯೯೧ರಲ್ಲಿ ಇದು ಶೇ.೧೬.೨೩ಕ್ಕೆ ಹೆಚ್ಚಿತು. ಈ ಅವಧಿಯಲ್ಲಿ ಕೃಷ್ಣರಾಜಪೇಟೆಯಲ್ಲಿ ನಗರ ಜನಸಂಖ್ಯೆಯು ಅತ್ಯಧಿಕವಾಗಿ ಹೆಚ್ಚಿದ್ದು (ಶೇ.೬.೮೬ ರಿಂದ ಶೇ.೮.೧೪ಕ್ಕೆ) ಪಾಂಡವಪುರ ತಾಲೂಕಿನಲ್ಲಿ ಇದು ಶೇ.೧೨.೫೭ರಿಂದ ಶೇ.೧೨.೦೨ಕ್ಕೆ ಇಳಿದಿದೆ. ೧೯೮೧ರ ಜನಗಣತಿಯಲ್ಲಿದ್ದ ಹೊಂಗಹಳ್ಳಿ (ಪುರಸಭೆ ವ್ಯಾಪ್ತಿಯಲ್ಲಿಲ್ಲದ) ಪಟ್ಟಣವನ್ನು ೧೯೯೧ರಲ್ಲಿ ಪುನರ್ವರ್ಗೀಕರಿಸಿ ಅದರ ಬಹುಭಾಗವನ್ನು ಹೊಸದಾಗಿ ರಚಿಸಿದ ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶಕ್ಕೆ ಸೇರಿಸಲಾಗಿದೆ. ಪಟ್ಟಣಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆಯನ್ನು ಗಮನಿಸಿದರೆ, ೧೯೦೧ರಿಂದ ೧೯೧೧ರವರೆಗಿನ ದಶಕದಲ್ಲಿ ಪಟ್ಟಣಗಳ ಜನಸಂಖ್ಯೆಯು ರಾಜ್ಯದಲ್ಲಿ ಇಳಿಮುಖವಾಗಿದ್ದು ಅದು ಈ ಜಿಲ್ಲೆಗೂ ಅನ್ವಯವಾಗುತ್ತದೆ. ಜನಗಣತಿಯಂತೆ ನಡೆದ ಪಟ್ಟಣ ಪ್ರದೇಶಗಳ ಪುನರ್ವರ್ಗೀಕರಣವು ಇದಕ್ಕೆ ಕಾರಣವಿದ್ದಿರಬಹುದು. ಪಟ್ಟಣ ಪ್ರದೇಶಗಳ ಜನಸಂಖ್ಯೆಯು ಏರುಮುಖವಾಗಿದ್ದು, ೧೯೬೧ರಿಂದ ೧೯೮೧ರ ದಶಕಗಳಲ್ಲಿ ಇದು ತೀವ್ರವಾಗಿ ಹೆಚ್ಚಿರುವುದು ಕಂಡುಬಂದಿದೆ. ಶಿಕ್ಷಣ ಮತ್ತು ಔದ್ಯೋಗಿಕ ಪ್ರಗತಿ ಇದಕ್ಕೆ ಕಾರಣವಾಗಿರಬಹುದು. ೧೯೮೧ ರಿಂದ ೧೯೯೧ರ ದಶಕದಲ್ಲಿನ ಹೆಚ್ಚಳವು ಸ್ವಲ್ಪ ಇಳಿಮುಖವಾಗಿದ್ದು ಈ ದಶಕದಲ್ಲಿ ಉಂಟಾದ ಪಟ್ಟಣ ಪ್ರದೇಶಗಳ ಬದಲಾವಣೆ ಹಾಗೂ ಜನಸಂಖ್ಯಾ ಬೆಳವಣಿಗೆಯ ವ್ಯತ್ಯಾಸ ಇದಕ್ಕೆ ಕಾರಣವಾಗಿರಬಹುದು. ಈ ದಶಕದಲ್ಲಿ ರಾಜ್ಯದ ಪಟ್ಟಣ ಪ್ರದೇಶಗಳ

ಜನಸಂಖ್ಯಾ ಬೆಳವಣಿಗೆಯೂ ಕಡಿಮೆಯಾಗಿದೆ. **ಕೋಷ್ಟಕ ೩.೧೨**ರಲ್ಲಿ ೧೯೦೧ ರಿಂದ ೧೯೯೧ರವರೆಗಿನ ದಶಕಗಳಲ್ಲಿ ಜಿಲ್ಲೆಯಲ್ಲಿದ್ದ ಪಟ್ಟಣಗಳ ಸಂಖ್ಯೆ, ಜನಸಂಖ್ಯೆ, ಪಟ್ಟಣಗಳ ಜನಸಂಖ್ಯೆಯಲ್ಲಾದ ವ್ಯತ್ಯಾಸ ಹಾಗೂ ಈ ಬೆಳವಣಿಗೆಯ ಶತಾಂಶ ಮತ್ತು ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶದ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೩.೧೨ ಪಟ್ಟಣಗಳ ಜನಸಂಖ್ಯೆ**

| ದಶಕಗಳು | ಪಟ್ಟಣಗಳ ಸಂಖ್ಯೆ | ಪಟ್ಟಣಗಳ ಜನಸಂಖ್ಯೆ | ಪಟ್ಟಣಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆ | ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ | ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ |
|---|---|---|---|---|---|
| ೧೯೦೧ | ೧೦ | ೩೬೯೮೯ | – | – | – |
| ೧೯೧೧ | ೮ | ೨೯೮೭೯ | –೭೧೧೦ | –೧೯.೨೨ | –೪.೪೧ |
| ೧೯೨೧ | ೮ | ೩೭೭೩೪ | +೭೮೫೫ | +೨೬.೨೯ | –೧೭.೫೩ |
| ೧೯೩೧ | ೯ | ೩೯೯೭೯ | +೨೨೪೫ | +೫.೯೫ | +೨೧.೬೬ |
| ೧೯೪೧ | ೯ | ೫೦೬೩೮ | +೧೦೬೫೯ | +೨೬.೬೬ | +೨೩.೦೩ |
| ೧೯೫೧ | ೧೦ | ೭೭೭೭೬ | +೨೭೧೩೮ | +೫೩.೫೯ | +೬೧.೧೯ |
| ೧೯೬೧ | ೧೦ | ೧೦೦೦೭೨ | +೨೨೨೯೬ | +೨೮.೬೬ | +೧೮.೨೬ |
| ೧೯೭೧ | ೧೦ | ೧೫೮೭೮೮ | +೫೮೭೧೬ | +೫೮.೬೭ | +೩೫.೨೩ |
| ೧೯೮೧ | ೧೧ | ೨೨೦೦೨೫ | +೬೧೨೩೭ | +೩೮.೫೬ | +೫೦.೬೫ |
| ೧೯೯೧ | ೧೧ | ೨೬೬೮೦೪ | +೪೬೭೭೯ | +೨೧.೨೬ | +೨೯.೬೨ |

(೨೦೦೧ರ ಅಂಕಿಅಂಶಗಳು ಅಧಿಕೃತವಾಗಿ ಲಭ್ಯವಾಗಿರುವುದಿಲ್ಲ)

ಜಿಲ್ಲೆಯಲ್ಲಿನ ಪಟ್ಟಣ ಪ್ರದೇಶ ಹಾಗೂ ಅವುಗಳ ಜನಸಂಖ್ಯೆಯು ೧೯೯೧ರ ಜನಗಣತಿಯಂತೆ ಹೀಗಿವೆ: (ಕಂಸದಲ್ಲಿರುವ ಅಂಕೆಗಳು ಕ್ರಮವಾಗಿ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಯನ್ನು ಸೂಚಿಸುತ್ತವೆ): ಬೆಳಕವಾಡಿ ೭,೨೮೨ (೩,೬೫೬/೩,೬೨೬); ಬೆಳ್ಳೂರು ೬,೧೮೭ (೩,೨೩೯/೨,೯೪೮); ಕೃಷ್ಣರಾಜಪೇಟೆ ೧೭,೯೯೯ (೯,೪೨೧/೮,೫೭೮); ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶ ೭,೮೮೧ (೪,೦೬೨/೩,೮೧೯); ಮದ್ದೂರು ೨೨,೧೧೫ (೧೧,೩೨೯/೧೦,೭೮೬); ಮಳವಳ್ಳಿ ೨೯,೮೨೨ (೧೫,೩೩೬/೧೪,೪೮೬); ಮಂಡ್ಯ ೧,೨೦,೨೬೫ (೬೨,೫೪೪/೫೭,೭೨೧); ಮೇಲುಕೋಟೆ ೩,೨೫೪ (೧,೬೫೫/೧,೫೯೯); ನಾಗಮಂಗಲ ೧೪,೦೯೬ (೭,೩೩೧/೬,೭೬೫); ಪಾಂಡವಪುರ–೧೫,೯೯೮ (೮,೧೮೬/೭,೮೧೨) ಹಾಗೂ ಶ್ರೀರಂಗಪಟ್ಟಣ ೨೧,೯೦೫ (೧೧,೧೧೯/೧೦,೭೮೬).

## ಪರಿಶಿಷ್ಟ ಜಾತಿ

ಭಾರತೀಯ ಸಂವಿಧಾನದ ೩೪೧ನೇ ವಿಧಿಯಲ್ಲಿ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿ, ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟಜಾತಿಗಳೆಂದು ಕರೆಯಲಾಗಿದೆ. ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ರಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ವರ್ಗ (ಬುಡಕಟ್ಟು)ಗಳ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ೨,೨೬,೬೨೬ ಜನ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೧೩.೭೮ರಷ್ಟಾಗಿರುತ್ತದೆ. ಈ ಶೇಕಡಾಂಶವು ರಾಜ್ಯದ ಶೇಕಡಾಂಶಕ್ಕಿಂತ (ಶೇ.೧೬.೩೮) ಕಡಿಮೆಯಿದೆ. ಗ್ರಾಮೀಣ ಪ್ರದೇಶದಲ್ಲಿ ೧,೯೦,೫೫೧ ಜನ (ಶೇ.೧೩.೮೩)

ಹಾಗೂ ನಗರ ಪ್ರದೇಶದಲ್ಲಿ ೩೬,೦೭೫ ಜನ (ಶೇ.೧೩.೫೨) ಪರಿಶಿಷ್ಟ ಜಾತಿಗೆ ಸೇರಿದ್ದರು. ಜಿಲ್ಲೆಯ ೪೭೯ ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿಯ ಶೇಕಡಾಂಶವು ಅವರ ಒಟ್ಟಿನ ಜನಸಂಖ್ಯೆಯ ಶೇ.೧೦ಕ್ಕಿಂತ ಕಡಿಮೆ ಮತ್ತು ೧೪೩ ಹಳ್ಳಿಗಳಲ್ಲಿ ಶೇ.೩೦ಕ್ಕಿಂತ ಹೆಚ್ಚಾಗಿ ಇದ್ದುದು ಕಂಡುಬಂದಿದೆ. ಪಟ್ಟಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿಯ ಜನಸಂಖ್ಯೆಯು ಮಂಡ್ಯ (೧೫,೦೯೨) ಮತ್ತು ಮಳವಳ್ಳಿಯಲ್ಲಿ (೬,೭೭೭) ಅಧಿಕವಾಗಿದ್ದು, ಇದು ಕ್ರಮವಾಗಿ ಅವರ ಒಟ್ಟು ನಗರ ಪ್ರದೇಶದ ಜನಸಂಖ್ಯೆಯ ಶೇ.೪೧.೮೪ ಮತ್ತು ಶೇ.೧೮.೭೮ ಆಗಿದ್ದಿತು. ಮೇಲುಕೋಟೆಯಲ್ಲಿ (೧೮೪) ಕನಿಷ್ಠ ಶೇಕಡಾಂಶ (ಶೇ.೦.೫೧) ಇದ್ದಿತು. **ಕೋಷ್ಟಕ ೩.೧೩**ರಲ್ಲಿ ೧೯೮೧ ಮತ್ತು ೧೯೯೧ರ ಜನಗಣತಿಯ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿದ್ದ ಪರಿಶಿಷ್ಟಜಾತಿಗಳ ಜನಸಂಖ್ಯೆಯನ್ನು ಪುರುಷ ಮತ್ತು ಸ್ತ್ರೀ ವಿಭಾಗವಾಗಿ ತಾಲೂಕುವಾರು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೧೩ ಪರಿಶಿಷ್ಟ ಜಾತಿ**

| | | | ೧೯೮೧ | | | ೧೯೯೧ | |
|---|---|---|---|---|---|---|---|
| ತಾಲೂಕು | | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು |
| ಕೃಷ್ಣರಾಜಪೇಟೆ | ಗ್ರಾಮ | ೯,೬೦೨ | ೯,೭೩೧ | ೧೯,೩೩೩ | ೧೧,೭೨೪ | ೧೧,೮೯೬ | ೨೩,೬೨೦ |
| | ನಗರ | ೯೭೭ | ೯೪೭ | ೧,೯೨೪ | ೧,೪೦೨ | ೧,೩೩೫ | ೨,೭೩೭ |
| | ಒಟ್ಟು | ೧೦,೫೭೯ | ೧೦,೬೭೮ | ೨೧,೨೫೭ | ೧೩,೧೨೬ | ೧೩,೨೩೧ | ೨೬,೩೫೭ |
| ಮದ್ದೂರು | ಗ್ರಾಮ | ೧೪,೭೨೧ | ೧೩,೯೬೫ | ೨೮,೬೮೬ | ೧೭,೪೫೧ | ೧೬,೮೧೮ | ೩೪,೨೬೯ |
| | ನಗರ | ೧,೦೦೬ | ೧,೦೫೦ | ೨,೦೫೬ | ೧,೨೮೩ | ೧,೩೧೨ | ೨,೫೯೫ |
| | ಒಟ್ಟು | ೧೫,೭೨೭ | ೧೫,೦೧೫ | ೩೦,೭೪೨ | ೧೮,೭೩೪ | ೧೮,೧೩೦ | ೩೬,೮೬೪ |
| ಮಳವಳ್ಳಿ | ಗ್ರಾಮ | ೧೮,೮೫೭ | ೧೮,೦೧೭ | ೩೬,೮೭೪ | ೨೩,೦೮೭ | ೨೧,೭೭೮ | ೪೪,೮೬೫ |
| | ನಗರ | ೩,೨೨೨ | ೩,೨೬೩ | ೬,೪೮೫ | ೪,೧೫೯ | ೪,೦೫೩ | ೮,೨೧೨ |
| | ಒಟ್ಟು | ೨೨,೦೭೯ | ೨೧,೨೮೦ | ೪೩,೩೫೯ | ೨೭,೨೪೬ | ೨೫,೮೩೧ | ೫೩,೦೭೭ |
| ಮಂಡ್ಯ | ಗ್ರಾಮ | ೧೫,೦೮೭ | ೧೪,೫೪೦ | ೨೯,೬೨೭ | ೧೮,೧೨೩ | ೧೭,೪೯೭ | ೩೫,೬೨೦ |
| | ನಗರ | ೬,೧೭೦ | ೫,೫೨೯ | ೧೧,೬೯೯ | ೭,೯೯೫ | ೭,೦೯೭ | ೧೫,೦೯೨ |
| | ಒಟ್ಟು | ೨೧,೨೫೭ | ೨೦,೦೬೯ | ೪೧,೩೨೬ | ೨೬,೧೧೮ | ೨೪,೫೯೪ | ೫೦,೭೧೨ |
| ನಾಗಮಂಗಲ | ಗ್ರಾಮ | ೬,೬೨೬ | ೬೮೧೮ | ೧೩,೪೪೪ | ೮೩೦೬ | ೮,೫೦೬ | ೧೬,೮೧೨ |
| | ನಗರ | ೮೯೭ | ೭೪೦ | ೧,೬೩೭ | ೧,೨೩೬ | ೧,೧೧೩ | ೨,೩೪೯ |
| | ಒಟ್ಟು | ೭,೫೨೩ | ೭,೫೫೮ | ೧೫,೦೮೧ | ೯,೫೪೨ | ೯,೬೧೯ | ೧೯,೧೬೧ |
| ಪಾಂಡವಪುರ | ಗ್ರಾಮ | ೬,೧೫೪ | ೬,೦೯೮ | ೧೨,೨೫೨ | ೮,೧೩೬ | ೮,೧೦೭ | ೧೬,೨೪೩ |
| | ನಗರ | ೯೦೦ | ೭೪೦ | ೧,೬೪೦ | ೧,೧೩೨ | ೧,೦೩೭ | ೨,೧೬೯ |
| | ಒಟ್ಟು | ೭,೦೫೪ | ೬,೮೩೮ | ೧೩,೮೯೨ | ೯,೨೬೮ | ೯,೧೪೪ | ೧೮,೪೧೨ |
| ಶ್ರೀರಂಗಪಟ್ಟಣ | ಗ್ರಾಮ | ೭,೫೫೭ | ೭,೨೩೮ | ೧೪,೭೯೫ | ೯,೭೧೯ | ೯,೪೦೩ | ೧೯,೧೨೨ |
| | ನಗರ | ೧,೨೪೦ | ೧,೧೧೫ | ೨,೩೫೫ | ೮೬೦ | ೭೬೦ | ೧,೬೨೦ |
| | ಒಟ್ಟು | ೮,೭೯೭ | ೮,೩೫೩ | ೧೭,೧೫೦ | ೧೦,೫೭೯ | ೧೦,೧೬೩ | ೨೦,೭೪೨ |
| ಕೃಷ್ಣರಾಜಸಾಗರ | ಎನ್.ಎ.ಸಿ. | – | – | – | ೬೮೩ | ೬೧೮ | ೧೩೦೧ |
| **ಜಿಲ್ಲೆಯ ಒಟ್ಟು** | **ಗ್ರಾಮ** | **೭೮,೬೦೪** | **೭೬,೪೦೭** | **೧,೫೫,೦೧೧** | **೯೬,೫೪೬** | **೯೪,೦೦೫** | **೧,೯೦,೫೫೧** |
| | **ನಗರ** | **೧೪,೪೧೨** | **೧೩,೩೮೪** | **೨೭,೭೯೬** | **೧೮,೭೫೦** | **೧೭,೩೨೫** | **೩೬,೦೭೫** |
| | **ಒಟ್ಟು** | **೯೩,೦೧೬** | **೮೯,೭೯೧** | **೧,೮೨,೮೦೭** | **೧,೧೫,೨೯೬** | **೧,೧೧,೩೩೦** | **೨,೨೬,೬೨೬** |

## ಪರಿಶಿಷ್ಟ ವರ್ಗ (ಬುಡಕಟ್ಟು)

ಭಾರತ ಸಂವಿಧಾನದ ೩೪೨ನೇ ವಿಧಿಯಂತೆ ಪಟ್ಟಿ ಮಾಡಲಾದ ಜಾತಿ, ಉಪಜಾತಿ ಹಾಗೂ ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗಗಳೆಂದು ಕರೆಯಲಾಗಿದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ೧೧,೯೩೬

ಜನರು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದು, ಈ ಪೈಕಿ ೯,೪೮೫ ಜನರು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬಂದಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೦.೭೩ ಜನ ಪರಿಶಿಷ್ಟವರ್ಗಕ್ಕೆ ಸೇರಿದ್ದು (ಗ್ರಾಮೀಣ ಶೇ.೦.೬೯ ಮತ್ತು ಪಟ್ಟಣ ಪ್ರದೇಶ ಶೇ.೦.೯೨), ಇದು ರಾಜ್ಯದ ಶೇಕಡಾಂಶಕ್ಕಿಂತ (ಶೇ.೪.೨೬) ಕಡಿಮೆಯಿದೆ. ಜಿಲ್ಲೆಯ ೨೬೫ ಹಳ್ಳಿಗಳಲ್ಲಿ ಪರಿಶಿಷ್ಟವರ್ಗದ ಶೇಕಡಾಂಶವು, ಅವರ ಒಟ್ಟು ಜನಸಂಖ್ಯೆಗಿಂತ ಕಡಿಮೆ (ಶೇ.೧೫) ಮತ್ತು ಆರು ಹಳ್ಳಿಗಳಲ್ಲಿ ಹೆಚ್ಚಾಗಿ (ಶೇ.೨೫) ಕಂಡುಬಂದಿದೆ. ಪಟ್ಟಣ ಪ್ರದೇಶಗಳಲ್ಲಿನ ಪರಿಶಿಷ್ಟವರ್ಗದ ಜನಸಂಖ್ಯೆಯನ್ನು ಗಮನಿಸಿದರೆ, ಜಿಲ್ಲೆಯ ೧೦ ಪಟ್ಟಣ ಪ್ರದೇಶಗಳಲ್ಲಿ ಈ ವರ್ಗದವರಿದ್ದು, ಉಳಿದೊಂದು ಪಟ್ಟಣ ಪ್ರದೇಶದಲ್ಲಿ (ಬೆಳಕವಾಡಿ) ಕಂಡುಬಂದಿಲ್ಲ. ಮಂಡ್ಯನಗರ (೭೮೭) ಹಾಗೂ ಶ್ರೀರಂಗಪಟ್ಟಣದಲ್ಲಿ (೭೦೮) ಇವರ ಜನಸಂಖ್ಯೆಯು ಅಧಿಕವಾಗಿದ್ದು, ಇದು ಕ್ರಮವಾಗಿ ಜಿಲ್ಲೆಯ ಪಟ್ಟಣ ಪ್ರದೇಶಗಳಲ್ಲಿನ ಪರಿಶಿಷ್ಟವರ್ಗದ ಒಟ್ಟಿನ ಜನಸಂಖ್ಯೆಯ ಶೇ.೩೨.೧೯ ಮತ್ತು ಶೇ.೨೮.೮೯ ಆಗಿದೆ. ಪಟ್ಟಣ ಪ್ರದೇಶಗಳಲ್ಲಿನ ಜನಸಂಖ್ಯೆಯನ್ನೂ ಮತ್ತು ಅಲ್ಲಿಯ ಪರಿಶಿಷ್ಟವರ್ಗದ ಜನಸಂಖ್ಯೆಯನ್ನೂ ಗಮನಿಸಿದರೆ, ಇದು ಬೆಳ್ಳೂರು ಪಟ್ಟಣದಲ್ಲಿ (ಶೇ.೩.೫೭) ಗರಿಷ್ಠ ಮತ್ತು ಮಳವಳ್ಳಿಪಟ್ಟಣದಲ್ಲಿ (ಶೇ.೦.೨೩) ಕನಿಷ್ಟವಾಗಿ ಇದ್ದಿತು. **ಕೋಷ್ಟಕ ೩.೧೪**ರಲ್ಲಿ ೧೯೮೧ ಮತ್ತು ೧೯೯೧ನೇ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ಪರಿಶಿಷ್ಟ ವರ್ಗದ ಪುರುಷರು ಹಾಗೂ ಸ್ತ್ರೀಯರ ತಾಲೂಕುವಾರು ಜನಸಂಖ್ಯೆಯನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೧೪ ಪರಿಶಿಷ್ಟ ವರ್ಗ**

| | | | ೧೯೮೧ | | | ೧೯೯೧ | |
|---|---|---|---|---|---|---|---|
| ತಾಲೂಕು | | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು |
| ಕೃಷ್ಣರಾಜಪೇಟೆ | ಗ್ರಾಮ | ೧೪೮೦ | ೧೪೪೦ | ೨೯೨೦ | ೧೨೯೩ | ೧೨೬೫ | ೨೫೫೮ |
| | ನಗರ | ೨೧ | ೧೮ | ೩೯ | ೭೧ | ೪೭ | ೧೧೮ |
| | ಒಟ್ಟು | ೧೫೦೧ | ೧೪೫೮ | ೨೯೫೯ | ೧೩೬೪ | ೧೩೧೨ | ೨೬೭೬ |
| ಮದ್ದೂರು | ಗ್ರಾಮ | ೫೦೫ | ೪೮೪ | ೯೮೯ | ೬೬೯ | ೬೧೮ | ೧೨೮೭ |
| | ನಗರ | ೧೧೦ | ೯೭ | ೨೦೭ | ೧೨೨ | ೧೧೮ | ೨೪೦ |
| | ಒಟ್ಟು | ೬೧೫ | ೫೮೧ | ೧೧೯೬ | ೭೯೧ | ೭೩೬ | ೧೫೨೭ |
| ಮಳವಳ್ಳಿ | ಗ್ರಾಮ | ೧೫೧೨ | ೧೩೯೭ | ೨೯೦೯ | ೭೯೬ | ೭೬೮ | ೧೫೬೪ |
| | ನಗರ | ೭೯ | ೭೫ | ೧೫೪ | ೩೬ | ೩೩ | ೬೯ |
| | ಒಟ್ಟು | ೧೫೯೧ | ೧೪೭೨ | ೩೦೬೩ | ೮೩೨ | ೮೦೧ | ೧೬೩೩ |
| ಮಂಡ್ಯ | ಗ್ರಾಮ | ೮೧೪ | ೭೮೭ | ೧೬೦೧ | ೬೫೩ | ೫೮೭ | ೧೨೪೦ |
| | ನಗರ | ೨೭೬ | ೨೮೬ | ೫೬೨ | ೪೦೧ | ೩೮೬ | ೭೮೭ |
| | ಒಟ್ಟು | ೧೦೯೦ | ೧೦೭೩ | ೨೧೬೩ | ೧೦೫೪ | ೯೭೩ | ೨೦೨೭ |
| ನಾಗಮಂಗಲ | ಗ್ರಾಮ | ೨೯೯ | ೩೧೨ | ೬೧೧ | ೩೬೯ | ೩೫೮ | ೭೨೭ |
| | ನಗರ | ೮ | ೫ | ೧೩ | ೧೪೩ | ೧೩೦ | ೨೭೩ |
| | ಒಟ್ಟು | ೩೦೭ | ೩೧೭ | ೬೨೪ | ೫೧೨ | ೪೮೮ | ೧೦೦೦ |
| ಪಾಂಡವಪುರ | ಗ್ರಾಮ | ೨೦೧ | ೧೯೫ | ೩೯೬ | ೫೦೧ | ೫೪೧ | ೧೦೪೨ |
| | ನಗರ | ೭೬ | ೮೯ | ೧೬೫ | ೬೫ | ೬೫ | ೧೩೦ |
| | ಒಟ್ಟು | ೨೭೭ | ೨೮೪ | ೫೬೧ | ೫೬೬ | ೬೦೬ | ೧೧೭೨ |
| ಶ್ರೀರಂಗಪಟ್ಟಣ | ಗ್ರಾಮ | ೪೯೧ | ೪೪೩ | ೯೩೪ | ೫೭೦ | ೪೯೭ | ೧೦೬೭ |
| | ನಗರ | ೭೫ | ೭೮ | ೧೫೩ | ೩೭೦ | ೩೩೮ | ೭೦೮ |
| | ಒಟ್ಟು | ೫೬೬ | ೫೨೧ | ೧೦೮೭ | ೯೪೦ | ೮೩೫ | ೧೭೭೫ |
| ಕೃಷ್ಣರಾಜಸಾಗರ | ಎನ್.ಎ.ಸಿ. | – | – | – | ೭೦ | ೫೬ | ೧೨೬ |
| **ಜಿಲ್ಲೆಯ ಒಟ್ಟು** | **ಗ್ರಾಮ** | **೫೩೦೨** | **೫೦೫೮** | **೧೦೩೬೦** | **೪೮೫೧** | **೪೬೩೪** | **೯೪೮೫** |
| | **ನಗರ** | **೬೪೫** | **೬೪೮** | **೧೨೯೩** | **೧೨೭೮** | **೧೧೭೩** | **೨೪೫೧** |
| | **ಒಟ್ಟು** | **೫೯೪೭** | **೫೭೦೬** | **೧೧೬೫೩** | **೬೧೨೯** | **೫೮೦೭** | **೧೧೯೩೬** |

**ಅಂಗವಿಕಲರು**

ಕುರುಡರು, ಕಿವುಡರು ಮತ್ತು ಮೂಗರನ್ನು ೧೯೪೧ರ ಪೂರ್ವದಲ್ಲಿ ಗಣತಿ ಮಾಡಲಾಗುತ್ತಿದ್ದಿತು. ಆನಂತರದಲ್ಲಿ ಅದನ್ನು ನಿಲ್ಲಿಸಲಾಯಿತು. ಪುನಃ ೧೯೮೧ರ ಜನಗಣತಿಯಲ್ಲಿ ಅಂಗವಿಕಲರ ಗಣತಿಯನ್ನು ಮಾಡಲಾಗಿದೆ. ವಾಸದ ಮನೆಗಳ ಗಣತಿ ಸಮಯದಲ್ಲಿ ಅಂಗವಿಕಲರನ್ನು ಪ್ರತ್ಯೇಕವಾಗಿ ಗಣತಿ ಮಾಡಲಾಗುತ್ತದೆ. ಆದರೆ ಅನೇಕ ಅಂಗವಿಕಲರು ನಿರ್ವಸಿತರಾಗಿ ಭಿಕ್ಷುಕ ಸಮುದಾಯದಲ್ಲಿದ್ದು, ಜನಗಣತಿ ಮಾಡುವ ಸಮಯದಲ್ಲಿ ಅವರು ಮನೆಗಳಲ್ಲಿ ಅಲಭ್ಯವಾಗುವುದರಿಂದ ಈ ಅಂಕಿ ಅಂಶವು ನೈಜ ಚಿತ್ರವನ್ನು ಸ್ಪಷ್ಟವಾಗಿ ಕೊಡಲಾರದೆಂಬ ಅಭಿಪ್ರಾಯವಿದೆ.

ಜನಗಣತಿ ಇಲಾಖೆಯು ೨೦೦೧ರ ಅಂಗವಿಕಲರ ಅಂಕಿ-ಅಂಶಗಳನ್ನು ಇನ್ನೂ ಅಧಿಕೃತವಾಗಿ ಪ್ರಕಟಿಸಿರುವುದಿಲ್ಲವಾದ್ದರಿಂದ, ಪ್ರಸ್ತುತ, ಮಂಡ್ಯ ಜಿಲ್ಲಾ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ದಿನಾಂಕ ೩೦-೧೧-೨೦೦೨ ಕ್ಕೆ ಇದ್ದಂತೆ ಸಂಗ್ರಹಿಸಿ ಒದಗಿಸಿರುವ ಅಂಕಿ-ಅಂಶಗಳನ್ನು ಇಲ್ಲಿ ನೀಡಿದೆ.

**ಕೋಷ್ಟಕ ೩.೧೫ ಅಂಗವಿಕಲರು**

| | ಮಂಡ್ಯ | ಮದ್ದೂರು | ಮಳವಳ್ಳಿ | ಶ್ರೀರಂಗಪಟ್ಟಣ | ಪಾಂಡವಪುರ | ನಾಗಮಂಗಲ | ಕೆ.ಆರ್.ಪೇಟೆ | **ಒಟ್ಟು** |
|---|---|---|---|---|---|---|---|---|
| ದೈಹಿಕ ಅಂಗವಿಕಲರು | ೧೨೦೮ | ೧೧೪೫ | ೧೦೩೮ | ೬೫೭ | ೬೬೦ | ೭೦೮ | ೮೧೯ | **೬೨೩೫** |
| ಅಂಧರು | ೨೭೮ | ೨೭೨ | ೨೫೪ | ೧೫೫ | ೧೮೯ | ೧೬೯ | ೧೬೧ | **೧೪೭೮** |
| ಕಿವುಡು ಮತ್ತು | | | | | | | | |
| ಮೂಗರು | ೪೯೪ | ೭೫೬ | ೪೬೨ | ೨೨೨ | ೧೮೦ | ೨೨೧ | ೩೪೩ | **೨೬೭೮** |
| ಬುದ್ಧಿ ಮಾಂದ್ಯರು | ೨೬೭ | ೨೬೯ | ೩೨೨ | ೧೭೭ | ೨೧೩ | ೨೧೫ | ೨೩೨ | **೧೬೯೫** |
| ಕುಷ್ಠರೋಗ | | | | | | | | |
| ಅಂಗವಿಕಲರು | ೩೮ | – | ೭೪ | ೨೫ | ೩೫ | ೧೦ | ೧೨ | **೧೯೪** |
| ಬಹುವಿಧ | | | | | | | | |
| ಅಂಗವಿಕಲರು | ೨೨೯ | ೧೩೦ | ೨೫೪ | ೧೩೭ | ೧೨೬ | ೧೫೧ | ೧೨೪ | **೧೧೫೧** |
| **ಒಟ್ಟು** | **೨೫೧೪** | **೨೫೭೨** | **೨೪೦೪** | **೧೩೭೩** | **೧೪೦೩** | **೧೪೭೪** | **೧೬೯೧** | **೧೩೪೩೧** |

**ಭಾಷೆಗಳು**

ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ಶೇ.೯೧.೦೩ರಷ್ಟು ಜನ ಕನ್ನಡ ಮಾತನಾಡುವವರೂ ಶೇ.೩.೯೦೦ ಜನ ಉರ್ದು ಮಾತನಾಡುವವರೂ ಇದ್ದು, ಈ ಮುಂದಿನ **ಕೋಷ್ಟಕ ೩.೧೬**ರಲ್ಲಿ ವಿವಿಧ ಭಾಷೆಗಳನ್ನಾಡುವ ೫೦೦೦ಕ್ಕೂ ಹೆಚ್ಚು ಜನರಿರುವ ಕೆಲವೊಂದು ಭಾಷಾವಾರು ಜನಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ಮತ್ತು ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಶೇಕಡಾಂಶವನ್ನು ನೀಡಿದೆ.

## ಕೋಷ್ಟಕ ೩.೧೬ ಭಾಷೆಗಳು

| ಭಾಷೆ | ಗ್ರಾಮ | ನಗರ | ಒಟ್ಟು | ಜಿಲ್ಲೆಯ ಒಟ್ಟಿನ ಜನಸಂಖ್ಯೆಯ ಶೇಕಡಾಂಶ |
|---|---|---|---|---|
| ಕನ್ನಡ | ೧೩,೦೮,೦೦೬ | ೧,೮೮,೯೨೧ | ೧೪,೯೬,೯೨೭ | ೯೧.೦೩೦ |
| ಉರ್ದು | ೨೨,೫೨೩ | ೪೧,೫೨೫ | ೬೪,೦೪೮ | ೩.೯೦೦ |
| ತಮಿಳು | ೨೨,೫೧೬ | ೧೩,೯೨೮ | ೩೬,೪೪೪ | ೨.೨೨೦ |
| ತೆಲುಗು | ೧೬,೨೫೫ | ೧೧,೩೭೮ | ೨೭,೬೩೩ | ೧.೬೮೦ |
| ಮರಾಠಿ | ೪,೬೯೭ | ೩,೯೯೯ | ೮,೬೯೬ | ೦.೫೩೦ |
| ಹಿಂದಿ | ೧,೩೩೦ | ೩,೦೭೨ | ೪,೪೦೨ | ೦.೨೭೦ |
| ಮಲಯಾಳಂ | ೧,೧೩೭ | ೧,೮೨೫ | ೨,೯೬೨ | ೦.೧೮೦ |

### ಸಾಕ್ಷರತೆ

ಜನಗಣತಿಯ ಪ್ರಕಾರ ಯಾವುದೇ ಭಾಷೆಯಲ್ಲಿ ಓದಲು ಮತ್ತು ಬರೆಯಲು ಸಮರ್ಥನಾದ ವ್ಯಕ್ತಿಯನ್ನು ಅಕ್ಷರಸ್ಥನೆಂದು ಕರೆಯಲಾಗುತ್ತದೆ. ಇದಕ್ಕೆ ನಿರ್ದಿಷ್ಟವಾದ ಶೈಕ್ಷಣಿಕ ಅರ್ಹತೆ ಅಥವಾ ಸಾಂಪ್ರದಾಯಿಕ ಶಿಕ್ಷಣದ ಅಗತ್ಯವಿರುವುದಿಲ್ಲ. ವಯೋಮಿತಿ ೦–೬ ವರ್ಷದ ವರ್ಗಕ್ಕೆ ಸೇರಿದ ಎಲ್ಲಾ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಲಾಗಿದೆ. ಜಿಲ್ಲೆಯ ಸಾಕ್ಷರತೆಯು ಶೇ.೪೮.೧೫ ಆಗಿದ್ದು, ಪುರುಷರಲ್ಲಿ ಶೇ.೫೯.೧೮ ಮತ್ತು ಸ್ತ್ರೀಯರಲ್ಲಿ ಶೇ.೩೬.೭೦ ಇದ್ದಿತು. ಇದು ರಾಜ್ಯದ ಶೇಕಡಾಂಶಕ್ಕಿಂತ (ಪುರುಷರು ಶೇ.೬೭.೨೬, ಸ್ತ್ರೀಯರು–ಶೇ.೪೪.೩೪ ಮತ್ತು ಒಟ್ಟಾರೆ ಶೇ.೫೬.೦೪) ಕಡಿಮೆಯಾಗಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಶೇ.೫೫.೮೯ ಪುರುಷರು ಮತ್ತು ಶೇ.೩೨.೧೨ ಸ್ತ್ರೀಯರು ಅಕ್ಷರಸ್ಥರಾಗಿದ್ದರೆ, ಪಟ್ಟಣ ಪ್ರದೇಶಗಳಲ್ಲಿ ಶೇ.೭೫.೭೫ ಪುರುಷರೂ, ಶೇ.೬೦.೬೬ ಸ್ತ್ರೀಯರೂ ಅಕ್ಷರಸ್ಥರಾಗಿದ್ದರು. ೨೦೦೧ರ (ತಾತ್ಕಾಲಿಕ) ಜನಗಣತಿಯಂತೆ ಜಿಲ್ಲೆಯ ಸಾಕ್ಷರತೆ ಶೇ.೬೧.೨೧ (ಪುರುಷರಲ್ಲಿ ೭೦.೭೧ ಮತ್ತು ಸ್ತ್ರೀಯರಲ್ಲಿ ೫೧.೬೨) ಆಗಿದ್ದಿತು. ರಾಜ್ಯದಲ್ಲಿ ಈ ಶೇಕಡಾಂಶವು ೬೭.೦೪ (ಪುರುಷರು :೭೬.೨೯ ಮತ್ತು ಸ್ತ್ರೀಯರು: ೫೭.೪೫) ಆಗಿದ್ದಿತು (ವಿವರಕ್ಕೆ ಅಧ್ಯಾಯ:೧೫ ಶಿಕ್ಷಣ ನೋಡಿ).

### ಧರ್ಮಗಳು

ಈ ಜಿಲ್ಲೆಯಲ್ಲಿ ಪ್ರಮುಖವಾಗಿ ಹಿಂದೂ, ಇಸ್ಲಾಂ, ಜೈನ ಹಾಗೂ ಕ್ರೈಸ್ತಧರ್ಮಗಳು ಆಚರಣೆಯಲ್ಲಿವೆ. **ಕೋಷ್ಟಕ ೩.೧೭**ರಲ್ಲಿ ೧೯೯೧ರ ಜನಗಣತಿಯಂತೆ ಜಿಲ್ಲೆಯ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿನ ವಿವಿಧ ಧರ್ಮೀಯರ ಸಂಖ್ಯೆಯನ್ನು ಹಾಗೂ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶತಾಂಶವನ್ನೂ (ರಾಜ್ಯದ ಶತಾಂಶದೊಂದಿಗೆ) ನೀಡಲಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದರೆ ಜಿಲ್ಲೆಯ ಹಿಂದೂಗಳ ಒಟ್ಟು ಜನಸಂಖ್ಯೆಯ ಶತಾಂಶವು ರಾಜ್ಯದ ಶತಾಂಶಕ್ಕಿಂತ ಅಧಿಕವಾಗಿರುವುದು ಕಂಡುಬಂದಿದೆ.

**ಕೋಷ್ಟಕ ೩.೧೭ ಧರ್ಮಗಳು**

| ಧರ್ಮಗಳು | ಗ್ರಾಮಾಂತರ | ನಗರ | ಒಟ್ಟು | ಶತಾಂಶ : ಜಿಲ್ಲೆ | ರಾಜ್ಯ |
|---|---|---|---|---|---|
| ಹಿಂದೂಗಳು | ೧೩,೫೧,೧೬೧ | ೨,೧೬,೮೫೪ | ೧೫,೬೮,೦೧೫ | ೯೫.೩೬ | ೮೫.೪೫ |
| ಮುಸಲ್ಮಾನರು | ೨೨,೭೬೧ | ೪೨,೫೪೦ | ೬೫,೩೦೧ | ೩.೯೭ | ೧೧.೬೪ |
| ಕ್ರೈಸ್ತರು | ೨,೩೨೮ | ೪,೪೩೪ | ೬.೭೬೨ | ೦.೪೧ | ೧.೯೧ |
| ಜೈನರು | ೩೭೪ | ೨,೭೧೩ | ೩,೦೮೭ | ೦.೧೯ | ೦.೭೩ |
| ಬೌದ್ಧರು | ೯೮ | ೧೯ | ೧೧೭ | ೦.೦೧ | ೦.೧೬ |
| ಶೀಖರು | ೬೮ | ೮೯ | ೧೫೭ | ೦.೦೧ | ೦.೦೨ |
| ಇತರ ಧರ್ಮೀಯರು | ೮ | ೧೨ | ೨೦ | ಅತಿ ಕನಿಷ್ಠ | ೦.೦೧ |
| ಧರ್ಮವನ್ನು ಸೂಚಿಸದವರು | ೭೭೨ | ೧೪೩ | ೯೧೫ | ೦.೦೫ | ೦.೦೮ |

**ಹಿಂದೂ ಧರ್ಮ :** ಹಿಂದೂ ಧರ್ಮವು ಅನೇಕ ಪಂಥಗಳನ್ನೂ ನಂಬಿಕೆಗಳನ್ನೂ ಒಳಗೊಂಡಿದೆ. ಹಿಂದೂಗಳಲ್ಲಿ ಅನೇಕ ಜಾತಿ ಹಾಗೂ ಉಪಜಾತಿಗಳು ಕಂಡುಬಂದರೂ, ಅವರ ಸಾಮಾಜಿಕ ಮೌಲ್ಯ, ನಂಬಿಕೆ, ಪವಿತ್ರ ಗ್ರಂಥ ಹಾಗೂ ಪವಿತ್ರ ಯಾತ್ರಾಸ್ಥಳಗಳು ಒಂದೇ ಆಗಿರುತ್ತವೆ. ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಹಿಂದೂಗಳ ಪವಿತ್ರ ಗ್ರಂಥಗಳಾಗಿದ್ದು ಇವು ಅವರ ಐಕ್ಯತಾ ಶಕ್ತಿಗಳಾಗಿವೆ ಎನ್ನಬಹುದು. ಬ್ರಹ್ಮ, ವಿಷ್ಣು, ಮಹೇಶ್ವರರನ್ನೂ ಅವರ ಅವತಾರಗಳನ್ನೂ, ಪರಿವಾರ ದೇವ-ದೇವತೆಗಳನ್ನೂ ಹಿಂದೂಗಳು ಪೂಜಿಸುತ್ತಾರೆ. ಹಿಂದೂ ದೇವಾಲಯಗಳಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಮಾಡುವಾಗ ಅರ್ಚಕರು ಸಂಸ್ಕೃತ ಶ್ಲೋಕಗಳನ್ನೂ ವೇದ ಮಂತ್ರಗಳನ್ನೂ ಪಠಿಸುತ್ತಾರೆ.

ಹಿಂದೂಗಳ ತಾತ್ವಿಕ ಚಿಂತನೆಯಲ್ಲಿ ಶಂಕರಾಚಾರ್ಯರ (ಕ್ರಿ.ಶ.೭೮೮-೮೨೦) ಅದ್ವೈತ; ರಾಮಾನುಜರ (ಕ್ರಿ.ಶ.೧೦೧೭-೧೧೩೭) ವಿಶಿಷ್ಟಾದ್ವೈತ; ಬಸವಣ್ಣನವರ (ಕ್ರಿ.ಶ.೧೧೩೧-೧೧೬೭) ಶಕ್ತಿ ವಿಶಿಷ್ಟಾದ್ವೈತ ಹಾಗೂ ಮಧ್ವಾಚಾರ್ಯರ (ಕ್ರಿ.ಶ.೧೨೩೮-೧೩೧೭) ದ್ವೈತ ಸಿದ್ಧಾಂತಗಳು ಮುಖ್ಯವಾದವು.

**ಶೈವಮತ :** ಮಂಡ್ಯ ಜಿಲ್ಲೆಯು ಬಹಳ ಹಿಂದಿನಿಂದಲೂ ಶೈವಮತಕ್ಕೆ ಆಶ್ರಯ ನೀಡಿ ಅದರ ಬೆಳವಣಿಗೆಗೆ ಉತ್ತೇಜಕವಾಗಿರುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದಾಗಿದೆ: ಹೊಯ್ಸಳಪ್ರಭು ಬಿಟ್ಟಿದೇವ (ವಿಷ್ಣುವರ್ಧನ)ನು ಕಿಕ್ಕೇರಿಯ ಬ್ರಹ್ಮೇಶ್ವರ ದೇವರಿಗೆ ೧೫ ಖಂಡುಗ ಗದ್ದೆ ಹಾಗೂ ಬೂವನಹಳ್ಳಿಯನ್ನು ಬ್ರಹ್ಮರಾಶಿ ಪಂಡಿತರಿಗೆ ದತ್ತಿ ನೀಡಿದನೆಂದು ತಿಳಿದುಬರುತ್ತದೆ (ಕಿಕ್ಕೇರಿ ಶಾಸನ ಕ್ರಿ.ಶ.೧೧೯೫-೯೬). ಶ್ರೀರಂಗಪಟ್ಟಣದ ಗಂಗಾಧರೇಶ್ವರನ ದೇವಾಲಯಕ್ಕೆ ಕಾರಗನಹಳ್ಳಿಯ ನಂಜೆಯರಾಜನು ಭೂಮಿ ದಾನ ಮಾಡಿದನೆಂದೂ, ಶಿವರಾಮ ಪಂಡಿತನೆಂಬ ಬ್ರಾಹ್ಮಣನು ತಾಂಡವೇಶ್ವರ ಪ್ರತಿಮೆಯನ್ನು ಹಾಗೂ ಮೈಸೂರಿನ ದಳವಾಯಿ ನಂಜರಾಜೈಯ್ಯನು ಪಂಚಲೋಹದ ದಕ್ಷಿಣಾಮೂರ್ತಿ ವಿಗ್ರಹವನ್ನು ಕಾಣಿಕೆಯಾಗಿ ಅರ್ಪಿಸಿದನೆಂದೂ ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯದ ಶಾಸನಗಳು ದಾಖಲಿಸಿವೆ. ಬೆಳತೂರಿನ ರಾಮನಾಥ ದೇವರಿಗೆ ತಿಪ್ಪಯ್ಯನು ಭೂದಾನ ನೀಡಿದ್ದನ್ನು ರಾಂಪುರದ ೧೪೫೯ರ ಶಾಸನ ತಿಳಿಸುತ್ತದೆ. ಮಂಡ್ಯ ತಾಲೂಕು ಬಸರಾಳಿನ ಹರಿಹರ ದಂಡನಾಯಕನು ತನ್ನ ತಂದೆ-ತಾಯಿಯ ಹೆಸರಿನಲ್ಲಿ, ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿ ದೇವರಿಗೆ ನಿತ್ಯ ನೈವೇದ್ಯಕ್ಕಾಗಿ ಭೂದಾನ ನೀಡಿರುವುದೂ ಬಸರಾಳಿನ ೧೨೩೪ರ ಶಾಸನದಿಂದ ವೇದ್ಯವಾಗುತ್ತದೆ. ಮದ್ದೂರು ತಾಲೂಕಿನ ೧೧೩೨ರ ಶಾಸನವೊಂದರಲ್ಲಿ ವೈದ್ಯನಾಥಪುರದ ವೈದ್ಯನಾಥೇಶ್ವರನಿಗೆ, ಆ ಸ್ಥಳದ ಆದಪ್ಪ ಹಾಗೂ ರಾಜಪ್ಪ ಎಂಬುವರ

ಕೋರಿಕೆ ಮೇರೆಗೆ, ಹೊಯ್ಸಳಪ್ರಭು ವಿಷ್ಣುವರ್ಧನನು ಹಿಂದೆ ಗಂಗದೊರೆ ಶಿವಮಾರಸಿಂಹನು ಸರ್ವಮಾನ್ಯವಾಗಿ ನೀಡಿದ್ದ ಹಲಗೂರು ಗ್ರಾಮವನ್ನು ಆ ದೇವರ ನೈವೇದ್ಯ, ನಂದಾದೀವಿಗೆ ಹಾಗೂ ಪರಿಚಾರಿಕೆ ಸೇವೆಗಳಿಗೆಂದು ಪುನಃ ಒಪ್ಪಿಸಿಕೊಟ್ಟನೆಂದು ಉಲ್ಲೇಖಿಸಲಾಗಿದೆ. ಮಂಡಲಸ್ವಾಮಿ ಎಂಬಾತನು ಬೆಳ್ಳೂರಿನಲ್ಲಿ ಮಂಡಲೇಶ್ವರ ದೇವಾಲಯ ಹಾಗೂ ಕೆರೆಯನ್ನು ನಿರ್ಮಿಸಿ ಭೂದಾನ ನೀಡಿದ್ದನ್ನು ಬೆಳ್ಳೂರಿನ ೧೧೯೯ರ ಶಾಸನ ತಿಳಿಸುತ್ತದೆ. ಶೌರ್ಯಪ್ರತಾಪಕ್ಕೆ ಹೆಸರಾಗಿದ್ದ ಹೊಯ್ಸಳ ಮಹಾಸಾಮಂತ ಕಾಚೀದೇವನು ಬೆಳ್ಳೂರಿನಲ್ಲಿ ಸಿಂಧೇಶ್ವರ ಮತ್ತಿತರ ದೇವರುಗಳನ್ನು ಪ್ರತಿಷ್ಠಾಪಿಸಿ, ಭೂದಾನ ನೀಡಿರುವುದನ್ನು ಬೆಳ್ಳೂರಿನ ೧೨೨೫ರ ಶಾಸನ ದಾಖಲಿಸಿದೆ. ಬಿಜ್ಜವರದ ತೋಟದಯ್ಯ ಎಂಬಾತ ಬೆಳಕವಾಡಿಯಲ್ಲಿ ಸ್ವಯಂಭೂದೇವರ ಗುಡಿ ಕಟ್ಟಿಸಿದ್ದನ್ನೂ ಮತ್ತು ಚನ್ನಪ್ಪ ಎಂಬುವನು ಕುಂದೂರಿನ ಮೂಲಸ್ಥಾನ ದೇವರ ಗಂಧದ ಸೇವೆಗಾಗಿ ಎರಡು ಪಣ ನೀಡಿರುವುದನ್ನೂ ಮಳವಳ್ಳಿ ತಾಲೂಕಿನ ೧೬೦೩ರ ಬೆಳಕವಾಡಿ ಹಾಗೂ ಕುಂದೂರಿನ ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ, ಪಾಂಡವಪುರದ ಭೀಮ ಮತ್ತು ಕುಂತಿ ಬೆಟ್ಟಗಳ ನಡುವೆ ಇರುವ ಮಲ್ಲಿಕಾರ್ಜುನ, ಹೊಸಬೂದನೂರಿನ ಕಾಶಿವಿಶ್ವೇಶ್ವರ, ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯ ಮರುಳೇಶ್ವರ, ಮಹದೇವಪುರದ ಕಾಶಿವಿಶ್ವನಾಥ ದೇವಾಲಯ, ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳಿನ ಕೊಂಕಣೇಶ್ವರ ಮತ್ತು ಸಂತೇಬಾಚಹಳ್ಳಿಯ ಮಹಾಲಿಂಗೇಶ್ವರ ದೇವಾಲಯಗಳೂ ಸೇರಿದಂತೆ ಅನೇಕ ಪುರಾತನ ಶೈವಾಲಯಗಳನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಾಣಬಹುದಾಗಿದೆ.

ಅದ್ವೈತ ಮತವನ್ನು ಪ್ರತಿಪಾದಿಸಿದ ಶಂಕರಾಚಾರ್ಯರು ಶಿವ, ವಿಷ್ಣು, ಶಕ್ತಿ, ಕಾರ್ತಿಕೇಯ, ಗಣಪತಿ, ಬ್ರಹ್ಮ ಅಥವಾ ಸೂರ್ಯ ಇವರಲ್ಲಿ ಯಾರನ್ನಾದರೂ ಆರಾಧಿಸಬಹುದೆಂದು ತಮ್ಮ ಅನುಯಾಯಿಗಳಿಗೆ ಉಪದೇಶ ಮಾಡಿದರು. ಬ್ರಹ್ಮ ಅಥವಾ ಸರ್ವಶಕ್ತಿ ಒಬ್ಬನೇ ನಿತ್ಯ, ಉಳಿದ ಪ್ರಪಂಚವೆಲ್ಲ ಮಿಥ್ಯ; ಭ್ರಾಂತಿಕಾರಕ (ಮಾಯೆ) ಎಂಬುದೇ ಅವರ ಉಪದೇಶದ ಸಾರವಾಗಿದೆ.

**ಶಕ್ತಿ ವಿಶಿಷ್ಟಾದ್ವೈತ :** ವೀರಶೈವ ತತ್ವಗಳು ಪ್ರತಿಪಾದಿಸುವ ದರ್ಶನವನ್ನೇ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಎಂದು ಕರೆಯಲಾಗಿದೆ. ಈ ಸಿದ್ಧಾಂತದ ಪ್ರಕಾರ ಜಗತ್ತಿನಲ್ಲಿ ಶಿವನೊಬ್ಬನೇ ಸತ್ಯ; ಅವನ ಶಕ್ತಿಯಿಂದಲೇ ಈ ವಿಶ್ವದ ಸಕಲ ಚರಾಚರಗಳೂ ವಿಕಾಸಗೊಂಡಿವೆ. ಆ ಪರಶಿವನು ಶಕ್ತಿಯುಕ್ತನಾದವನಷ್ಟೇ ಅಲ್ಲದೆ ಸದಾ ಸಗುಣನೂ ಹೌದು (ಶಂಕರಾಚಾರ್ಯ ಹೇಳುವ ಬ್ರಹ್ಮನಂತೆ ನಿರ್ಗುಣನಲ್ಲ); ಲೀಲೆಗಾಗಿ ಶಿವನು ಬೇಕೆಂದಾಗ ತನ್ನ ಶಕ್ತಿಯನ್ನು ವಿಕಾಸಗೊಳಿಸುತ್ತಾನೆ, ಇಲ್ಲವೇ, ಸಂಕೀರ್ಣಗೊಳಿಸಿ ಅಚಲನಾಗಿ, ನಿರಂಜನನಾಗಿ ಉಳಿಯುತ್ತಾನೆ. ಎಲ್ಲವೂ ಶಿವಮಯವಾದುದರಿಂದ ಇಲ್ಲಿ ಯಾವುದೂ ಮಾಯೆಯಲ್ಲ (ಆದರೆ ಅದ್ವೈತದಲ್ಲಿ ಮಾಯೆಯು ಅನಿತ್ಯವಾದದ್ದು).

ವೀರಶೈವದಲ್ಲಿ ಲಿಂಗ ಎಂದರೆ ಶಿವ, ಅಂಗ ಎಂದರೆ ಜೀವ. ಜೀವನು ಕ್ರಿಯಾಶೀಲನಾಗಿ ಆಸ್ಥೆಯಿಂದ ಶಿವನ ಲೀಲಾಕಾರ್ಯದಲ್ಲಿ ಭಾಗಿಯಾಗಬೇಕು. ಸನ್ಯಾಸದ ಹೆಸರಿನಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ಲಕ್ಷಿಸುವಂತಿಲ್ಲ. ಶಕ್ತಿಯಿಂದ ರೂಪಿತವಾದ ಈ ವಿಶ್ವದ ಕ್ರಿಯಾ ವಿಧಾನವನ್ನರಿತು ಕೊನೆಗೆ ಅದನ್ನು ಜಯಿಸಿ ನಿಲ್ಲಬೇಕು. ತನ್ನ ಶಕ್ತಿಗೆ ಅಧೀನನಾಗಿ ತಾನೇ ಜೀವನಾಗಿರುವ ಶಿವನು ತನ್ನ ಶಕ್ತಿಯನ್ನು ಜಯಿಸಿ ತನ್ನ ವಿಭುತ್ವವನ್ನು ತಾನರಿಯುವವನು **(ವಿಷಯ ವಿಶ್ವಕೋಶ ಪು ೧೩೫೫).**

ಮಂಡ್ಯ ತಾಲೂಕಿನ ಮರಡಿಪುರದ ೧೩೦೫ರ ಶಿಲಾಶಾಸನವು ನವಿಲೆಯ ಜಡೆಯ ಶಂಕರದೇವ, ಸಿರಿಯಾಳ, ದಾಸಿಮಯ್ಯ, ದಸವರ್ಮ, ಉದ್ಭಟ, ನಂಬಿ, ಕುಂಬಾರಗುಂಡ ಅಂಡಾಳ್, ಕರಿಕಾಲಚೋಳ, ಭೋಗದೇವ, ಕೇಶಿರಾಜ ದಂಡನಾಯಕ, ಸುರಿಗೆಯ ಚಲ್ವಡರಾಯ, ಸಂಗನಬಸವಯ್ಯ, ಅನಿಮಿತಿ ಕೇಸವರಾಜ, ಜಗದೇವ ದಂಡನಾಯ್ಕ, ಏಕಾಂತದ ರಾಮಯ್ಯ, ಸೊನ್ನಲಿಗೆ ರಾಮಯ್ಯ, ಹುಲಿಗೆರೆ ಪೊನ್ನಯ್ಯ, ನೆಲುವಿಗೆ ಶಾಂತಯ್ಯ

ಮುಂತಾದ ವೀರಶೈವ ಶರಣರನ್ನು ದಾಖಲಿಸಿದ್ದು, ಇದೊಂದು ವಿಶಿಷ್ಟ ದಾಖಲೆಯಾಗಿದೆ. ಮಳವಳ್ಳಿ ತಾಲೂಕಿನ ೧೪೪೦ರ ಶಾಸನದಲ್ಲಿ ಬಸವರಾಜದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದ್ದು, ಅದು ಬಸವಣ್ಣನ ಪ್ರತಿಮೆಯಾದಲ್ಲಿ ಅಪೂರ್ವ ನಿದರ್ಶನವಾಗುತ್ತದೆ.

**ಮೈಲಾರ ಪಂಥ :** ಕರ್ನಾಟಕದ ಶೈವರು ಮೈಲಾರ ಮತ್ತು ಅವನ ಪತ್ನಿ ಮಾಳಚಿ (ಮಾಳವ್ವ)ಯನ್ನು ಆರಾಧಿಸುವ ಮೂಲಕ ಸ್ಥಾಪಿಸಿದ ಮೈಲಾರ ಪಂಥ ಇಂದಿಗೂ ಜನಪ್ರಿಯವಾಗಿ ಉಳಿದಿದೆ. ಕುದುರೆಯ ಮೇಲೆ ಕತ್ತಿ ಹಿಡಿದು ಕುಳಿತಿರುವ ಮೈಲಾರ (ಮಲ್ಲಯ್ಯ) ರೂಪದ ಶಿವನನ್ನು ಇವರು ಆರಾಧಿಸುತ್ತಾರೆ. ಈ ಮೈಲಾರ ದೇವನನ್ನು ಖಂಡೋಬ ಹಾಗೂ ಮಾರ್ತಾಂಡ ಎಂದೂ ಕರೆಯುವುದುಂಟು. ಜಿಲ್ಲೆಯಲ್ಲಿಯೂ ಈ ಪಂಥದವರಿದ್ದು ನಾಗಮಂಗಲ ತಾಲೂಕಿನ ಬೆಳ್ಳೂರು ಮತ್ತು ಮೈಲಾರಪಟ್ಟಣ ಮೈಲಾರನ ಪ್ರಮುಖ ಆರಾಧನಾ ಕ್ಷೇತ್ರಗಳಾಗಿವೆ. ಪ್ರತಿ ವರ್ಷ ಕಾಮನ ಹುಣ್ಣಿಮೆಗೆ ಮುಂಚಿತವಾಗಿ ಅಥವಾ ಅಂದೇ ಬರುವ ಮಂಗಳವಾರದ ದಿನ ಮೈಲಾರ ಪಟ್ಟಣದಲ್ಲಿ ಸುಮಾರು ಐದು ದಿನಗಳ ಜಾತ್ರೆ ನಡೆಯುತ್ತದೆ.

**ಶ್ರೀವೈಷ್ಣವ ಮತ :** ಇತರ ಜಿಲ್ಲೆಗಳಲ್ಲಿ ಶ್ರೀವೈಷ್ಣವ ಪಂಥದ ಅನುಯಾಯಿಗಳು ಕಂಡುಬಂದರೂ ಮಂಡ್ಯಜಿಲ್ಲೆಯಲ್ಲಿ ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲದೆ ಶ್ರೀರಾಮಾನುಜಾಚಾರ್ಯರ ಕಾರ್ಯಕ್ಷೇತ್ರವೂ ಆಗಿದ್ದ ಇದೇ ಜಿಲ್ಲೆಯ ಮೇಲುಕೋಟೆಯು ಶ್ರೀವೈಷ್ಣವರಿಗೆ ಪವಿತ್ರ ಕ್ಷೇತ್ರವೂ ಆಗಿದೆ. ಈ ಪಂಥದವರ ಬಗೆಗೆ ಇತರ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ವಿಶೇಷ ಉಲ್ಲೇಖ ಮಾಡುವ ಅವಕಾಶವಿಲ್ಲವಾದುದರಿಂದ, ಇವರ ಪರಂಪರೆ ಆಚಾರ–ವಿಚಾರಗಳ ಬಗೆಗೆ ಇಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

ಹಿಂದೂ ಧರ್ಮದ ಒಂದು ಶಾಖೆಯಾದ ಶ್ರೀವೈಷ್ಣವ ಮತದ ಉಗಮವನ್ನು ಕ್ರಿಸ್ತಶಕೆಯ ಪೂರ್ವದಿಂದಲೇ ಗುರುತಿಸಬಹುದೆಂದು ಹಯವದನರಾಯರು ತಮ್ಮ ಮೈಸೂರು ಗ್ಯಾಸೆಟಿಯರ್‌ನಲ್ಲಿ ದಾಖಲಿಸಿದ್ದಾರೆ. ಈ ಮತದ ಮೂಲ ಭಾಗವತ ಪಂಥವಾದರೂ ತಮಿಳುನಾಡಿನ ಹನ್ನೆರಡು ಮಂದಿ ಆಳ್ವಾರರು ಇದನ್ನು ವ್ಯವಸ್ಥಿತವಾಗಿ ಪ್ರತಿಪಾದಿಸಿದರು. ಆಳ್ವಾರ್ ಎಂಬ ಪದಕ್ಕೆ ಆಳುವವರು ಎಂಬ ಸಾಮಾನ್ಯ ಅರ್ಥ ಇರುವುದಾದರೂ, ದಯಾಸಾಗರನಾದ ಭಗವಂತನ ಅನಂತಾನಂತ ಗುಣಾತಿಶಯಗಳ ಧ್ಯಾನದ ಅಗಾಧ ಮಡುವಿನಲ್ಲಿ ಆಳವಾಗಿ ಮುಳುಗಿರತಕ್ಕವರು ಎಂದು ವಿಶೇಷವಾಗಿ ಅರ್ಥೈಸಲಾಗಿದೆ. ಆಳ್ವಾರರ ಕಾಲವನ್ನು ಸುಮಾರು ಕ್ರಿ.ಶ. ೪ರಿಂದ ೯ನೇ ಶತಮಾನದವರೆಗೆ ಗುರುತಿಸಲಾಗಿದೆಯಾದರೂ ಆನಂತರದ ಕಾಲದಲ್ಲಿ ಇವರು ರಚಿಸಿದ ಹಾಗೂ ಪರಂಪರಾಗನುತವಾಗಿ ಉಳಿದು ಬಂದಿದ್ದ ಇವರ ಭಕ್ತಿ ಗೀತೆಗಳ ಸಂಗ್ರಹ ಕಾರ್ಯವನ್ನು ಯಮುನಾಚಾರ್ಯ, ನಾಥಮುನಿ, ರಾಮಾನುಜಾಚಾರ್ಯ ಮುಂತಾದವರು ಕೈಗೊಂಡರು. ಇವರಲ್ಲಿ ರಾಮಾನುಜಾಚಾರ್ಯರು ಗೀತೆಗಳ ಸಂಗ್ರಹ ಕಾರ್ಯ, ವ್ಯಾಖ್ಯಾನ ರಚನೆ, ಪ್ರಸರಣ ಕಾರ್ಯಗಳಲ್ಲದೆ ಸಾಮಾಜಿಕವಾಗಿ ಹಲವಾರು ಜನಪರ ಕಾರ್ಯಗಳನ್ನು ಮಾಡಿ ಹೆಚ್ಚು ಪ್ರಸಿದ್ಧರಾಗಿದ್ದಾರೆ. ತಮಿಳುನಾಡಿನ ಶ್ರೀಪೆರಂಬೂರಿನಲ್ಲಿ ಆಸೂರಿ ಕೇಶವ ಪೆರುಮಾಳ್ ಹಾಗೂ ಭೂಮಿ ಪಿರಾಟ್ಟಿ (ಕಾಂತಿಮತಿ) ದಂಪತಿಗಳಿಗೆ (ಸು.೧೦೧೭ರಲ್ಲಿ) ಮಗನಾಗಿ ಜನಿಸಿ, ಕಂಚಿ, ಶ್ರೀರಂಗ, ತಿರುಮಲೈ ಹಾಗೂ ಮೇಲುಕೋಟೆಗಳಲ್ಲಿ ಸಂಚರಿಸಿ, ೧೨೦ ವರ್ಷಗಳಷ್ಟು ದೀರ್ಘಕಾಲ ಜೀವಿಸಿದ್ದ ಅವರು ಶ್ರೀವೈಷ್ಣವ ಧರ್ಮಕ್ಕೆ ಒಂದು ನಿಶ್ಚಿತವಾದ ಕಟ್ಟು–ಕಟ್ಟಳೆ, ಸಂಕೇತ ಮತ್ತು ಧಾರ್ಮಿಕ ವಿಧಿ–ವಿಧಾನಗಳನ್ನು ನೀಡಿದರು. ಪೂರ್ವಿಕರಿಂದ ಸಂಗ್ರಹಿಸಿದ ಭಕ್ತಿ ಗೀತೆಗಳಲ್ಲಿ ೪,೦೦೦ ಗೀತೆಗಳನ್ನು (ನಾಲಾಯಿರ ಪ್ರಬಂಧ) ಒಂದು ನಿಶ್ಚಿತ ಕ್ರಮದಲ್ಲಿ ಜೋಡಿಸಿ ಧಾರ್ಮಿಕ ಆಚರಣೆಗಳಲ್ಲಿ ಅವುಗಳನ್ನು ಪಠಿಸುವುದೂ ಸೇರಿದಂತೆ ಇತರ ನಿಯಮಗಳನ್ನೂ ರೂಪಿಸಿ (ನಿಯಮನಪ್ಪಡಿ) ಶ್ರೀವೈಷ್ಣವ ಧರ್ಮಕ್ಕೆ ಒಂದು ಪ್ರಬಲವಾದ ಅಡಿಪಾಯವನ್ನು ಹಾಕಿದರು.

ರಾಮಾನುಜರು ಕರ್ನಾಟಕಕ್ಕೆ ಬಂದು ಶ್ರೀವೈಷ್ಣವ ಧರ್ಮವನ್ನು ಪ್ರಚಾರ ಮಾಡುವ ವೇಳೆಗೆ ಇಲ್ಲಿ ವೈಷ್ಣವ ಮತದ ಆರಂಭದ ಕುರುಹುಗಳು ಕಂಡುಬಂದಿದ್ದವು. ಹಲವಾರು ರಾಜ ಮನೆತನಗಳು ವೈಷ್ಣವ ಮತಕ್ಕೆ, ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹವನ್ನೂ ನೀಡಿದ್ದವು. ಹನ್ನೊಂದನೆಯ ಶತಮಾನದ ಅಂತ್ಯದಲ್ಲಿ ತಮಿಳುನಾಡಿನಲ್ಲಿ ಶ್ರೀವೈಷ್ಣವ ಧರ್ಮಕ್ಕೆ ಚ್ಯುತಿ ಬರುವಂತಹ ಘಟನೆ ನಡೆಯಿತೆಂದೂ ಅದರಿಂದಾಗಿ (ಇಳಿವಯಸ್ಸಿನ) ರಾಮಾನುಜರು ಅಲ್ಲಿಂದ ಹೊರಟು ಮಂಡ್ಯ ಜಿಲ್ಲೆಯ ತೊಂಡನೂರಿಗೆ ಬಂದರೆಂದೂ ತಿಳಿದುಬರುತ್ತದೆ. ಹೊಯ್ಸಳ ವಿಷ್ಣುವರ್ಧನ(ಬಿಟ್ಟಿದೇವ)ನ ಮಗಳಿಗೆ ಬಂದಿದ್ದ ಖಾಯಿಲೆಯನ್ನು ವಾಸಿಮಾಡಿ, ಆತನನ್ನು ವೈಷ್ಣವ ಮತಕ್ಕೆ ಪರಿವರ್ತಿಸಿ, ಬಳಿಕ ಮೇಲುಕೋಟೆಯಲ್ಲಿ ಚೆಲುವನಾರಾಯಣ ವಿಗ್ರಹವನ್ನು ಪ್ರತಿಷ್ಠಾಪಿಸಿದರೆಂದೂ ಹೇಳಲಾಗುತ್ತದೆ. ದೆಹಲಿಯ ಮುಸ್ಲಿಂ ದೊರೆಯ ಮಗಳ ಬಳಿಯಿದ್ದ ಉತ್ಸವ ಮೂರ್ತಿಯನ್ನು ತಂದದ್ದಲ್ಲದೆ, ಶ್ರೀವೈಷ್ಣವರು ಹಣೆಯ ಮೇಲೆ ಧರಿಸುವ ಬಿಳಿಯ ನಾಮದ ಮಣ್ಣನ್ನು (ತಿರುಮಣ್) ಮೇಲುಕೋಟೆಯ ಬಳಿಯಲ್ಲಿ ಅನ್ವೇಷಿಸಿದರೆಂದೂ ಗುರು ಪರಂಪರೆ, ಪ್ರಭನ್ನಾಮೃತಂ ಮೊದಲಾದ ಗ್ರಂಥಗಳಿಂದ ತಿಳಿದುಬರುತ್ತದೆ. ಇದನ್ನು ಮೇಲುಕೋಟೆಯ ನಾಮದಕಟ್ಟೆ ತೋಟದಲ್ಲಿರುವ ೧೩೧೯ರ ಶಾಸನದಲ್ಲಿ ಕಂಡುಬರುವ 'ಎಂಬೆರುಮಾನರು (ಅಂದರೆ ರಾಮಾನುಜರು) ಕಂಡ ತಿರಿಮಂಣ್ಣ ಸಾಮ್ಯ' ಎಂಬ ಉಲ್ಲೇಖ ಪುಷ್ಠೀಕರಿಸುತ್ತದೆ. ಹಾಗೆಯೇ, ಶಿಷ್ಯಪರಂಪರೆಯನ್ನು ರೂಪಿಸಿ ಶ್ರೀವೈಷ್ಣವ ಮತ ಪ್ರಚಾರಕ್ಕೆ ಅನುವು ಮಾಡಿ, ಶ್ರೀರಂಗಕ್ಕೆ ಮರಳಿದರೆಂದೂ ಆನಂತರದ ದಾಖಲೆಗಳು ತಿಳಿಸುತ್ತವೆ. ಇದನ್ನು ಮೇಲುಕೋಟೆಯ ನಾಲ್ಕಾರು ಶಾಸನಗಳಲ್ಲಿ ಕಂಡುಬರುವ ಶ್ರೀ ರಾಮಾನುಜಾಚಾರ್ಯರ ಪ್ರಥಮ ಶಿಷ್ಯರಾದ 'ಆಯಿವತಿಬ್ಬರು ಶ್ರೀವೈಷ್ಣವರು' ಎಂಬ ಉಲ್ಲೇಖ ಖಚಿತಪಡಿಸುತ್ತದೆ.

ವಿಜಯನಗರ ಹಾಗೂ ಮೈಸೂರು ಅರಸರು ಶ್ರೀವೈಷ್ಣವ ಮತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದುದರಿಂದ, ಮೇಲುಕೋಟೆ, ಮಂಡ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಮತದ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆನಿಲ್ಲುವಂತಾಯಿತು. ಶ್ರೀವೈಷ್ಣವರಲ್ಲಿ ಮಂಡಯಂ, ಹೆಬ್ಬಾರ್, ಕೀಳ್ನಾಟ್, ಹೆಮ್ಮಿಗೆ, ಮರದೂರ್, ಶ್ರೀಚೋಳೀಯ, ಆಂಧ್ರ ಶ್ರೀವೈಷ್ಣವ ಮೊದಲಾದ ಪಂಗಡಗಳಿದ್ದು, ಅದರಲ್ಲಿ ಮಂಡಯಂ ಶ್ರೀವೈಷ್ಣವರನ್ನು ಮಂಡ್ಯ ಜಿಲ್ಲೆಯ ಮೂಲದವರೆಂದು ಗುರುತಿಸಲಾಗುತ್ತಿದೆ. ವಿಷ್ಣುಪಾರಮ್ಯವನ್ನು ಒಪ್ಪಿಕೊಂಡು, ಶ್ರೀವೈಷ್ಣವ ಲಾಂಛನವನ್ನು (ತ್ರಿಪುಂಡ್ರನಾಮ) ಧರಿಸಿ, ಮತೀಯ ಆಚರಣೆಯನ್ನು ಅನುಸರಿಸುವ ಯಾವುದೇ ವರ್ಗದವರನ್ನು ಶ್ರೀವೈಷ್ಣವರೆಂದು ಗುರುತಿಸಲಾಗಿದೆ. ಸಮಾಜದ ಅನೇಕ ಜಾತಿಗಳು ಶ್ರೀವೈಷ್ಣವ ಧರ್ಮದಿಂದ ಹೊರಗಿದ್ದೂ ಶ್ರೀವೈಷ್ಣವ ಸಂಪ್ರದಾಯವನ್ನು ಅನುಸರಿಸುತ್ತಿರುವುದನ್ನು ಈಗಲೂ ಕಾಣಬಹುದಾಗಿದ್ದು, ಬಾಹುಸಾರ ನಯನ ಕ್ಷತ್ರಿಯ (ಕ್ಷೌರಿಕ), ದೇವಾಂಗ, ಮಡಿವಾಳ, ಒಕ್ಕಲಿಗ, ಈಡಿಗ ಮುಂತಾದ ಜಾತಿ–ವರ್ಗದವರನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಶ್ರೀರಂಗಪಟ್ಟಣ ಸಮೀಪದ ಕಿರಂಗೂರಿನ ಅನಂತಾಚಾರ್ಯ ಸ್ವಾಮಿಗಳು, ಶ್ರೀರಂಗಂನಲ್ಲಿದ್ದ ರಾಮಾನುಜಾಚಾರ್ಯರ ಶಿಷ್ಯರಾಗಬಯಸಿ ಅಲ್ಲಿಗೆ ೧೦೫೩ರಲ್ಲಿ ಹೋದರಾದರೂ ಕೆಲಕಾಲಾನಂತರ ರಾಮಾನುಜರ ಆದೇಶದಂತೆ ತಿರುಪತಿಯ ದೇವರ ಕೈಂಕರ್ಯಕ್ಕೆ ನಿಯೋಜಿತರಾಗಿ, ಅಲ್ಲಿಯ ರಾಜನಿಂದ ಪಡೆದ ಇಳೆಯ ಮಂಡಯ ಎಂಬಲ್ಲಿ ವಾಸವಾಗಿದ್ದು ತಿರುಪತಿಯ ದೇವರ ಸೇವೆ ಮಾಡುತ್ತಿದ್ದರು. ಇವರು ತಿರುಮಲೈ ಆನಂದಾಣ್ ಪಿಳ್ಳೈ ಹಾಗೂ ಅನಂತಪುರುಷಾರ್ಯರೆಂದೂ ಪ್ರಸಿದ್ಧರಾಗಿದ್ದರು. ಶತಮಾನಗಳ ಆನಂತರ ಇವರ ವಂಶಸ್ಥರಾದ ಗೋವಿಂದರಾಜ ಉಡ್ಯೈಯರ್ ಅವರು ವಿಜಯನಗರ ಸಾಮ್ರಾಜ್ಯಕ್ಕೆ ಬಂದು ಧರ್ಮ ಸಂವಾದದಲ್ಲಿ ಜಯಶೀಲರಾಗಿ, ಅರಸ ಕೃಷ್ಣದೇವರಾಯನಿಂದ ೧೫೧೬ ರಲ್ಲಿ ಇಂದಿನ ಮಂಡ್ಯವನ್ನು (ಮಂಡೆಯ) ಅದಕ್ಕೆ ಸೇರಿದ ಕೆಲವು ಉಪ ಗ್ರಾಮಗಳೊಂದಿಗೆ ಬಹುಮಾನವಾಗಿ ಪಡೆದು ಅಗ್ರಹಾರವನ್ನಾಗಿಸಿ ಕೃಷ್ಣರಾಯಪುರವೆಂದು ನಾಮಕರಣ ಮಾಡಿ, ತಮ್ಮ ಪರಿವಾರದೊಂದಿಗೆ ಅಲ್ಲೇ ನೆಲೆಸಿದರೆಂದು ಮಂಡ್ಯದ ೧೫೧೬ರ ತಾಮ್ರ ಶಾಸನಗಳಿಂದ ತಿಳಿದು ಬರುತ್ತದೆ.

ಇವರೊಂದಿಗೆ ಶ್ರೀವತ್ಸ, ವಾಧೂಲ, ಭಾರದ್ವಾಜ ಇತ್ಯಾದಿ ೧೩ ಗೋತ್ರಗಳ ಕುಟುಂಬಗಳು ಬಂದಿದ್ದು, ಅವರಲ್ಲಿ ಶಠಮರ್ಷಣ ಗೋತ್ರದವರ ವಿನಾ ಉಳಿದವರು ಇಂದಿಗೂ ಕಂಡುಬರುತ್ತಾರೆ. ಅಲ್ಲದೆ, ಗೋವಿಂದರಾಜರು ಈ ಎಲ್ಲ ಗೋತ್ರದವರಿಗೆ ಪರಸ್ಪರ ವಿವಾಹ, ಸಹಪಂಕ್ತಿಭೋಜನ ಇತ್ಯಾದಿ ನಿಬಂಧಗಳನ್ನು ಕಲ್ಪಿಸಿದರಲ್ಲದೆ, ದಾನ ಬಂದ ಗ್ರಾಮಗಳನ್ನು ವಿಭಾಗಿಸಿ ಸ್ಥಳೀಯ ಶಾನುಭೋಗರೇ ಅಲ್ಲದೆ ಇನ್ನೂ ಕೆಲವರಿಗೆ ಹಂಚಿಕೊಟ್ಟರು. ಶ್ರೀ ಉಭಯವೇದಾಂತ ತಿರುಮಲೈ ಗೋವಿಂದರಾಜ ಉಡೈಯರ್‌ರವರ ನಿಬಂಧನೆಗಳನ್ನು ಪರಿಪಾಲಿಸಿಕೊಂಡು ಬಂದವರೇ ಮಂಡಯಾದ ಶ್ರೀವೈಷ್ಣವರೆಂದಾದರು. ಗೋವಿಂದರಾಜರ ಶಿಷ್ಯವರ್ಗದವರಲ್ಲಿ ಆಸೂರಿ, ಗೋಮಠಂ ಇತ್ಯಾದಿ ಹನ್ನೊಂದು ವರ್ಗಗಳು ಮಂಡಯ ಪಂಗಡಕ್ಕೆ ಸೇರಿದವರೆಂದು ಬಿ.ಎಲ್.ರೈಸ್ ಅವರು ಅಭಿಪ್ರಾಯಪಟ್ಟಿದ್ದಾರೆ. ಕಾಲಕ್ರಮೇಣ ಈ ಪಂಗಡದವರಲ್ಲಿ ಕೆಲವರು ಮೇಲುಕೋಟೆಯೂ ಸೇರಿದಂತೆ ಮೈಸೂರು, ಶ್ರೀರಂಗಪಟ್ಟಣ, ರಾಮಾನುಜಪುರ (ಮಳೂರು ಬಳಿಯ ಮಾಚೇನಹಳ್ಳಿ), ಮಂಡ್ಯದ ಕೊಪ್ಪಲು, ಮಳೂರು, ಹೊನ್ನಲಗೆರೆ, ಬೆಂಗಳೂರು, ಚೆನ್ನೈ (ತಿರುವಳ್ಳಿಕೇಣಿ) ಮೊದಲಾದ ಕಡೆಗಳಲ್ಲಷ್ಟೇ ಅಲ್ಲದೆ ಈಚೆಗೆ ವಿದೇಶಗಳಲ್ಲೂ ನೆಲೆಸಿರುವುದಾಗಿ ತಿಳಿದುಬರುತ್ತದೆ. ಸುಮಾರು ೧೯೫೦ ರಲ್ಲಿ ಮಾಡಿದ ಈ ಸಮುದಾಯದ ಪಟ್ಟಿಯಂತೆ ಇರುವ ಗೋತ್ರಗಳಲ್ಲಿ ಸುಮಾರು ೧೪೦ ಪ್ರಧಾನ ಕುಟುಂಬಗಳನ್ನು, ಸುಮಾರು ೨೮೦೦ ಮಹಾಜನರನ್ನು ಗುರುತಿಸಲಾಗಿದೆ. ಶ್ರೀವೈಷ್ಣವರ ಆಚಾರಗಳ ರಕ್ಷಣೆಗಾಗಿ 'ಮಂಡಯಂ ಶ್ರೀವೈಷ್ಣವ ಸಭಾ' ಎಂಬ ಸಂಸ್ಥೆಯನ್ನು ೧೮೭೦ರಲ್ಲಿ ಆನಂದಾಳ್ವಾರ್‌ಸ್ವಾಮಿಗಳ ವಂಶದವರು ಆರಂಭಿಸಿದರು. ಮೇಲುಕೋಟೆಯವರಲ್ಲದೆ ನಾಗಮಂಗಲ, ಕುಣಿಗಲ್, ಹರವು, ಕ್ಯಾತನಹಳ್ಳಿ, ಶ್ರೀರಂಗಪಟ್ಟಣ, ತಿರುಮಕೂಡಲು ನರಸೀಪುರ, ಮುತ್ತಗೆರೆ ಮುಂತಾದ ಮೇಲ್ನಾಡಿನ ಶ್ರೀವೈಷ್ಣವರೂ ಇದಕ್ಕೆ ಸೇರಿ ಕ್ರಮೇಣ ಮಂಡಯಂ ಶ್ರೀವೈಷ್ಣವರೆನಿಸಿಕೊಂಡರು.

ಶ್ರೀವೈಷ್ಣವರು ತಯಾರಿಸುವ ಸಕ್ಕರೆಪೊಂಗಲ್, ಕ್ಷೀರಾನ್ನ, ಪುಳಿಯೋಗರೆ, ತುಣಿತೇಂಗೊಳ್, ಸಜ್ಜಪ್ಪ ಮುಂತಾದ ತಿನಿಸುಗಳು ಪ್ರಸಿದ್ಧವಾದವು. ಮೇಲುಕೋಟೆಯಲ್ಲಿ ತಯಾರಾಗುವ ದೊಡ್ಡ ಅಳತೆಯ ಜರಿ ಪಂಚೆ ಉಟ್ಟು, ಶಲ್ಯ ಹೊದೆಯುವುದು ಈ ಪುರುಷರ ಸಾಂಪ್ರದಾಯಿಕ ಉಡುಪಾಗಿದೆ. ಹಣೆಯ ಮೇಲೆ ಕೆಂಪು ನಾಮದ ಅಕ್ಕಪಕ್ಕದಲ್ಲಿ ಎರಡು ಬಿಳಿ ನಾಮಗಳು ಹಾಗೂ ಮೂಗಿನ ಮೇಲೆ ಒಂದು ಬೊಟ್ಟಿರುವಂಥ ನಾಮವನ್ನು ಇವರು ಧರಿಸುತ್ತಾರೆ. ಕಟ್ಟುನಿಟ್ಟಾಗಿ ಧಾರ್ಮಿಕತೆಯನ್ನು ಪರಿಪಾಲನೆ ಮಾಡುವ ಶ್ರೀವೈಷ್ಣವರು, ಹಣೆಯಲ್ಲಷ್ಟೇ ಅಲ್ಲದೆ ಕೊರಳು, ಭುಜ, ವಕ್ಷಸ್ಥಳ, ಉದರ ಹಾಗೂ ಬೆನ್ನುಗಳ ಮೇಲೂ ತ್ರಿಪುಂಡ್ರವನ್ನು ಧರಿಸುತ್ತಾರೆ. ವಿವಾಹ ಕಾಲದಲ್ಲಿ ವಧುವು ಧರಿಸುವ ಚೌಕಾಕಾರದ ಮಾಂಗಲ್ಯವು ಚಪ್ಪಟೆಯಾಗಿದ್ದು ಅದರ ಮೇಲೆ ಶಂಖ-ಚಕ್ರ ಸಹಿತ ತ್ರಿಪುಂಡ್ರದ ಲಾಂಛನವಿರುತ್ತದೆ. ಸಂಕ್ರಾಂತಿಯ ಮರುದಿನ ಕನೂಹಬ್ಬದಂದು ಮೇಲುಕೋಟೆಯಲ್ಲಿ ನಡೆಯುವ ಅಂಗಮಣಿ ಉತ್ಸವವು ಶ್ರೀದೇವಿ, ಭೂದೇವಿಯರನ್ನೇ ಹೆಣ್ಣು ಮಕ್ಕಳಂತೆ 'ತವರಿ'ಗೆ ಆಹ್ವಾನಿಸಿ ಮಡಿಲುದುಂಬಿ ಸತ್ಕರಿಸುವ ಆಶಯದ್ದಾಗಿದೆ. ಈ ದೇವಿಯರ ಉತ್ಸವ ಮೂರ್ತಿಗಳು ಬಹು ಹಿಂದೆ ದೊರೆತ ಬಾವಿಗಳ ಮನೆಗಳನ್ನೇ ಆ ದೇವಿಯರ ತವರೆಂದು ಭಾವಿಸಿ ಊರವರು ತಂದು ಕೊಡುವ ಕಾಣಿಕೆಗಳನ್ನು ಆ ಮನೆಗಳ ಹಜಾರದಲ್ಲಿ ಅಳವಡಿಸಿ, ಅಲಂಕರಿಸುತ್ತಾರೆ. ಈ ಸಿಂಗಾರವೇ ಅಂಗಮಣಿ. ಸಂಜೆಗೆ ಶ್ರೀವೈಷ್ಣವ ಮಹಿಳೆಯರಂತೆ ಅಲಂಕೃತರಾದ ಆ ದೇವಿಯರ ಉತ್ಸವ ಮೂರ್ತಿಗಳನ್ನು ಅಡ್ಡೆಗಳಲ್ಲಿ ಹೊತ್ತವರು ತವರಿಗೆ ಧಾವಿಸುವ ಉತ್ಸುಕತೆಯನ್ನು ತಮ್ಮ ಹೆಜ್ಜೆ-ಗತಿಯಲ್ಲಿ ತೋರಿದರೆ, ಅಲ್ಲಿಂದ ಮತ್ತೆ ಗಂಡನ ಮನೆಗೆ (ದೇವಾಲಯಕ್ಕೆ) ಹಿಂದಿರುಗುವಾಗ ಮಂದಗತಿಯಲ್ಲಿ ಹೆಜ್ಜೆ ಹೆಜ್ಜೆಗೆ ನಿಂತು ತವರಿನತ್ತ ನೋಡುತ್ತಾ ಸಾಗುವುದು ಭಾವನಾತ್ಮಕವಾಗಿರುತ್ತದೆ. ಚಾಂದ್ರಮಾನ ಯುಗಾದಿಗೆ ಮುಂಚಿತವಾಗಿ ಬರುವ ಕುಂಭ-ಮೀನ ಮಾಸಗಳು ಸೇರುವ ಸಮಯದಲ್ಲಿ ಆಚರಿಸುವ ಚರಡು ಹಬ್ಬದ ದಿನದಂದು ಗೃಹಿಣಿಯೂ ಸೇರಿದಂತೆ ಹೆಣ್ಣುಮಕ್ಕಳು ತಮ್ಮ ಸೌಭಾಗ್ಯಕ್ಕಾಗಿ ಕೊರಳಿಗೆ ಅರಿಶಿಣ ಹಚ್ಚಿರುವ ದಾರವನ್ನು (ಚರಡು) ಕಟ್ಟಿಕೊಳ್ಳುತ್ತಾರೆ. ಅಂದು ಎರಡು ದೋಸೆಗಳ ಮಧ್ಯೆ ಹೂರಣವಿಟ್ಟು ತಯಾರಿಸುವ ಅಡೆ ವಿಶೇಷವಾದ ತಿನಿಸಾಗಿದೆ. ದೀಪಾವಳಿ ಸಮಯದ ಆನೆಹಬ್ಬದಲ್ಲಿ ಕೆಲವರು ಮಣ್ಣಿನ ಆನೆ ಮಾಡಿ ಶಕ್ತಿಯಿದ್ದಷ್ಟು

ದೀಪಗಳನ್ನು ಹಚ್ಚಿ ಮೂರು ಅಥವಾ ಐದು ದಿನಗಳ ಕಾಲ ಪೂಜಿಸಿ, ಕೊನೆಯ ದಿನದಂದು ಕೆಲವು ಅನ್ನ ಪ್ರಧಾನ ತಿನಿಸುಗಳಲ್ಲದೆ, ಎರೆಯಪ್ಪ ಮೊದಲಾದ ಇತರ ತಿಂಡಿಗಳನ್ನೂ ನೈವೇದ್ಯ ಮಾಡಿ, ಆನಂತರ ಆನೆಯನ್ನು ನೀರಿನಲ್ಲಿ ವಿಸರ್ಜಿಸುತ್ತಾರೆ. ಕೃಷ್ಣ ಜಯಂತಿಯು ಇವರಿಗೆ ಬಹು ಪ್ರಮುಖವಾದ ಹಬ್ಬವಾಗಿದೆ. ಅಂದು ತೊಟ್ಟಿಲೊಳಗೆ ಕೃಷ್ಣನೂ ಸೇರಿದಂತೆ ಹಲವಾರು ದೇವತೆಗಳ ವಿಗ್ರಹಗಳನ್ನು ಅಂದವಾಗಿ ಜೋಡಿಸಿ, ಫಲಪುಷ್ಪಗಳಿಂದ ಅಲಂಕರಿಸಿ, ವಿವಿಧ ಬಗೆಯ (ಅನುಕೂಲವಿದ್ದವರು ಸುಮಾರು ೩೨ ಬಗೆಯ) ತಿಂಡಿಗಳನ್ನು ಮಾಡಿ ದೇವರಿಗೆ ನೈವೇದ್ಯವಿರಿಸಿ ಪೂಜೆ ಸಲ್ಲಿಸುತ್ತಾರೆ. ನಾಲ್ಕಾರು ದಿನ ಅಲಂಕೃತ ದೇವರನ್ನು ಹಾಗೆಯೇ ಇರಿಸಿ ತಮ್ಮ ಬಂಧು ಮಿತ್ರರನ್ನು ಕರೆದು ದೇವರಿಗೆ ಆರತಿ ಬೆಳಗಿ ತಾವು ತಯಾರಿಸಿದ ತಿಂಡಿಗಳನ್ನು ಪ್ರಸಾದವಾಗಿ ಹಂಚುತ್ತಾರೆ. ಶ್ರೀವೈಷ್ಣವರು ಸೌರಮಾನ ಪಂಚಾಂಗವನ್ನು ಅವಲಂಬಿಸಿ ಹಬ್ಬ ಹರಿದಿನಗಳನ್ನು ಆಚರಿಸುವುದರಿಂದ, ಇದು ಸಾಮಾನ್ಯವಾಗಿ ಇತರೆ ಜನರು ಆಚರಿಸುವುದಕ್ಕಿಂತ ಭಿನ್ನವಾಗಿರುತ್ತದೆ. ಉದಾಹರಣೆಗೆ ಇವರಿಗೆ ಏಪ್ರಿಲ್ ೧೪ ಹೊಸವರ್ಷ ಪ್ರಾರಂಭವಾಗುವ ದಿನವಾಗಿದ್ದು, ಅಂದು ತಮಿಳು ಸೌರಮಾನ ಹಬ್ಬವನ್ನು ಆಚರಿಸುತ್ತಾರೆ. ಶ್ರೀವೈಷ್ಣವರು ವೈಶಾಖ ಶುದ್ಧ ಚತುರ್ಥಿ ಅಥವಾ ಪಂಚಮಿಯಂದು ಬರುವ ಆರ್ದ್ರಾ ನಕ್ಷತ್ರದ ದಿನದಂದು ರಾಮಾನುಜಾಚಾರ್ಯರ ತಿರುನಕ್ಷತ್ರವನ್ನು ಆಚರಿಸುವರು. ಮೇಲುಕೋಟೆಯಲ್ಲಿ ಶ್ರೀ ಯತಿರಾಜ ಮಠ, ವಿಜಯನಗರ ಕಾಲದಲ್ಲಿ ಆರಂಭವಾದ ಅಹೋಬಲ ಮಠ, ಕಂಚಿ ಅಳಗಿಯ ಮಣವಾಳ ಮಠ, ಶಾಕ್ತಾದವರಿಗೆ ಸೇರಿದ ಅನ್ನದಾನ ಒಡೆಯರ ಮಠ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಆರಂಭವಾದ ಬ್ರಹ್ಮತಂತ್ರ ಪರಕಾಲ ಮಠದ ಶಾಖೆಗಳಿವೆ. ರಾಮಾನುಜರ ನಾಚಿಯಾರ್ ಕಲ್ಪನೆ ಸಹ ವಿಶಿಷ್ಟವಾಗಿದೆ. ಮಂಡ್ಯ ಜಿಲ್ಲೆಯಲ್ಲಿರುವ ನಾಲ್ಕೂ ಬೇಬಿ ಗ್ರಾಮಗಳಲ್ಲಿನ ಜನರ ಮನೆದೇವರು ಮೇಲುಕೋಟೆಯ ಚೆಲುವ ನಾರಾಯಣ ಹಾಗೂ ನಾಚಿಯಾರ್. ಮೇಲುಕೋಟೆ ಬಳಿಯ ಒಗರಕಲ್ಲಮ್ಮನ ಗುಡಿ ಈ ನಾಚಿಯಾರಮ್ಮನದೇ ಎಂದು ನಂಬಲಾಗಿದ್ದು, ಕಂಚಿಯಲ್ಲೂ ನಾಚಿಯಾರ್ ಆರಾಧನೆ ಇದೆ ಎನ್ನಲಾಗಿದೆ.

**ವೈಷ್ಣವ ಮತ :** ರಾಮಾನುಜರ ಆನಂತರ ಬಂದ ಮಧ್ವಾಚಾರ್ಯರು ಉಡುಪಿ ಬಳಿಯಿರುವ ಪಾಜಕ ಕ್ಷೇತ್ರದ ಬೆಳ್ಳೆಯಲ್ಲಿ ಜನಿಸಿದರು. ಅವರ ಪ್ರಕಾರ ವಿಷ್ಣುವಿನ ಅರ್ಚನೆಯೇ ಮುಖ್ಯ ಮತ್ತು ಅವನೇ ಸರ್ವೋಚ್ಚ. ಅವರು ಪಂಚ ಭೇದ ಸೂತ್ರವನ್ನು ಸೈದ್ಧಾಂತಿಕವಾಗಿ ರೂಪಿಸಿದರು. ಎಲ್ಲಾ ಜೀವಿಗಳಿಗೂ ದೇವರಿಗೂ ಇರುವ ಭಿನ್ನತೆ ಹಾಗೂ ಅಂತರಗಳನ್ನು ಈ ಪ್ರಭೇದಗಳ ಅನುಸಾರವಾಗಿ ಒಪ್ಪಿಕೊಂಡಿರುವುದರಿಂದ, ಅವರು ಉಪದೇಶಿಸಿದ ಈ ತತ್ವವನ್ನು ದ್ವೈತಸಿದ್ಧಾಂತವೆಂದು ಕರೆಯಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಶ್ರದ್ಧಾಭಕ್ತಿಗಳ ಮಾರ್ಗಾನುಸರಣೆ ಮಾಡಿ ತಮ್ಮ ತಮ್ಮ ಆತ್ಮೋನ್ನತಿಯನ್ನು ಸಾಧಿಸಬೇಕೆಂಬುದೇ ಅವರ ಉಪದೇಶದ ಸಾರ. ಜಿಲ್ಲೆಯಲ್ಲಿ ರಾಘವೇಂದ್ರಸ್ವಾಮಿ ಮಠಗಳೂ ಸೇರಿದಂತೆ ಮಧ್ವ ಸಂಪ್ರದಾಯದ ಹಲವಾರು ಮಠಗಳಿವೆ. ಶ್ರಾವಣ ಬಹುಳ ಬಿದಿಗೆಯಂದು ರಾಘವೇಂದ್ರಸ್ವಾಮಿಗಳ ಆರಾಧನೆಯನ್ನೂ ಮಾಘ ಶುದ್ಧ ನವಮಿಯಂದು ಮಧ್ವನವಮಿಯನ್ನೂ ಈ ಪಂಥದವರು ಆಚರಿಸುತ್ತಾರೆ.

**ಜೈನ ಧರ್ಮ :** ಮಂಡ್ಯ ಜಿಲ್ಲೆಯ ಶಾಸನಗಳಿಂದ ಜೈನಧರ್ಮವು ಬಹು ಹಿಂದಿನಿಂದಲೂ ಈ ಭಾಗದಲ್ಲಿ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ದೇವರಹಳ್ಳಿಯಲ್ಲಿ ದೊರೆತಿರುವ ಗಂಗನರೇಶ ಶ್ರೀಪುರುಷನ ಕ್ರಿ.ಶ.೭೭೬ರ ತಾಮ್ರಶಾಸನದಿಂದ ಪೃಥ್ವೀನಿರ್ಗುಂದರಾಜ ಬಿರುದಾಂಕಿತ ಪರಮಗೂಳನ ಹೆಂಡತಿ ಕುಂದಚ್ಚಿಯು ಶ್ರೀಪುರದಲ್ಲಿ ಲೋಕತಿಲಕ ಜಿನಮಂದಿರವನ್ನು ಕಟ್ಟಿಸಿದಾಗ, ಆ ಬಸದಿಯ ಪೂಜಾ ಕೈಂಕರ್ಯಕ್ಕಾಗಿ ಪರಮಗೂಳನ ಪ್ರಾರ್ಥನೆಯಂತೆ ಶ್ರೀಪುರುಷನು ಪೊನ್ನಳ್ಳಿ ಗ್ರಾಮವನ್ನು ದತ್ತಿ ಬಿಟ್ಟ ವಿಚಾರ ತಿಳಿದುಬರುತ್ತದೆ. ಕ್ಯಾತನಹಳ್ಳಿ ಗ್ರಾಮದ ಬಸ್ತಿಗದ್ದೆಯಲ್ಲಿರುವ ಕ್ರಿ.ಶ.೯೦೦ರ ಶಾಸನವು ಸತ್ಯವಾಕ್ಯ ಕೊಂಗುಣಿವರ್ಮನ ಕಾಲದಲ್ಲಿ ತ್ಯಾಗಿ ಪೆರ್ಮಾಡಿಯು ಕಲ್ಲು ಬಸದಿ ಕಟ್ಟಿಸಿ ಅಲ್ಲಿನ ಕುಮಾರಸೇನ ಭಟಾರರಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ.

ರಾಂಪುರ ಗ್ರಾಮದ ಕ್ರಿ.ಶ.೯೦೪-೯೦೫ರ ಜೈನ ಶಾಸನವು, ಶ್ರವಣಬೆಳಗೊಳದ ಅಧಿಪತಿಯಾದ ಶ್ರೀವರಮತಿಸಾಗರ ಪಂಡಿತ ಭಟಾರರ ಅಪ್ಪಣೆಯಂತೆ ಅಣ್ಣಯ, ದೇವಕುಮಾರ ಮತ್ತು ದೋರ ಎಂಬುವರು ಒಂದು ಕೆರೆಯನ್ನು ಕಟ್ಟಿಸಿದ ವಿಚಾರವನ್ನು ತಿಳಿಸುತ್ತದೆ. ಕ್ಯಾತನಹಳ್ಳಿ ಹೋಬಳಿ ಕಸಬೆಯ ಕೋದಂಡರಾಮ ದೇವಾಲಯದಲ್ಲಿರುವ ಕ್ರಿ.ಶ.೧೧೭೫ರ ಶಿಲಾಶಾಸನವು ಎರೆಯಣ್ಣನು ಸ್ವಲ್ಪ ಭೂಮಿಯನ್ನು ಕ್ರಯಕ್ಕೆ ಕೊಂಡು ಕೊಡೆಹಾಳ ಬಸದಿಗೆ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. ಮದ್ದೂರು ತಾಲೂಕು ಕೂಳಗೆರೆ ಗ್ರಾಮದ ಕೆರೆ ಏರಿಯ ಶಾಸನವು (ಕ್ರಿ.ಶ.೯೯೯) ಮಣಲಾರನು ಕನಕಗಿರಿ ತೀರ್ಥದ ಮೇಲಿನ ಬಸದಿಯನ್ನು ಕಟ್ಟಿಸಿ, ಅರಸರ ಸನ್ನಿಧಿಯಲ್ಲಿ ಕನಕಸೇನ ಭಟಾರರಿಗೆ ತಿಪ್ಪೂರಿನ ಕೆಲವು ತೆರಿಗೆಗಳನ್ನು ಬಿಟ್ಟುಕೊಟ್ಟಿರುವುದನ್ನು ತಿಳಿಸುತ್ತದೆ. ನಾಗಮಂಗಲ ತಾಲೂಕಿನ ಎಲೆಕೊಪ್ಪ ಗ್ರಾಮದ ಉತ್ತರಕ್ಕಿರುವ ಮಾಸ್ತ್ಯಮನ ಗುಡಿಯ ಬಾಗಿಲ ಚೌಕಟ್ಟಿನಲ್ಲಿರುವ ಶಾಸನವು (ಕ್ರಿ.ಶ.೧೦೬೮) ಹೊಯ್ಸಳದೇವನು ಬಸದಿಗಾಗಿ ಮಣಿಯರಸನ ಕೆರೆಯನ್ನು ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯಲ್ಲಿ ದೊರೆತಿರುವ ಶಾಸನವು (ಕ್ರಿ.ಶ.೧೧೨೫) ನೊಣಂಬಿಸಟ್ಟಿಯು ಶುಭಚಂದ್ರ ಸಿದ್ಧಾಂತ ದೇವರಿಗೆ ಬಸದಿಗಾಗಿ ಅರ್ಹನಹಳ್ಳಿಯನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ಇದೇ ತಾಲೂಕಿನ ಮುರುಕನ ಹಳ್ಳಿಯಲ್ಲಿ ಪೂರ್ಣ ಜೀರ್ಣೋದ್ಧಾರಗೊಡಿರುವ ಪಾರ್ಶ್ವನಾಥ ಬಸದಿ ಇದೆ. ಕಂಬದಹಳ್ಳಿಯ ಪಂಚಕೂಟ ಬಸದಿಯ ಮುಂಭಾಗದಲ್ಲಿ ೫೦ ಅಡಿ ಎತ್ತರದ ಮಾನಸ್ತಂಭದ ಮೇಲೆ ಬ್ರಹ್ಮದೇವರ ವಿಗ್ರಹವಿದೆ. ಈ ಸಂಕೀರ್ಣದ ಕೇಂದ್ರದಲ್ಲಿ ಗಂಗರ ಕಾಲದ್ದೆಂದು (ಸುಮಾರು ೯೦೦) ಹೇಳಲಾಗುವ ಆದಿನಾಥ ಬಸದಿಯೂ ಇದೆ. ಹೊಯ್ಸಳರ ಕಾಲದ ಅನೇಕ ಶಾಸನಗಳು ಇಲ್ಲಿ ದೊರೆತಿದ್ದು, ವಿವಿಧ ಹೊಯ್ಸಳ ಅರಸರು ಕಂಬದಹಳ್ಳಿಯ ಜೈನ ಬಸದಿಗಳಿಗೆ ದತ್ತಿನೀಡಿದ ಬಗ್ಗೆ ತಿಳಿಸುತ್ತವೆ. ಕ್ರಿ.ಶ.೧೨೦೦ ಕ್ಕೆ ಸೇರಿದ ಇಲ್ಲಿಯ ಮತ್ತೊಂದು ಶಾಸನವು ಜೈನ-ಶೈವರ ನಡುವೆ ಇದ್ದ ಪರಸ್ಪರ ಸಾಮರಸ್ಯವನ್ನು ತಿಳಿಸುತ್ತದೆ. ಕಸಲಗೆರೆಯ ಕಲ್ಲೇಶ್ವರ ದೇವಾಲಯದಲ್ಲಿ ದೊರೆತಿರುವ ಶಾಸನವು (ಕ್ರಿ.ಶ.೧೧೪೨) ಕಲ್ಕುಣಿನಾಡಿನ ಸಾಮಂತ ಸೋಮೆಯ ನಾಯಕನು ಹೆಬ್ಬಿದಿರವಾಡಿಯಲ್ಲಿ ಉತ್ತುಂಗ ಚೈತ್ಯಾಲಯವನ್ನು ಕಟ್ಟಿಸಿ, ಪಾರ್ಶ್ವನಾಥ ತೀರ್ಥಂಕರನನ್ನು ಸ್ಥಾಪಿಸಿ, ಅರುಹನಹಳ್ಳಿಯನ್ನು ಬ್ರಹ್ಮದೇವ ಮುನಿಗಳಿಗೆ ದತ್ತಿಯಾಗಿ ಬಿಟ್ಟನೆಂದು ತಿಳಿಸುತ್ತದೆ.

ಭೋಗಾದಿ ಗ್ರಾಮದ ಕ್ರಿ.ಶ.೧೧೪೪ರ ಶಾಸನವು ಶ್ರೀಕರಣದ ಹೆಗಡೆ ಮಾದಿರಾಜನು ಬೋಗವಧಿ ಯಲ್ಲಿ ಶ್ರೀಕರಣದ ಜಿನಾಲಯವನ್ನು ನಿರ್ಮಿಸಿ ಪಾರ್ಶ್ವನಾಥನನ್ನು ಪ್ರತಿಷ್ಠಾಪಿಸಿ ಭೋಗಾದಿ ಗ್ರಾಮವನ್ನು ದಾನವನ್ನಾಗಿ ನೀಡಿದ ಬಗ್ಗೆ ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಬಸ್ತಿ ಹೊಸಕೋಟೆಯ ಬಳಿ ಗೊಮ್ಮಟೇಶ್ವರ ಬಸದಿಯ ಹತ್ತಿರ ದೊರೆತಿರುವ ೧೧೬೫ರ ಶಾಸನವು ಹೊಯ್ಸಳರ ಮಹಾಪ್ರಧಾನ ಹೆಗ್ಗಡೆ ಶಿವರಾಜಸೋಮಯ್ಯನು ಮಾಣಿಕ್ಯದೊಳಲ ಜಿನಾಲಯಕ್ಕೆ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ಅದೇ ಹೊಸಕೋಟೆಯಲ್ಲಿ ಹೊಯ್ಸಳ ಜಿನಾಲಯದ ಮೂಲ ಬಸದಿಯನ್ನು ಪುಣಿಸಮಯ್ಯನು ಕಟ್ಟಿಸಿದನೆಂದು ತಿಳಿಸುವ ಮತ್ತೊಂದು ಶಾಸನವು ದೊರೆತಿದೆ. ಅಳೀಸಂದ್ರದಲ್ಲಿ ಕ್ರಿ.ಶ.೧೧೮೪ಕ್ಕೆ ಸೇರಿದ ಮತ್ತೊಂದು ಶಾಸನವು ದೊರೆತಿದ್ದು, ಇದು ಹೊಯ್ಸಳ ವಂಶದ ಅಮೂಲ್ಯ ವಿಚಾರಗಳನ್ನು ತಿಳಿಸುತ್ತದೆ. ಅಲ್ಲದೇ ಅಳೀಸಂದ್ರ, ಸಿಂಧಘಟ್ಟ, ಚಾಕೇನಹಳ್ಳಿಯಲ್ಲಿದ್ದ ಬಸದಿಗಳ ಬಗ್ಗೆ ಹೇಳುತ್ತಾ ಇಂಗಳೇಶ್ವರ ಬಳ್ಳಿಗೆ ಸೇರಿದ ಕೊಲ್ಲಾಪುರದ ಸಾವಂತ ಬಸದಿ ಬಗ್ಗೆಯೂ ಸಾಂದರ್ಭಿಕವಾಗಿ ಪ್ರಸ್ತಾಪಿಸುತ್ತದೆ.

ಮದ್ದೂರು ತಾಲೂಕಿನ ಅರೆತಿಪ್ಪೂರು ಬೆಟ್ಟದ ಮೇಲೆ ಮತ್ತು ಕೃಷ್ಣರಾಜಪೇಟೆ ತಾಲೂಕಿನ ಬಸ್ತಿಹೊಸಕೋಟೆ ಹತ್ತಿರ ಕನ್ನಂಬಾಡಿ ಹಿನ್ನೀರಿನಲ್ಲಿ ಗೊಮ್ಮಟೇಶ್ವರ ವಿಗ್ರಹಗಳಿವೆ. ಜೈನರಲ್ಲಿ ಶ್ವೇತಾಂಬರ ಮತ್ತು ದಿಗಂಬರ

ಎಂಬ ಎರಡು ಪಂಗಡಗಳಿದ್ದು ಜಿಲ್ಲೆಯಲ್ಲಿ ಬಹುತೇಕ ಶ್ವೇತಾಂಬರರೇ ಕಂಡುಬರುತ್ತಾರೆ. ಜೈನರಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಲು ಅವರದೇ ಧಾರ್ಮಿಕ ಗುರುಗಳಿದ್ದು, ಅವರನ್ನು ಉಪಾಧ್ಯಾಯ ಎಂದು ಕರೆಯುತ್ತಾರೆ.

**ಇಸ್ಲಾಂಧರ್ಮ :** ಕೃಷ್ಣರಾಜಪೇಟೆ ತಾಲೂಕಿನ ಸಿಂಧಘಟ್ಟದ ೧೫೩೭ರ ಶಾಸನದಿಂದ ವಿಜಯನಗರ ಕಾಲದ ಸ್ಥಳೀಯ ಪಾಳೇಗಾರ ರಂಗಯ್ಯನಾಯಕ ಹಾಗೂ ಸಿಂಧಘಟ್ಟದ ಬಾಬುಸೆಟ್ಟಿ ಎಂಬುವರು ತಾವು ಸಿಂಧಘಟ್ಟದಲ್ಲಿ ಕಟ್ಟಿಸಿದ ಕಲ್ಲಮಸೀತಿಯ ದೇವಸ್ಥಾನಕ್ಕೆ ಧರ್ಮವಾಗಲಿ ಎಂದು ಶಿವಪುರ ಗ್ರಾಮವನ್ನೂ, ಅದರ ಹಬೀಬನಿಗೆ ಮನೆಯೊಂದನ್ನೂ ಸರ್ವಮಾನ್ಯವಾಗಿ ಬಿಟ್ಟುಕೊಟ್ಟರೆಂದು ತಿಳಿದುಬರುತ್ತದೆ. ಮಸೀತಿಯು ಇಂದಿಗೂ ಸುಸ್ಥಿತಿಯಲ್ಲಿದ್ದು ಅದರಲ್ಲಿ ಕಲ್ಲಿನಲ್ಲಿ ಕಡೆದ ಕಂಬಗಳು, ಕಮಲದ ಹೂ, ಸೋಪಾನದ ಇಕ್ಕೆಲದಲ್ಲಿ ಆನೆಯ ತಲೆಯನ್ನು ಹೋಲುವ ಕೈಪಿಡಿಗಳು ಇವೆ. ಶಾಸನದಲ್ಲಿ ಸೂರ್ಯ–ಚಂದ್ರರ ಚಿಹ್ನೆ ಹಾಗೂ ಶಾಪಾಶಯಗಳಿವೆ. ಮಸೀದಿಯನ್ನು ದೇವಸ್ಥಾನ ಎಂದು ಕರೆದು ಉಲ್ಲೇಖಿಸಿರುವುದು ಹಾಗೂ ಅದರ ನಿರ್ಮಾಣದಲ್ಲಿ ಕಂಡುಬರುವ ವಿಶಿಷ್ಟ ಅಂಶಗಳು ಇತ್ಯಾದಿಗಳು ಹಿಂದು–ಮುಸ್ಲಿಂ ಬಾಂಧವ್ಯವನ್ನು ಸಂಕೇತಿಸುತ್ತವೆಂದು ಹೇಳಬಹುದು.

ಜಿಲ್ಲೆಯಲ್ಲಿ ಇಸ್ಲಾಂ ಧರ್ಮವು ಹೈದರ್ ಮತ್ತು ಟಿಪ್ಪು ಸುಲ್ತಾನರ ಆಡಳಿತ ಕಾಲದಲ್ಲಿ ಹೆಚ್ಚು ಪ್ರಚಾರ ಹಾಗೂ ಪ್ರೋತ್ಸಾಹ ಪಡೆಯಿತು. ಅವರ ಕಾಲದಲ್ಲಿ ಬಿಜಾಪುರದ ಕಡೆಯಿಂದ ಉರ್ದು ಮಾತನಾಡುವ ಮುಸ್ಲಿಮರು, ಮದರಾಸು ಕಡೆಯಿಂದ ತಮಿಳು ಮಾತನಾಡುವ ಲಬ್ಬೆ ಮುಸ್ಲಿಮರು, ಕೇರಳದ ಕಡೆಯಿಂದ ಮಾಪಿಳ್ಳೆ ಸಮುದಾಯದವರು ಶ್ರೀರಂಗಪಟ್ಟಣಕ್ಕೆ ಬಂದರೆಂದೂ ಉತ್ತರಭಾರತದ ಲಕ್ನೋದಿಂದ ಹಾಗೂ ಇರಾನ್ ದೇಶದಿಂದ ಗುಡಿ ಕೈಗಾರಿಕೆಗಳಲ್ಲಿ ಕೌಶಲ್ಯವುಳ್ಳವರನ್ನು ಕರೆಯಿಸಲಾಯಿತೆಂದೂ ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಶ್ರೀರಂಗಪಟ್ಟಣ, ಪಾಂಡವಪುರದ ತೊಣ್ಣೂರು, ಮದ್ದೂರಿನ ನಿಡಘಟ್ಟ ಮತ್ತು ನಾಗಮಂಗಲಗಳು ಈ ಧರ್ಮದ ಪ್ರಮುಖ ಕೇಂದ್ರಗಳಾಗಿದ್ದವು. ಶ್ರೀರಂಗಪಟ್ಟಣದ ಗಂಜಾಮಿನಲ್ಲಿ ಪ್ರತಿ ವರ್ಷ ಹ ಗೌಸ್–ಎ–ಪಾಕ್ ಎಂಬ ಬಾಗ್ದಾದ ಸಂತರ ಉರುಸು ನಡೆಯುತ್ತದೆ. ಇವರ ಹೆಸರಿನಲ್ಲಿ ಹಸಿರು ಧ್ವಜವನ್ನೇರಿಸಿ ಪೂಜೆ ಸಲ್ಲಿಸುವ ಸಂಪ್ರದಾಯವಿದೆ. ಮಳವಳ್ಳಿ ತಾಲೂಕಿನ ಗಡಿಯಲ್ಲಿ ಶಿವಸಮುದ್ರ (ಮಧ್ಯರಂಗ)ದ ಬಳಿ ಹಿಂದೂ ಮುಸ್ಲಿಮರ ಸೌಹಾರ್ದತೆಯ ಪ್ರತೀಕವಾದ ಸಂತ ಹಜರತ್ ಸೈಯದ್ ಮರ್ದಾನೆ ಘಯಾಬ್‌ರ ದರ್ಗಾ ಹಾಗೂ ಮಸೀದಿ ಇವೆ. ಅವೆರಡೂ ಟೀಪುವಿನ ಕಾಲದ ರಚನೆಯೆಂಬ ಅಭಿಪ್ರಾಯವಿದೆ. ಪ್ರತೀ ವರ್ಷ ರಂಜಾನ್ ತಿಂಗಳಲ್ಲಿ ನಡೆಯುವ ಉರುಸ್‌ನಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಉರುಸು ಸಂದರ್ಭದಲ್ಲಿ ದರ್ಗಾಕ್ಕೆಂದು ಈ ಮೊದಲು ಅಲ್ಲಿಯ ರಂಗನಾಥ ಹಾಗೂ ಸೋಮೇಶ್ವರ ದೇವಾಲಯದ ಅರ್ಚಕರು ಸಿದ್ಧಪಡಿಸಿದ ಚಂದನವನ್ನು ಜಹಗೀರುದಾರರ ಮನೆಯಿಂದ ಮೆರವಣಿಗೆಯಲ್ಲಿ ಕಳುಹಿಸಲಾಗುತ್ತಿದ್ದಿತು. ಆದರೆ ಅದನ್ನು ಈಗ ಊರವರು ರಂಗನಾಥ ದೇವಾಲಯುದಿಂದ ಮೆರವಣಿಗೆಯುಲ್ಲಿ ದರ್ಗಾಕ್ಕೆ ಕಳುಹಿಸಿಕೊಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಪಾಂಡವಪುರದ ತೊಣ್ಣೂರಿನಲ್ಲಿರುವ ಸಾಲಾರ್ ಮಸೂದ್ ಘಾಜಿ ದರ್ಗಾ, ನಾಗಮಂಗಲದ ಘುಂಗುರು ದಿವಾನ್‌ಬಾಬರ ದರ್ಗಾ ಮತ್ತು ನಿಡಘಟ್ಟದಲ್ಲಿನ ದರ್ಗಾಗಳು ಪ್ರಖ್ಯಾತವಾಗಿವೆ. ಅದರಲ್ಲೂ ತೊಣ್ಣೂರಿನ ದರ್ಗಾಕ್ಕೆ ಹೈದರಾಲಿಯು ಚಟ್ಟಂಗೆರೆ ಗ್ರಾಮವೂ ಸೇರಿದಂತೆ ಇತರ ಭೂದಾನಗಳನ್ನೂ ನೀಡಿರುವ ಅಂಶ ತೊಣ್ಣೂರಿನ ೧೭೯೮ರ ಮೂರು ಶಾಸನಗಳಲ್ಲಿ ದಾಖಲಾಗಿದೆ. ಹದಿನೇಳನೆಯ ಶತಮಾನದಲ್ಲಿ ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಯರು ದೆಹಲಿಯ ಬಾದಷಹ ಔರಂಗಜೇಬನಿಂದ ಜಗದೇವ ಎಂಬ ಬಿರುದನ್ನೂ, ಕಿರೀಟ ಹಾಗೂ ಸಿಂಹಾಸನವನ್ನೂ ಪಡೆದುಕೊಂಡರೆಂದು ತಿಳಿದುಬರುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನವು ಕ್ರಿ.ಶ.೧೭೪೭ರಲ್ಲಿ ಬೆಂಕಿಯ ಆಕಸ್ಮಿಕದಿಂದ ಬೆಂದುಹೋದಾಗ, ಅದರ

ಜೀರ್ಣೋದ್ಧಾರ ಕಾರ್ಯಕ್ಕೆ ಹೈದರಾಲಿಯ ಸಹಾಯದೊಂದಿಗೆ ರಾಜಬೊಕ್ಕಸದಿಂದ ಹಣ ನೀಡಲಾಯಿತೆಂದು ಹೇಳಲಾಗಿದೆ. ಪಾಲಹಳ್ಳಿಯ ೧೭೯೩ರ ಪರ್ಷಿಯನ್ ಶಾಸನದಿಂದ ಟಿಪ್ಪು ಕಾಲದಲ್ಲಿ ಪಾಲಹಳ್ಳಿಗೆ ರಹಮತ್ ನಗರ ಎಂಬ ಹೆಸರಿದ್ದು, ಅಲ್ಲಿಯ ಮುಸ್ಲಿಂ ನಿವಾಸಿಗಳಿಗೆ ಕಬರಸ್ಥಾನ(ಸ್ಮಶಾನ)ಕ್ಕೆಂದು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಟೀಪುವು ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನ, ಶೃಂಗೇರಿಯ ಮಠ, ಮೇಲುಕೋಟೆ ಹಾಗೂ ನಂಜನಗೂಡಿನ ದೇವಸ್ಥಾನಗಳಿಗೆ ಜಹಗೀರುಗಳನ್ನು ಕೊಟ್ಟನೆಂದು ತಿಳಿದುಬರುತ್ತದೆ. ೧೯೬೧ರ ಜನಗಣತಿಯಂತೆ ಮಂಡ್ಯ ಜಿಲ್ಲೆಯಲ್ಲಿ ಮುಸ್ಲಿಮರ ಜನಸಂಖ್ಯೆ ೩೧,೩೮೧ ಇದ್ದಿತೆಂದು ತಿಳಿದುಬರುತ್ತದೆ.

**ಕ್ರೈಸ್ತಧರ್ಮ :** ಜಿಲ್ಲೆಗೆ ಕ್ರೈಸ್ತ ಧರ್ಮವು ೧೬ನೇ ಶತಮಾನದಲ್ಲಿ ಪ್ರವೇಶಿಸಿರುವಂತೆ ತೋರುತ್ತದೆ. ಶ್ರೀರಂಗಪಟ್ಟಣದಲ್ಲಿ ೧೫೩೦ರ ವೇಳೆಗಾಗಲೇ ಮಿಷನರಿಗಳ ಪ್ರಭಾವವಿತ್ತು ಎಂಬುದಕ್ಕೆ 'ನಗರ' ದ (ಹೊಸನಗರ ತಾಲೂಕು, ಶಿವಮೊಗ್ಗ ಜಿ.) ೧೫೩೦ರ ಶಾಸನದಲ್ಲಿ ಬರುವ ಶ್ರೀರಂಗನಗರದ ಕಾರ್ಯಕರ್ತ (ರಾಜ್ಯಪಾಲ) ನ ಪೇರಂಗಿ ಮತಮನಳಿದ ಜೈನ ಪಂಡಿತ ವಿದ್ಯಾನಂದನ ಉಲ್ಲೇಖ ಸಾಕ್ಷಾಧಾರವನ್ನು ಒದಗಿಸುತ್ತದೆ. ಅಲ್ಲದೇ ಶ್ರೀರಂಗಪಟ್ಟಣದ ರಾಜ್ಯಪಾಲನಾದ ತಿರುಮಲರಾಯನು ೧೬೦೦-೦೬ರ ಅವಧಿಯಲ್ಲಿ ಗೋವೆಯ ಜೆಸ್ಯುಟ್ಸ್ ಪಾದ್ರಿ ಪಿಮೊಂಟೋನಿಗೆ ಪತ್ರ ಬರೆದು ರಾಜಧಾನಿ ಪಟ್ಟಣದಲ್ಲಿ ಬಂದು ನೆಲೆಸಲು ಬೇಕಾದ ಎಲ್ಲಾ ಸವಲತ್ತನ್ನು ನೀಡುವುದಾಗಿ ತಿಳಿಸಿರುವ ಅಂಶ ಉಲ್ಲೇಖಾರ್ಹವಾಗಿದೆ. ಆದರೆ ಕ್ರೈಸ್ತ ಪಾದ್ರಿಗಳಾರೂ ಶ್ರೀರಂಗಪಟ್ಟಣಕ್ಕೆ ಬಂದು ನೆಲೆಸಲಿಲ್ಲ. ಮುಂದೆ ಹೈದರನ ಕಾಲದಲ್ಲಿ ಶ್ರೀರಂಗಪಟ್ಟಣದ ಕೋಟೆಯಲ್ಲಿ ಕ್ರೈಸ್ತ ಸೈನಿಕರಿಗಾಗಿ ಸ್ಥಾಪಿಸಲ್ಪಟ್ಟ ಇಗರ್ಜಿಯು ಕ್ಸೇವಿಯರ್ ಸೂರಪ್ಪನ ಧೈರ್ಯದಿಂದಾಗಿ ಟಿಪ್ಪುವಿನ ವಿರೋಧದ ನಡುವೆಯೂ ಉಳಿಯಲು ಸಾಧ್ಯವಾಯಿತು. ಹೈದರಾಲಿಯು ತನ್ನ ಆಡಳಿತ ಕಾಲದಲ್ಲಿ ಕ್ರೈಸ್ತರನ್ನು ಅಂಗರಕ್ಷಕರನ್ನಾಗಿ ನೇಮಿಸಿಕೊಂಡಿದ್ದನೆಂದು ತಿಳಿದುಬರುತ್ತದೆ. ಪಾಂಡವಪುರದಲ್ಲಿ ೧೮ನೇ ಶತಮಾನದಿಂದಲೇ ಧರ್ಮಸಭೆಯು ಇದ್ದು ೧೯೪೫ರಲ್ಲಿ ಇದನ್ನು ಪ್ರತ್ಯೇಕ ಧಾರ್ಮಿಕ ಕೇಂದ್ರವಾಗಿ ಮಾಡಲಾಯಿತೆಂದು ಹೇಳಲಾಗಿದೆ. ಇಲ್ಲಿ ಸ್ವರ್ಗ ಸ್ವೀಕೃತ ಮಾತೆ ಮೇರಿಗೆ ಅರ್ಪಿತವಾದ ದೇವಾಲಯವಿದೆ. ಮದ್ದೂರಿಗೆ ಸಮೀಪದಲ್ಲಿರುವ ಚಿಕ್ಕ ಅರಸಿನಕೆರೆಯಲ್ಲಿ ೧೮ನೇ ಶತಮಾನದಲ್ಲೇ ಒಂದು ಧರ್ಮಸಭೆಯಿದ್ದು ಗೋವಾ ಮೂಲದ ಪಾದ್ರಿ ರಾಜೇಂದ್ರಸ್ವಾಮಿ ಎಂಬುವರು ಅದರ ಧರ್ಮಗುರುಗಳಾಗಿದ್ದರೆಂದು ತಿಳಿದುಬರುತ್ತದೆ. ಹೈದರಾಲಿಯ ಕಾಲದಲ್ಲಿ ಕ್ರೈಸ್ತ ಮಿಷನರಿಗಳು ತಮ್ಮ ಕಾರ್ಯಚಟುವಟಿಕೆಗಳನ್ನು ಆರಂಭಿಸಿದರೆಂದು ಹೇಳಲಾಗಿದೆ. ಫ್ರೆಂಚ್ ಮಿಷನರಿಯಾಗಿದ್ದ ಅಬೆದುಬೆಗೆ ಗಂಜಾಂನಲ್ಲಿ ಚರ್ಚ್ ಒಂದನ್ನು ನಿರ್ಮಿಸಲು ಟಿಪ್ಪು ಅವಕಾಶ ಮಾಡಿಕೊಟ್ಟಿದ್ದು, ಆ ಪಾದ್ರಿಯು ೧೮೦೦-೧೮೨೩ರವರೆವಿಗೆ ಅಲ್ಲಿಯೇ ವಾಸವಾಗಿದ್ದುದು ತಿಳಿದುಬರುತ್ತದೆ. ಆ ಮನೆ, ಚರ್ಚ್ ಮತ್ತು ಚರ್ಚ್ ಪಕ್ಕದಲ್ಲಿ ಆಗ ನಿರ್ಮಿಸಲಾಗಿದ್ದ ಶಾಲೆಯನ್ನು ಇಂದಿಗೂ ಕಾಣಬಹುದಾಗಿದೆ. ಇಪ್ಪತ್ತನೇ ಶತಮಾನದ ಆರಂಭದಿಂದ ಜಿಲ್ಲೆಯಲ್ಲಿ ಕ್ರೈಸ್ತ ಧರ್ಮದ ಚಟುವಟಿಕೆಗಳು ಚುರುಕಾದವು. ಬ್ಲಫ್‌ನಲ್ಲಿ ೧೯೦೪ರಲ್ಲಿಯೇ ಧರ್ಮಸಭೆ ಕಾರ್ಯನಿರ್ವಹಿಸುತ್ತಿದ್ದು ೧೯೬೪ರಲ್ಲಿ ಇದು ಧರ್ಮಕೇಂದ್ರವಾಗಿ ಪರಿವರ್ತನೆ ಹೊಂದಿದ್ದು ಅಲ್ಲಿ ವಿಜಯ ಮೇರಿ ಮಾತೆಯ ಪ್ರಾಚೀನ ಇಗರ್ಜಿ ಇದೆ. ಶಿಂಷಾದಲ್ಲಿ ಸಂತ ಫ್ಯಾಬ್ರಿಕರ ಪ್ರಾರ್ಥನಾ ಮಂದಿರ ಇದೆ. ಈಚೆಗೆ ಕೃಷ್ಣರಾಜಪೇಟೆಯಲ್ಲೂ ಒಂದು ಧರ್ಮ ಕೇಂದ್ರ ಪ್ರಾರಂಭವಾಗಿದೆ, ಮಳವಳ್ಳಿಯಲ್ಲಿ ಮೇರಿ ಮಾತೆಯವರ ದೇವಾಲಯವೂ ನಿರ್ಮಿತವಾಗಿದೆ.

ಪಾಲಹಳ್ಳಿಯು ಪಾಂಡವಪುರದ ಉಪಕೇಂದ್ರವಾಗಿದ್ದು ಇಲ್ಲಿ ಸಂತ ಸ್ನಾನಿಕಯೊವಾನ್ನನ ಪ್ರಾಚೀನ ದೇವಾಲಯವಿದೆ. ಪ್ರತೀ ವರ್ಷ ಅದರ ವಾರ್ಷಿಕ ಮಹೋತ್ಸವವು ವಿಜೃಂಭಣೆಯಿಂದ ನಡೆಯುತ್ತಿದ್ದು ಇಗರ್ಜಿಯ ಆಶ್ರಯದಲ್ಲಿ ಒಂದು ಪಾಠಶಾಲೆ ಮತ್ತು ಔಷಧಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಮಂಡ್ಯ ನಗರದಲ್ಲಿ ೧೯೪೪ರಲ್ಲಿ ಸ್ಥಾಪನೆಯಾದ ಧರ್ಮಸಭೆಯು ೧೯೬೪ರಲ್ಲಿ ಪ್ರತ್ಯೇಕ ಧರ್ಮಕೇಂದ್ರವಾಯಿತು. ಇಲ್ಲಿರುವ ಸಂತ ಜೋಸೆಫರ ದೇವಾಲಯದ ಆಶ್ರಯದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು ಸಂದರ್ಶನ ಎಂಬ ಸಂಸ್ಥೆಯೂ ಕುಷ್ಠರೋಗ ನಿವಾರಣೆಗಾಗಿ ಶ್ರಮಿಸುತ್ತಿದೆ.

ಜಿಲ್ಲೆಯಲ್ಲಿ ಪ್ರೊಟೆಸ್ಟಂಟ್ ಪ್ರಭಾವವು ೧೯ನೇ ಶತಮಾನದಲ್ಲಿ ಆಂಗ್ಲ ಶಾಲೆಗಳನ್ನು ತೆರೆಯುವುದರ ಮೂಲಕ ಪ್ರಾರಂಭವಾಯಿತೆಂದೂ ಹಾಗೂ ವೆಸ್ಲಿಯನ್ ಮೆಥೊಡಿಸ್ಟ್ ಸಂಘದವರ ಕಾರ್ಯ ಚಟುವಟಿಕೆಯ ಫಲವಾಗಿ ಪ್ರೊಟೆಸ್ಟಂಟ್ ಪಂಗಡವು ಜಿಲ್ಲೆಯಲ್ಲಿ ಬೆಳೆಯಲು ನೆರವಾಯಿತೆಂದೂ ತಿಳಿದುಬರುತ್ತದೆ. ಮಂಡ್ಯದಲ್ಲಿ ೧೯೨೪ರಲ್ಲಿ ಹಲವರಿಗೆ ಕ್ರೈಸ್ತ ದೀಕ್ಷೆ ನೀಡಲಾಯಿತೆಂದೂ ಹಾಗೂ ಜೋಮಿಯ ಡೇವಿಡ್, ಮೈಸೂರಿನ ಜಿ.ಡಬ್ಲ್ಯು. ಸಾಡೆ ಬೋಧಕರು, ಸಂಜೀವಮ್ಮ, ರೆಬೆಕ್ಕಮ್ಮ ಮೊದಲಾದವರು ಕ್ರೈಸ್ತ ಸುವಾರ್ತೆಯನ್ನು ಬೋಧಿಸುವುದರಲ್ಲಿ ಯಶಸ್ವಿಯಾದರೆಂಬ ಅಭಿಪ್ರಾಯವಿದೆ. ಮಂಡ್ಯದ ಇಂದಿನ ವಿದ್ಯಾನಗರ ಬಡಾವಣೆಯಲ್ಲಿರುವ ಪ್ರೊಟೆಸ್ಟಂಟ್‌ರ ದೇವಾಲಯವು ೧೯೩೭ರಲ್ಲಿ ನಿರ್ಮಿತವಾಗಿದ್ದೆಂದು ಹೇಳಲಾಗಿದೆ.

ಜಿಲ್ಲೆಯಲ್ಲಿ ಕಂಡುಬರುವ ಕ್ಯಾಥೊಲಿಕ್ ಚರ್ಚ್‌ಗಳೆಂದರೆ ಸಂತಜೋಸೆಫ್ ಚರ್ಚ್, ಮಂಡ್ಯ; ಇಮ್ಯಾಕುಲೇಟ್ ಕನ್‌ಸೆಪ್‌ಷನ್ ಚರ್ಚ್, ಗಂಜಾಂ (ಶ್ರೀರಂಗಪಟ್ಟಣ); ಸಂತ ಜಾನ್ ಬ್ಯಾಪ್ಟಿಸ್ಟ್ ಚರ್ಚ್ ಪಾಂಡವಪುರ; ಇನ್‌ಫೆಂಟ್ ಜೀಸಸ್ ಚರ್ಚ್, ಕೃಷ್ಣರಾಜಪೇಟೆ; ಅವರ್ ಲೇಡಿ ಆಫ್ ಹೆಲ್ತ್ ಚರ್ಚ್, ಮಳವಳ್ಳಿ, ಶಿಂಷಾ ಹಾಗೂ ಶಿವಸಮುದ್ರದಲ್ಲಿರುವ ಅದರ ಶಾಖೆಗಳು. ಪ್ರಾಟೆಸ್ಟಂಟ್ ಚರ್ಚ್‌ಗಳು ಚರ್ಚ್ ಆಫ್ ಸೌತ್ ಇಂಡಿಯ ಎಂದು ನಾಮಾಂಕಿತವಾಗಿದ್ದು, ಅವು ಮಂಡ್ಯ, ಸ್ವರ್ಣಸಂದ್ರ, ಲೋಕಸರ, ಕದಲೂರು (ಮದ್ದೂರು ತಾಲೂಕು) ಮದ್ದೂರು, ಶ್ರೀರಂಗಪಟ್ಟಣ, ನಾಗಮಂಗಲ ಮತ್ತು ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿಗಳಲ್ಲಿವೆ.

**ಸಿಖ್ಖ ಧರ್ಮ :** ಸಿಖ್ಖರು ಮೂಲತಃ ಪಂಜಾಬಿನಿಂದ ಬಂದವರೆಂದೂ ಹೈದರ್ ಹಾಗೂ ಟಿಪ್ಪು ಸುಲ್ತಾನರ ಕೈಕೆಳಗೆ ಉದ್ಯೋಗವನ್ನು ಹಿಡಿದು ನೆಲೆ ನಿಂತರೆಂದೂ ತಿಳಿದುಬರುತ್ತದೆ. ಇವರು ಕನ್ನಡ ಬಲ್ಲವರಾಗಿದ್ದು, ವ್ಯಾಪಾರ ವಹಿವಾಟು ಮಾಡುತ್ತಾರೆ. ಜಿಲ್ಲೆಯಲ್ಲಿ ಪ್ರಮುಖವಾಗಿ ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲೂಕಿನಲ್ಲಿ ಸಿಖ್ಖರು ಕಂಡುಬರುತ್ತಾರೆ. ಇವರು ಗುರುನಾನಕ್ ಜಯಂತಿಯನ್ನು ಕಾರ್ತಿಕಹುಣ್ಣಿಮೆಯಂದು ಆಚರಿಸುವರು.

**ಧಾರ್ಮಿಕ ಸಂಸ್ಥೆಗಳು :** ಧಾರ್ಮಿಕ ಸಂಸ್ಥೆಗಳು ಸಾಮಾಜಿಕ ಜೀವನಕ್ಕೆ ಪೂರಕವಾಗಿವೆ. ಹಲವು ಧಾರ್ಮಿಕ ಸಂಸ್ಥೆಗಳು ಕೇವಲ ಧಾರ್ಮಿಕ ಚಟುವಟಿಕೆಗಳನ್ನಲ್ಲದೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನೂ ಅನ್ನದಾಸೋಹ, ಪುರಾಣ–ಪ್ರವಚನ, ಉತ್ಸವ ಮೊದಲಾದ ಇತರ ಕಾರ್ಯಕ್ರಮಗಳನ್ನೂ ನಡೆಸುತ್ತವೆ.

**ಮಾಧ್ವ ಸಂಪ್ರದಾಯದ ಮಠಗಳು :** ಸೋಸಲೆ ವ್ಯಾಸರಾಯ ಮಠದ ವ್ಯಾಪ್ತಿಗೆ ಬರುವ ವ್ಯಾಸರಾಯ ಮಠಗಳು ಮಂಡ್ಯ ಮತ್ತು ಶ್ರೀರಂಗಪಟ್ಟಣದಲ್ಲಿವೆ. ಮಂಡ್ಯದ ವ್ಯಾಸರಾಯ ಮಠದಲ್ಲಿ ವ್ಯಾಸರಾಯರ ಮೃತ್ತಿಕಾ ಬೃಂದಾವನವನ್ನು ೧೯೫೨ರಲ್ಲಿ ಅಂದಿನ ಸೋಸಲೆ ಮಠದ ಪೀಠಾಧೀಶರಾಗಿದ್ದ ವಿದ್ಯಾ ಪ್ರಸನ್ನ ತೀರ್ಥರು ಪ್ರತಿಷ್ಠಾಪಿಸಿದರೆಂದೂ, ೧೯೪೪ರಲ್ಲಿ ವಿದ್ಯಾ ಪಯೋನಿಧಿ ತೀರ್ಥರು ರಾಘವೇಂದ್ರಸ್ವಾಮಿಗಳ ಮೃತ್ತಿಕಾ ಬೃಂದಾವನವನ್ನು ಪ್ರತಿಷ್ಠಾಪಿಸಿದರೆಂದೂ ತಿಳಿದುಬರುತ್ತದೆ. ಈ ಮಠದ ಆಶ್ರಯದಲ್ಲಿ ಹರಿದಾಸರ, ವ್ಯಾಸರಾಯರ ಹಾಗೂ ರಾಘವೇಂದ್ರಸ್ವಾಮಿಗಳ ಆರಾಧನೆ, ಮಧ್ವನವಮಿ ಮೊದಲಾದವಲ್ಲದೆ, ವಿಶೇಷ ಸಂದರ್ಭಗಳಲ್ಲಿ ಪ್ರವಚನ, ಸಂಗೀತ ಕಾರ್ಯಕ್ರಮ, ರಸಪ್ರಶ್ನೆ ಸ್ಪರ್ಧೆ, ಧರ್ಮೋಪನಯನ ಮುಂತಾದ ಕಾರ್ಯಕ್ರಮಗಳೂ ನಡೆಯುತ್ತವೆ. ಈ ಮಠದ ಬೆಳ್ಳಿ ಹಬ್ಬವನ್ನು ೧೯೭೮ರಲ್ಲಿ ಆಚರಿಸಲಾಯಿತು.

ಶ್ರೀರಂಗಪಟ್ಟಣದ ವ್ಯಾಸರಾಜ ಮಠದಲ್ಲಿ ಜಯತೀರ್ಥರು, ಶ್ರೀಪಾದರಾಜರು, ವ್ಯಾಸರಾಜರು ಹಾಗೂ ರಾಘವೇಂದ್ರಸ್ವಾಮಿಗಳ ಮೂಲ ಮೃತ್ತಿಕೆಗಳ ಬೃಂದಾವನವಿದೆ.

## ವೀರಶೈವ ಮಠಗಳು

**ಧನಗೂರು ಮಠ :** ಮಳವಳ್ಳಿ ತಾಲೂಕಿನ ಧನಗೂರಿನಲ್ಲಿರುವ ವೀರಸಿಂಹಾಸನ ಸಂಸ್ಥಾನಮಠವು ರಂಭಾಪುರಿ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ಉದ್ಧಾನ ಶಿವಯೋಗಿಯು ಈ ಮಠದ ಆದ್ಯಗುರು ಎಂದು ತಿಳಿದುಬಂದಿದೆ. ೧೭ನೇ ಶತಮಾನದಲ್ಲಿದ್ದ ಷಡಕ್ಷರದೇವನು ಈ ಗುರುಪರಂಪರೆಯಲ್ಲಿ ೫ನೇ ಪೀಠಾಧಿಪತಿಯಾಗಿದ್ದು, ಆತನಿಗೆ ಮುಮ್ಮಡಿ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿ ಎಂಬ ಹೆಸರು ಇದ್ದಿತು. ಸಂಸ್ಕೃತದಲ್ಲಿ ಕವಿ ಕರ್ಣ ರಸಾಯನ, ಕನ್ನಡದಲ್ಲಿ ಶಬರ ಶಂಕರ ವಿಳಾಸ, ರಾಜಶೇಖರ ವಿಳಾಸ ಮೊದಲಾದ ಚಂಪೂ ಕಾವ್ಯಗಳನ್ನೂ ಬರೆದಿರುವ ಷಡಕ್ಷರದೇವನು ಸಾರಸ್ವತ ಜಗತ್ತಿನಲ್ಲಿಯೂ ಸ್ಮರಣೀಯನಾಗಿದ್ದಾನೆ.

**ಮಂಟೇಸ್ವಾಮಿಮಠ :** ಮಳವಳ್ಳಿ ತಾಲೂಕಿನ ಬೊಪ್ಪಗೌಡನಪುರದಲ್ಲಿರುವ ಈ ಮಠವು ಮಂಟೇಸ್ವಾಮಿಯಿಂದಾಗಿ ವಿಶೇಷ ಮಹತ್ವವನ್ನು ಪಡೆದಿದೆ. ಮಾದೇಶ್ವರನ ಹಾಗೆ ತನ್ನ ಪವಾಡಗಳಿಂದ ಅಪಾರ ಭಕ್ತವರ್ಗವನ್ನು ಪಡೆದು ಈ ಭಾಗದಲ್ಲಿ ಹೊಸ ಪಂಥವನ್ನು ಪ್ರಚುರಪಡಿಸಿದ ಮಂಟೇಸ್ವಾಮಿಯ ಗದ್ದುಗೆಯು ಈ ಊರಿನಲ್ಲಿದೆ.

ಮಂಟೇಸ್ವಾಮಿಯ ತತ್ವ, ಕಥಾನಕಗಳನ್ನು ಬಹು ಸೊಗಸಾಗಿ ಹಾಡುವ ನೀಲಗಾರರು ನಿಮ್ನವರ್ಗಕ್ಕೆ ಸೇರಿದವರಾಗಿದ್ದು, ಅವರು ಮಂಟೇಸ್ವಾಮಿಯ ಗುಡ್ಡರಾಗಿ ದೀಕ್ಷೆ ಪಡೆದವರಾಗಿರುತ್ತಾರೆ. ಯುಗಾದಿ ಸಂದರ್ಭದಲ್ಲಿ ನಡೆಯುವ ಜಾತ್ರೆಯ ವಿಶೇಷ ಆಚರಣೆಯಾದ ಪಂಕ್ತಿಸೇವೆಯಲ್ಲಿ ನೀಲಗಾರರು ಹಾಗೂ ಅಸಂಖ್ಯಾತ ಭಕ್ತರು ಭಾಗವಹಿಸುತ್ತಾರೆ.

**ಬೃಹನ್ಮಠ :** ಮಳವಳ್ಳಿ ತಾಲೂಕಿನ ಹಲಗೂರಿನಲ್ಲಿರುವ ಈ ಮಠವು, ಪಂಚಪೀಠಗಳಲ್ಲೊಂದಾದ ರಂಭಾಪುರಿ ಪೀಠದ ಸಂಪ್ರದಾಯಕ್ಕೆ ಸೇರಿದೆ. ಶಾಂತಲಿಂಗ ಸ್ವಾಮಿಗಳು ಈ ಮಠದ ಮೂಲ ಪೀಠಾಧೀಶರೆಂದು ವರದಿಯಾಗಿದೆ. ಆನಂತರದಲ್ಲಿ ಏಳನೇ ಪೀಠಾಧೀಶರಾಗಿ ಬಂದ ರುದ್ರಮುನೀಂದ್ರಸ್ವಾಮಿ ಕಾಲದಲ್ಲಿ ಭಕ್ತರ ಸಹಕಾರದೊಂದಿಗೆ ಈ ಮಠದ ಕಟ್ಟಡವು ನಿರ್ಮಾಣವಾಯಿತು. ಮುಂದೆ ೩೭ನೇ ಪೀಠಾಧೀಶರಾದ ವೀರಭದ್ರ ಶಿವಾಚಾರ್ಯರು ೧೯೬೫ರಲ್ಲಿ ಪಾರಮಾರ್ಥ ಧಾಮ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಮಠದ ಆಶ್ರಯದಲ್ಲಿ ಒಂದು ಸಂಸ್ಕೃತ–ವೇದ–ಜ್ಯೋತಿಷ್ಯ ಪಾಠಶಾಲೆ ಹಾಗೂ ಶಿವಯೋಗ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

**ಜಂಗಮಮಠ :** ಮಂಡ್ಯ ಸಮೀಪ ಗುತ್ತಲು ಗ್ರಾಮ (ಅರ್ಕೇಶ್ವರನಗರ) ದಲ್ಲಿರುವ ಈ ಮಠವು ರಂಭಾಪುರಿ ಪೀಠದ ಸಂಪ್ರದಾಯಕ್ಕೆ ಸೇರಿದ್ದು, ಪುತ್ರವರ್ಗ ಪರಂಪರೆಯ ಮಠವಾಗಿದೆ. ಒಂದನೇ ತೋಟದಯ್ಯ ಸ್ವಾಮಿ, ಇಮ್ಮಡಿ ತೋಟದಯ್ಯಸ್ವಾಮಿ ಹಾಗೂ ಚಂದ್ರಶೇಖರಸ್ವಾಮಿ ಅವರು ಕ್ರಮವಾಗಿ ಇತ್ತೀಚಿನ ಪುತ್ರವರ್ಗ ಪರಂಪರೆಯಲ್ಲಿ ಬಂದಿರುವ ಮೂವರು ಪೀಠಾಧೀಶರು ಎಂದು ತಿಳಿದುಬಂದಿದೆ.

ಚಂದ್ರಶೇಖರಸ್ವಾಮಿಗಳು ೧೯೫೦ರಲ್ಲಿ ಶಿವೈಕ್ಯರಾದನಂತರ ಸುಮಾರು ೨೫ ವರ್ಷಗಳ ಕಾಲ ಈ ಮಠಕ್ಕೆ ಮಠಾಧಿಪತಿಗಳಿರಲಿಲ್ಲ. ಆನಂತರ ೧೯೭೬ರಲ್ಲಿ ತೋಂಟದ ಶಿವಾಚಾರ್ಯಸ್ವಾಮಿಗಳು ಈ ಮಠಕ್ಕೆ ಪೀಠಾಧೀಶರಾಗಿ ಬಂದು ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನೆರವಾದರು. ಪ್ರಸ್ತುತ, ಚಂದ್ರಶೇಖರ ಶಿವಾಚಾರ್ಯರು ಈ ಮಠದ ಪೀಠಾಧೀಶರಾಗಿದ್ದಾರೆ. ಒಂದನೇ ತೋಟದಯ್ಯಸ್ವಾಮಿಗಳ ಗದ್ದುಗೆಯೂ ಈ ಮಠದಲ್ಲಿದೆ.

ಜಿಲ್ಲೆಯಲ್ಲಿರುವ ಇತರ ಕೆಲವು ಪ್ರಮುಖ ವೀರಶೈವ ಮಠಗಳ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ.

ಮದ್ದೂರು ತಾಲೂಕಿನ ಹೊನ್ನಲಗೆರೆ ಮತ್ತು ಮಡೇನಹಳ್ಳಿಯ ಪಟ್ಟದಮಠ, ಮಠದ ದೊಡ್ಡಿ ಮಠ, ವೈದ್ಯನಾಥಪುರದ ಕಂಬದಮಠ, ಕುಂದೂರಿನ ಸರ್ಪಭೂಷಣ ಮಠ, ದೊಡ್ಡ ಮಠ ಮತ್ತು ಬೆಟ್ಟದ ಮಠ, ಬೊಪ್ಪಗೌಡನಪುರದ ಆಹಾರಮಠ, ಬೆಳಕವಾಡಿ ಮಠ, ಹೊಸಹಳ್ಳಿಯ ಸಿದ್ಧಮಲ್ಲೇಶ್ವರ ಮಠ, ಸರಗೂರು ಮಠ ಹಾಗೂ ದೊಡ್ಡ ಬೂಹಳ್ಳಿಯ ಪಟ್ಟದಮಠ, ಮಂಡ್ಯ ತಾಲೂಕಿನ ಪುರದ ಮಠ, ಕಬ್ಬಿಹಳ್ಳಿಯ ಹೊನಗನಹಳ್ಳಿ ಮಠ ಹಾಗೂ ಆಲಕೆರೆ ಮಠ, ಪಾಂಡವಪುರ ತಾಲೂಕಿನ ಚಿನಕುರುಳಿಯ ಬೇಬಿಮಠ ಹಾಗೂ ಕೃಷ್ಣರಾಜಪೇಟೆ ತಾಲೂಕಿನ ತೆಂಡೆಕೆರೆ ಮಠ, ಕಾಪನಹಳ್ಳಿಯ ಗವಿಮಠ, ನಾಗಮಂಗಲ ತಾಲೂಕಿನ ಆಲತಿಗಿರಿ, ಮಳವಳ್ಳಿ ತಾಲೂಕಿನ ಹಲಸಳ್ಳಿ ಗವಿಮಠ, ಪೂರಿಗಾಲಿ ಮಠ, ಹುಲ್ಲಂಬಳ್ಳಿಯ ಮಠ ಇತ್ಯಾದಿ.

**ಶ್ರೀಆದಿಚುಂಚನಗಿರಿ ಮಹಾಸಂಸ್ಥಾನ ಮಠ :** ಇದು ನಾಗಮಂಗಲ ತಾಲೂಕಿನಲ್ಲಿನ ಪ್ರಾಚೀನ ಮಠವಾಗಿದ್ದು ಶ್ರೀಆದಿಚುಂಚನಗಿರಿಕ್ಷೇತ್ರವೆಂದೇ ಪ್ರಸಿದ್ಧಿಯಾಗಿದೆ. ಒಂದು ಕಾಲದಲ್ಲಿ ಇದು ನಾಥಪಂಥದ ತಾಣವಾಗಿದ್ದು, ಇಲ್ಲಿ ಸ್ಥಾಪಿತವಾದ ಮಠ ಈ ಸಂಪ್ರದಾಯದ ಆದಿಪೀಠವಾಗಿತ್ತೆಂದು ಹೇಳಲಾಗಿದೆ. ಈ ಕ್ಷೇತ್ರದಲ್ಲಿ ಗಂಗಾಧರೇಶ್ವರ, ಭೈರವೇಶ್ವರ, ಚಂದ್ರಮೌಳೀಶ್ವರ ಮತ್ತಿತರ ಗುಡಿಗಳೂ ಮಂಟಪಗಳೂ ಇರುವುದಲ್ಲದೆ ಭಕ್ತನಾಥಸ್ವಾಮಿ, ಚಂದ್ರಶೇಖರನಾಥಸ್ವಾಮಿ ಹಾಗೂ ರಾಮಾನಂದನಾಥಸ್ವಾಮಿ ಅವರ ಗದ್ದುಗೆಗಳೂ ಇವೆ. ಶೈವ ಮತಾವಲಂಬಿಗಳಿಗೆ ಅದರಲ್ಲೂ ಒಕ್ಕಲಿಗ ಜನಾಂಗದವರಿಗೆ ಇದೊಂದು ಪ್ರಮುಖ ಧಾರ್ಮಿಕ ಸ್ಥಳವಾಗಿದ್ದು, ಇತರೆ ವರ್ಗದ ಜನಗಳೂ ಈ ಮಠದ ಅನುಯಾಯಿಗಳಾಗಿದ್ದಾರೆ. ಇದರ ಗುರುಪರಂಪರೆಯು ಸುದೀರ್ಘವಾಗಿದ್ದು, ಈಚಿನ ನಾಲ್ಕು ಮಠಾಧಿಪತಿಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಭಕ್ತನಾಥಸ್ವಾಮಿಗಳು ಸುಮಾರು ೪೦ ವರ್ಷ ಪೀಠಾಧೀಶರಾಗಿದ್ದು, ಈ ಅವಧಿಯಲ್ಲಿ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗೆ ಅಡಿಪಾಯ ಹಾಕಿ ೧೯೬೭ರಲ್ಲಿ ಶಿವೈಕ್ಯರಾದರೆಂದೂ, ತರುವಾಯ ಬಂದ ಚಂದ್ರಶೇಖರನಾಥಸ್ವಾಮಿಗಳು ಈ ಕ್ಷೇತ್ರದ ಯಶಸ್ಸಿಗಾಗಿ ಹಲವಾರು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆಂದೂ ತಿಳಿದುಬರುತ್ತದೆ. ಮಠದ ಆಶ್ರಯದಲ್ಲಿ ಸಾಮೂಹಿಕ ವಿವಾಹಗಳನ್ನು ನೆರವೇರಿಸುವುದು, ಮಾಧ್ಯಮಿಕ ಶಾಲೆ ಮತ್ತು ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದುದು ಇವರು ಪೀಠಾಧೀಶರಾಗಿದ್ದ ಹನ್ನೊಂದು ತಿಂಗಳ ಅವಧಿಯಲ್ಲಿ ಮಾಡಿದ ಕೆಲವು ಪ್ರಮುಖ ಸಾಧನೆಗಳಾಗಿವೆ. ಇವರ ಆನಂತರ ಪೀಠಾಧೀಶರಾಗಿದ್ದ ರಾಮಾನಂದನಾಥರು ಮಠದ ಬೆಳವಣಿಗೆಗಾಗಿ ಶ್ರಮಿಸಿ, ೧೯೭೪ರಲ್ಲಿ ಶಿವೈಕ್ಯರಾದಾಗ ಅದೇ ವರ್ಷ ಬಾಲಗಂಗಾಧರನಾಥಸ್ವಾಮಿಯವರು ಈ ಕ್ಷೇತ್ರದ ಪೀಠವನ್ನು ಅಲಂಕರಿಸಿದರು. ಮಠದ ಖ್ಯಾತಿಯು ದೇಶ–ವಿದೇಶಗಳಲ್ಲಿ ಬೆಳಗುವಂತೆ, ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಮಹತ್ವದ ಕಾರ್ಯ ಸಾಧನೆಗಳನ್ನು ಇವರು ಮಾಡಿರುತ್ತಾರೆ. ಪ್ರಸ್ತುತ, ಈ ಮಠದ ಆಶ್ರಯದಲ್ಲಿ ಪ್ರಾಥಮಿಕ ಹಂತದಿಂದ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣದವರೆಗೆ ಶಾಲಾ ಕಾಲೇಜು, ಸಂಸ್ಕೃತ ಪಾಠಶಾಲೆ, ಅನಾಥಾಲಯ ಮತ್ತು ವಿದ್ಯಾರ್ಥಿನಿಲಯಗಳು ಹಾಗೂ ಆಸ್ಪತ್ರೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ತಮಿಳುನಾಡಿನ ಮಧುರೈ ಜಿಲ್ಲೆಯ ಕಂಬಂನಲ್ಲಿಯೂ ಮಠದ ಮಹಿಳಾ ಕಾಲೇಜು ಕಾರ್ಯ ನಿರ್ವಹಿಸುತ್ತಿದೆ. ಬಾಲಗಂಗಾಧರನಾಥಸ್ವಾಮಿಯವರ ಪಟ್ಟಾಭಿಷೇಕದ ೨೫ನೇ ವಾರ್ಷಿಕೋತ್ಸವವನ್ನು (ಬೆಳ್ಳಿಹಬ್ಬ) ೨೦೦೦ದ ಸೆಪ್ಟೆಂಬರ್ ತಿಂಗಳಿನಲ್ಲಿ ಆಚರಿಸಲಾಯಿತು. ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ೨೨–೯–೧೯೭೬ರಿಂದ ಪ್ರಾರಂಭವಾದ ರಾಜ್ಯಮಟ್ಟದ ಭೈರವೇಶ್ವರ ಜನಪದ ಗೀತ ಗಾಯನ ಮೇಳ ಪ್ರತೀವರ್ಷ ಇಲ್ಲಿ ನಡೆಯುತ್ತಿದೆ. ಆಗ ರಾಜ್ಯದ ಯಾವುದೇ ಭಾಗದಿಂದ ಬಂದು ಕ್ಷೇತ್ರದ ದೇವರು, ಜಾತ್ರೆ ಇತ್ಯಾದಿ ಕುರಿತು ಹಾಡುವ ಜನಪದ ಗಾಯಕರಿಗೆ ಉಚಿತ ಊಟ ವಸತಿಯೊಂದಿಗೆ ಸೂಕ್ತ

ಬಹುಮಾನ ಹಾಗೂ ಪ್ರಯಾಣ ವೆಚ್ಚವನ್ನೂ ನೀಡುವುದು ವಿಶೇಷ ಉಲ್ಲೇಖನೀಯವಾಗಿದೆ. ಪ್ರತೀವರ್ಷ ಕಾಮನ ಹುಣ್ಣಿಮೆಯ ಸಮಯದಲ್ಲಿ ಪ್ರಸಿದ್ಧ ಚುಂಚನಗಿರಿ ಜಾತ್ರೆಯು ಸುಮಾರು ಒಂದು ವಾರ ನಡೆಯುತ್ತದೆ. ಮಠದ ವತಿಯಿಂದ ಸುಮಾರು ೩೦ ಕೋಟಿ ರೂ.ವೆಚ್ಚದಲ್ಲಿ ದ್ರಾವಿಡ ಶೈಲಿಯ ಬೃಹತ್ ಕಾಲ ಭೈರವ ದೇವಾಲಯದ ನಿರ್ಮಾಣವೂ ಆಗುತ್ತಿದೆ (ಅಧ್ಯಾಯ ೧೩ ಮತ್ತು ಅಧ್ಯಾಯ ೧೭ನ್ನೂ ನೋಡಿ).

**ಜಾತಿ ಮತ್ತು ಬುಡಕಟ್ಟುಗಳು**

ಜಾತಿ ಪದ್ಧತಿಯು ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದ್ದು, ಇತರ ಕಡೆಗಳಲ್ಲಿ ಕಂಡುಬರುವಂತೆ ಈ ಜಿಲ್ಲೆಯಲ್ಲಿಯೂ ಅನೇಕ ಜಾತಿ ಹಾಗೂ ಉಪ–ಜಾತಿಗಳನ್ನು ಕಾಣಬಹುದಾಗಿದೆ. ರಿಸ್ಲೆಯವರ ಪ್ರಕಾರ ಜಾತಿ ಎಂದರೆ ಒಬ್ಬ ಮಾನವ ಅಥವಾ ದೈವ ಸಂಭೂತನಾದ ಕಾಲ್ಪನಿಕ ಪೂರ್ವಜನಿಂದ ತಮ್ಮ ವಂಶವನ್ನು ಗುರುತಿಸುವ ಕೆಲವು ಕುಟುಂಬಗಳ ಸಮೂಹ. ಅದು ಒಂದು ಸಮರೂಪವುಳ್ಳ ಸಮುದಾಯ. ಜಾತಿ ಪದ್ಧತಿಯಲ್ಲಿ ವೈವಿಧ್ಯಮಯ ಗುಂಪುಗಳಿದ್ದು, ವಿವಾಹ ಸಂಬಂಧಗಳು ಆಯಾ ಗುಂಪುಗಳ ಪರಿಮಿತಿಯಲ್ಲಿಯೇ ನಡೆಯುತ್ತವೆ. ಅಯಾ ಜಾತಿಯು ಬಹುಮಟ್ಟಿಗೆ ವಂಶಪಾರಂಪರ್ಯವಾಗಿ ಬಂದ ವೃತ್ತಿಯನ್ನು ಅನುಸರಿಸುವುದಾದರೂ ಇತ್ತೀಚಿನ ದಿನಗಳಲ್ಲಿ ಅದು ಕೆಲವು ಬದಲಾವಣೆಗಳಿಗೂ ಒಳಗಾಗಿದೆ. ಉಡುಗೆ–ತೊಡುಗೆ, ಆಹಾರಾಭ್ಯಾಸ, ವಿವಾಹ, ಅಂತ್ಯಕ್ರಿಯೆ ಮೊದಲಾದ ಧಾರ್ಮಿಕಾಚರಣೆ ಹಾಗೂ ರೂಢಿ–ಪದ್ಧತಿಗಳು ಜಾತಿಯಿಂದ ಜಾತಿಗೆ ವಿಭಿನ್ನವಾಗಿವೆ.

ಬುಡಕಟ್ಟು ಎಂಬುದು ಅನೇಕ ಕುಲಗಳು, ಅಲೆಮಾರಿ ತಂಡಗಳು ಅಥವಾ ನಿಶ್ಚಿತ ಭೌಗೋಳಿಕ ಪ್ರದೇಶದೊಳಗೆ ವಾಸಿಸುವ ಜನಗಳ ಒಂದು ಸಮೂಹ. ಇವರಲ್ಲಿ ಪ್ರತ್ಯೇಕ ಉಪಭಾಷೆ, ವಿಶಿಷ್ಟ ಸಂಸ್ಕೃತಿ ಹಾಗೂ ಒಂದು ಸಾಮಾನ್ಯ ಸಾಮಾಜಿಕ ವ್ಯವಸ್ಥೆ ಕಾಣಬರುವುದು. ಇತರರಿಗಿಂತ ತಾವು ಬೇರೆ ಎಂಬ ಏಕತಾ ಭಾವನೆಯೂ ಈ ಒಳಗುಂಪುಗಳ ಸಮೂಹದಲ್ಲಿರುತ್ತದೆ. ಇವರು ಸಾಮಾನ್ಯವಾಗಿ ಆಧುನಿಕ ಜಗತ್ತಿನಿಂದ ಪ್ರತ್ಯೇಕವಾಗಿ ವಾಸಿಸಲು ಬಯಸುತ್ತಾರೆ. ಜಿಲ್ಲೆಯ ಕೆಲವು ಜಾತಿ ಮತ್ತು ಬುಡಕಟ್ಟಗಳ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳ ಬಗ್ಗೆ ಸಂಕ್ಷಿಪ್ತವಾಗಿ ಈ ಮುಂದೆ ವಿವರಿಸಲಾಗಿದೆ:

**ಅಗಸ :** ಅಗಸರನ್ನು ದೋಬಿ, ಮಡಿವಾಳ ಮೊದಲಾದ ಹೆಸರುಗಳಿಂದಲೂ ಕರೆಯುವುದುಂಟು. ಬಟ್ಟೆ ಸ್ವಚ್ಛ ಮಾಡುವುದು, ವಿವಾಹ, ದೇವರ ಉತ್ಸವ ಮೊದಲಾದ ಸಂದರ್ಭಗಳಲ್ಲಿ ಬಟ್ಟೆ (ಮಡಿ) ಹಾಸುವುದು ಹಾಗೂ ಪತ್ತು (ದೀವಟಿಗೆ) ಹಿಡಿಯುವುದು ಇವರ ವಂಶಪಾರಂಪರ್ಯವಾದ ವೃತ್ತಿ ಆಗಿದೆ. ಈಚೆಗೆ ಇವರು ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯತಿ ಇದೆ. ಕನ್ನಡ ಭಾಷಿಕರಾದ ಇವರು ಗೌರಿಹಬ್ಬದ ಸಮಯದಲ್ಲಿ ಭೂಮಿದೇವರನ್ನೂ, ಆನಂತರ ಉಬ್ಬೆ ಪೂಜೆ ಯನ್ನೂ ಮಾಡುತ್ತಾರೆ. ಇವರಲ್ಲಿ ಅನೇಕ ಕುಲಗಳಿದ್ದು, ಒಂದೇ ಕುಲದಲ್ಲಿ ವಿವಾಹ ಸಂಬಂಧ ಬೆಳೆಸುವ ಪದ್ಧತಿಯಿಲ್ಲ. ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲೇ ನಡೆಯುತ್ತದೆ. ತೆರ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಇವರಲ್ಲಿ ರೂಢಿಯಲ್ಲಿವೆ. ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಇವರು ಮಾಂಸಾಹಾರಿಗಳು. ಗ್ರಾಮದೇವತೆಗಳನ್ನು ಪೂಜಿಸುವ ಇವರು ತಿರುಪತಿ ವೆಂಕಟರಮಣಸ್ವಾಮಿ, ನರಸಿಂಹಸ್ವಾಮಿ ಮೊದಲಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಇವರು ಮೃತರನ್ನು ಹೂಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಗ್ನಿ ಸಂಸ್ಕಾರ ಮಾಡುವುದೂ ಉಂಟು.

**ಈಡಿಗ :** ಸೇಂದಿ ಇಳಿಸುವುದು ಇವರ ಸಾಂಪ್ರಾದಾಯಿಕ ಉದ್ಯೋಗವಾಗಿದ್ದಿತು. ಈಚೆಗೆ ವ್ಯಾಪಾರ, ಬೇಸಾಯ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಮಡ್ಡಿ ಈಡಿಗರು ಮತ್ತು ಬೆಲ್ಲದ ಈಡಿಗರು

ಎಂಬ ಎರಡು ಪ್ರಧಾನ ಪಂಗಡಗಳಲ್ಲದೆ ಅನೇಕ ಒಳಪಂಗಡಗಳೂ ಇವೆ. ಇವರು ತೆಲುಗು ಪ್ರದೇಶಗಳಿಂದ ಬಂದು ನೆಲೆಸಿರಬಹುದೆಂಬ ಅಭಿಪ್ರಾಯವಿದೆ. ಕನ್ನಡ ಭಾಷಿಕರಾದ ಇವರಲ್ಲಿ ಜಾತಿ ಪಂಚಾಯಿತಿ ಇದೆ. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ವಿಧವಾವಿವಾಹ ಹಾಗೂ ವಿವಾಹವಿಚ್ಛೇದನ ರೂಢಿಯಲ್ಲಿವೆ. ಇವರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದು ಮುನೇಶ್ವರ, ಮಾರಿಯಮ್ಮ, ದುರ್ಗಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಮೃತರನ್ನು ಹೂಳುವ ಸಂಪ್ರದಾಯವಿದೆ.

**ಉಪ್ಪಾರ :** ಇವರು ಮಂಡ್ಯ, ನಾಗಮಂಗಲ, ಪಾಂಡವಪುರ, ಮದ್ದೂರು ಮತ್ತು ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮೇಲುಸಕ್ಕರೆಯವರು, ಸಾಗರವಂಶದವರು, ಭಗೀರಥ ವಂಶದವರು ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುವ ಇವರ ಮೂಲ ಉದ್ಯೋಗ ಉಪ್ಪನ್ನು ತಯಾರಿಸುವುದಾಗಿದ್ದಿತು. ಈಚೆಗೆ ಕಟ್ಟಡದ ಕೆಲಸ, ಕೂಲಿ, ಒಕ್ಕಲುತನ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಗಾರೆಉಪ್ಪಾರರು, ಸುಣ್ಣಉಪ್ಪಾರರು, ಸೊಪ್ಪುಉಪ್ಪಾರರು ಮೊದಲಾದ ಪಂಗಡಗಳಿವೆ. ಸಾಂಪ್ರದಾಯಿಕವಾಗಿ ಈ ಪಂಗಡಗಳಲ್ಲಿ ಪರಸ್ಪರ ವಿವಾಹ ಸಂಬಂಧ ಮಾಡುವಂತಿಲ್ಲ. ಕನ್ನಡ ಭಾಷಿಕರಾದ ಇವರಲ್ಲಿ ಅನೇಕ ಕುಲಗಳಿವೆ. ಜಾತಿಪಂಚಾಯಿತಿ ಇದ್ದು ಯಜಮಾನನ ನೇತೃತ್ವದಲ್ಲಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವರು. ಗಂಡಿನ ಕಡೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ತೆರ ಪದ್ಧತಿ ರೂಢಿಯಲ್ಲಿದೆ. ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುವರು. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ಮಾಂಸಾಹಾರ ಸೇವಿಸುವುದು ರೂಢಿಯಲ್ಲಿದೆ. ಹೊಸದುರ್ಗ ತಾಲೂಕಿನ ಬ್ರಹ್ಮ ವಿದ್ಯಾನಗರದಲ್ಲಿ ಈ ಸಮಾಜದ ಮಠವಿದೆ ; ಬೆಂಗಳೂರಿನಲ್ಲಿ ಶ್ರೀಭಗೀರಥ ಉಪ್ಪಾರ ಧಾರ್ಮಿಕ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ.

ಇವರು ತಮ್ಮ ಕುಲದೇವತೆಯೊಂದಿಗೆ ಮಾರಮ್ಮ, ಸೋಮನಾಳಮ್ಮ, ಉಕ್ಕಡದಮ್ಮ ಮೊದಲಾದ ಗ್ರಾಮದೇವತೆಯರನ್ನೂ ಪೂಜಿಸುತ್ತಾರೆ. ನಂಜನಗೂಡಿನ ಶ್ರೀಕಂಠೇಶ್ವರ, ತಿರುಪತಿ ವೆಂಕಟರಮಣ, ಯೋಗಾನರಸಿಂಹಸ್ವಾಮಿ, ಚಾಮುಂಡೇಶ್ವರಿ, ಯಲ್ಲಮ್ಮ ಮೊದಲಾದ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ಇವರಲ್ಲಿ ಶವವನ್ನು ಹೂಳುವ ಸಂಪ್ರದಾಯವಿದ್ದು ಕೆಲವು ಸಂದರ್ಭಗಳಲ್ಲಿ ಅಗ್ನಿಸಂಸ್ಕಾರ ಮಾಡುತ್ತಾರೆ.

**ಒಕ್ಕಲಿಗ :** ಒಕ್ಕಲಿಗ ಎಂದರೆ ಒಕ್ಕಲುತನ ಅಥವಾ ಬೇಸಾಯ ಮಾಡುವವನು ಎಂದರ್ಥ. ಒಕ್ಕು ಎಂಬ ಧಾತುವಿನಿಂದ ಒಕ್ಕಲು, ಒಕ್ಕಲಿಗ ಎಂಬ ಪದಗಳು ಬಂದಿವೆ. ಬೇಸಾಯ ಮಾಡುವುದು ಸಾಂಪ್ರದಾಯಿಕ ಉದ್ಯೋಗವಾದರೂ ಇತ್ತೀಚಿನ ದಿನಗಳಲ್ಲಿ ಇವರು ವ್ಯಾಪಾರ, ನೌಕರಿ ಮೊದಲಾದ ಇತರ ಉದ್ಯೋಗಗಳಲ್ಲೂ ತೊಡಗಿದ್ದಾರೆ. ಇವರಲ್ಲಿ ಗಂಗಡಿಕಾರ, ಕುಂಚಿಟಿಗ, ರೆಡ್ಡಿ, ಮೊರಸು, ಹಳ್ಳಿಕಾರ, ದಾಸೊಕ್ಕಲಿಗ, ಚೋಳೂರು ಒಕ್ಕಲಿಗ ಮೊದಲಾದ ಪಂಗಡಗಳಿದ್ದು, ಜಿಲ್ಲೆಯಲ್ಲಿ ಹೆಚ್ಚಾಗಿ ಗಂಗಡಿಕಾರರೇ ಕಂಡುಬರುತ್ತಾರೆ. ಇವರು ಕನ್ನಡ ಭಾಷಿಕರು (ರೆಡ್ಡಿ ಒಕ್ಕಲಿಗರು ತೆಲುಗು ಮಾತನಾಡುವುದೂ ಉಂಟು).

ಗಂಗಡಿಕಾರರೆಂಬ ಹೆಸರು ಗಂಗವಾಡಿಕಾರ (ಎಂದರೆ ಗಂಗವಂಶದ ರಾಜರು ಆಳುತ್ತಿದ್ದ ಗಂಗವಾಡಿ ಪ್ರದೇಶದಿಂದ ಬಂದವನು) ಎಂಬ ಪದದಿಂದ ಬಂದಿರಬಹುದೆಂಬ ಅಭಿಪ್ರಾಯವಿದೆ. ತಮ್ಮನ್ನು ಹದಿನಾರು ಬಣ್ಣದವರೆಂದು ಹೇಳಿಕೊಳ್ಳುವ ಗಂಗಡಿಕಾರರಲ್ಲಿ ಪೆಟ್ಟಿಗೆಯವರು (ವಿವಾಹ ಸಂದರ್ಭದಲ್ಲಿ ವಿವಾಹದ ಸಾಮಗ್ರಿಗಳನ್ನು ಬಿದಿರಿನ ಪೆಟ್ಟಿಗೆಯಲ್ಲಿ ಕೊಂಡೊಯ್ಯುವವರು) ಮತ್ತು ಬಿಜ್ಜಣಿಗೆಯವರು (ವಿವಾಹದ ಸಾಮಗ್ರಿಗಳನ್ನು

ಮುಚ್ಚಿದ ಬುಟ್ಟಿಯಲ್ಲಿ ಕೊಂಡೊಯ್ಯುವವರು) ಎಂಬ ಎರಡು ಒಳವಿವಾಹದ ಪ್ರಮುಖ ಪಂಗಡಗಳಿವೆ. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಯಜಮಾನ ಇದರ ಮುಖ್ಯಸ್ಥನಾಗಿರುತ್ತಾನೆ. ಇವರಲ್ಲಿ ಶೈವ ಹಾಗೂ ವೈಷ್ಣವ ಮತಾವಲಂಬಿಗಳಿದ್ದಾರೆ. ಈ ಜನಾಂಗದಲ್ಲಿ ಬೆಳ್ಳಿ, ಛತ್ರಿ, ಆನೆ, ಎಮ್ಮೆ, ಚಂದ್ರ, ಗುಡಿ, ಚಿನ್ನದಕೊಂಬೆ, ಬೇವು ಮೊದಲಾದ ಸುಮಾರು ೪೦ ಕುಲಗಳಿವೆ. ಈ ಕುಲಗಳಿಗೆ ಅನುಗುಣವಾಗಿ ಪ್ರತ್ಯೇಕವಾದ ಗಂಡು, ಹೆಣ್ಣು ದೇವರು ಇದ್ದು, ಅವುಗಳನ್ನು ತಮ್ಮ ಕುಲದೇವರೆಂದು ವಿಶೇಷವಾಗಿ ಆರಾಧಿಸುತ್ತಾರೆ. ಒಂದೇ ಕುಲದಲ್ಲಿ ವಿವಾಹ ಸಂಬಂಧ ಬೆಳೆಸುವ ಸಂಪ್ರದಾಯವಿಲ್ಲ. ಗಂಡಿನ ಮನೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲಿ ನೆರವೇರುವುದು. ತೆರಪದ್ಧತಿ ರೂಢಿಯಲ್ಲಿದೆ. ಸಾಂಪ್ರದಾಯಿಕವಾಗಿ ಕೂಡಿಕೆ ಪದ್ಧತಿಯಿದ್ದು, ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ವಿವಾಹ ಮೊದಲಾದ ಧಾರ್ಮಿಕ ಕಾರ್ಯಗಳಿಗೆ ಇವರು ಬ್ರಾಹ್ಮಣ ಪುರೋಹಿತರನ್ನು ಆಮಂತ್ರಿಸುವುದು ರೂಢಿಯಲ್ಲಿದೆ. ಇವರು ಶ್ರಾವಣ ಮತ್ತು ಕಾರ್ತಿಕಮಾಸಗಳಲ್ಲಿ ಮಾಂಸಾಹಾರ ಸೇವಿಸುವುದಿಲ್ಲ. ಹುಟ್ಟು, ಸಾವುಗಳ ಸಂದರ್ಭಗಳಲ್ಲಿ ಮೈಲಿಗೆಯನ್ನು ಆಚರಿಸುತ್ತಿದ್ದು, ಆ ಸಮಯದಲ್ಲಿ ದೇವಾಲಯಗಳಿಗೆ ಮತ್ತು ಶುಭಕಾರ್ಯಗಳಿಗೆ ಹೋಗುವುದಿಲ್ಲ. ಮೃತರನ್ನು ಹೂಳುವ ಹಾಗೂ ಮೃತರು ಸಾಯುವುದಕ್ಕೆ ಮುಂಚೆಯೇ ತಮ್ಮ ಇಚ್ಛೆಯನ್ನು ತಿಳಿಸಿದ್ದರೆ ಅದರಂತೆ ಅಗ್ನಿಸಂಸ್ಕಾರ ಮಾಡುವ ಪದ್ಧತಿಯೂ ಇವರಲ್ಲಿವೆ. ಮಹಾಲಯ ಅಮಾವಾಸ್ಯೆಯ ದಿನ (ಕೆಲವರು ಮಖೆಹಬ್ಬದಂದು) ಇವರು ತಮ್ಮ ಹಿರಿಯರಿಗೆ ಎಡೆ ಇಡುವುದು ರೂಢಿಯಲ್ಲಿದೆ. ಇವರು ಆದಿಚುಂಚುನಗಿರಿಯ ಭೈರವೇಶ್ವರ, ನಂಜನಗೂಡು ಶ್ರೀಕಂಠೇಶ್ವರ, ಮಲೆಮಹದೇಶ್ವರ, ತಿರುಪತಿ ವೆಂಕಟರಮಣ, ಮೇಲುಕೋಟೆಯ ಯೋಗಾನರಸಿಂಹ ಮತ್ತು ಚೆಲುವನಾರಾಯಣ, ಚಾಮುಂಡೇಶ್ವರಿ, ಸಾಕಮ್ಮ, ಮಾರಮ್ಮ, ಪಟ್ಟಲದಮ್ಮ ಮೊದಲಾದ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ಇವರಲ್ಲಿ ಆದಿಚುಂಚನಗಿರಿಮಠ ಹಾಗೂ ಸಿರಾ ತಾಲೂಕಿನ ಪಟ್ಟನಾಯಕನಹಳ್ಳಿಯ ಗುರುಗುಂಡನಮಠಕ್ಕೆ ನಡೆದುಕೊಳ್ಳುವವರೂ ಇದ್ದಾರೆ.

**ಕುರುಬ:** ಕುರಿ ಸಾಕಾಣಿಕೆ ಹಾಗೂ ಕಂಬಳಿ ನೇಯುವುದು ಕುರುಬರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಈಚೆಗೆ ಇವರು ಕೂಲಿ, ಒಕ್ಕಲುತನ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಹಾಲು ಕುರುಬರು, ಹಂಡೆ ಕುರುಬರು ಮತ್ತು ಕಂಬ್ಳಿ ಕುರುಬರು ಎಂಬ ಮೂರು ಒಳ ವಿವಾಹ ವಿಭಾಗಗಳಿದ್ದು ಪ್ರತಿಯೊಂದು ವಿಭಾಗದಲ್ಲಿಯೂ ಗಿಡ, ಮರ, ಪ್ರಾಣಿಗಳ ಕುಲಲಾಂಛನ ಹೊಂದಿರುವ ಹಲವು ಹೊರವಿವಾಹದ ಪಂಗಡಗಳಿವೆ. ಇವರನ್ನು ಹತ್ತಿಕಂಕಣದವರು ಮತ್ತು ಉಣ್ಣೆಕಂಕಣದವರು ಎಂದೂ ವಿಭಾಗಿಸಲಾಗಿದ್ದು, ಒಂದೇ ಕುಲದಲ್ಲಿ ವಿವಾಹವಾಗುವ ಸಂಪ್ರದಾಯವಿಲ್ಲ. ಇವರು ಕನ್ನಡ ಮಾತನಾಡುತ್ತಾರೆ. ಇವರ ಧಾರ್ಮಿಕ ಗುರುಗಳನ್ನು ಒಡೆಯರ್ ಎಂದು ಕರೆಯುತ್ತಾರೆ. ಒಡೆಯರು ಶುದ್ಧ ಶಾಖಾಹಾರಿಗಳು. ಆದರೆ, ಇತರ ಕುರುಬರಿಗೆ ಈ ನಿರ್ಬಂಧವಿಲ್ಲ. ಇವರಲ್ಲಿ ತೆರಪದ್ಧತಿ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಸಾಂಪ್ರದಾಯಿಕವಾಗಿ ರೂಢಿಯಲ್ಲಿವೆ. ಬೀರೇದೇವರನ್ನು ಇವರು ವಿಶೇಷವಾಗಿ ಪೂಜಿಸುತ್ತಾರೆ. ಬೀರೆದೇವರ ಗೌರವಾರ್ಥ ಡೊಳ್ಳು ಕುಣಿತವನ್ನು ಪ್ರದರ್ಶಿಸುತ್ತಾರೆ. ಬೀರೇದೇವರನ್ನು ಕೆಲವರು ಸೋಮವಾರ ಮತ್ತೆ ಕೆಲವರು ಗುರುವಾರದಂದು ಪೂಜಿಸುತ್ತಾರೆ. ಬೀರೇದೇವರ ಉತ್ಸವವನ್ನು ವಿಜಯದಶಮಿಯ ದಿನ ವಿಶೇಷವಾಗಿ ನಡೆಸುತ್ತಾರೆ. ಆ ಸಂದರ್ಭದಲ್ಲಿ ಮುಡುಕುತೊರೆ ಮಲ್ಲಿಕಾರ್ಜುನನ ಒಕ್ಕಲಿನ ಕುರುಬರು ಕರಡಿಚರ್ಮ ತಲೆಗೆ ಧರಿಸಿ, ಕವಡೆ ಪೋಣಿಸಿದ ಹುಲಿಚರ್ಮ ಎದೆಗೆ ಕಟ್ಟಿ, ಕೈಯಲ್ಲಿ ಡಮರುಗ ಹಿಡಿದು ಮೆರವಣಿಗೆಯಲ್ಲಿ ಬರುತ್ತಾರೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ದೀಪಾವಳಿ ಒಂದು ವಿಶೇಷ ಹಬ್ಬವಾಗಿದೆ. ಆ ಸಮಯದಲ್ಲಿ ಇವರು ಹಿರಿಯರ ಹಬ್ಬವನ್ನು ಆಚರಿಸುವುದಲ್ಲದೆ ತಮ್ಮ ಡೊಳ್ಳು, ಕೋಲು ಮುಂತಾದವುಗಳನ್ನೂ ಪೂಜಿಸುತ್ತಾರೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿರುವ ಕನಕ ಗುರುಪೀಠ ಇವರ ಧಾರ್ಮಿಕ ಪೀಠವಾಗಿದೆ. ಇವರು

ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಹೊರಗೆ ಹೋಗುವಾಗ ಸಾಮಾನ್ಯವಾಗಿ ಹೆಗಲ ಮೇಲೆ ಕಂಬಳಿ ಹಾಕಿ, ತಲೆಗೆ ರುಮಾಲು ಸುತ್ತಿಕೊಳ್ಳುವುದು ಗ್ರಾಮೀಣ ಪ್ರದೇಶದ ಕುರುಬರ ಸಾಂಪ್ರದಾಯಿಕ ಉಡುಗೆಯಾಗಿದೆ.

**ಕುರುಹಿನ ಶೆಟ್ಟಿ:** ದೇವಾಂಗದವರಂತೆ ಕುರುಹಿನಶೆಟ್ಟಿ ಹಾಗೂ ಪದ್ಮಸಾಲಿಗಳೂ ಮೂಲತಃ ನೇಯ್ಗೆಯನ್ನೇ ಸಾಂಪ್ರದಾಯಿಕ ಕುಲಕಸುಬಾಗಿ ಹೊಂದಿದ್ದವರು. ಕುರುಹಿನ ಶೆಟ್ಟರು ಕನ್ನಡ ಮತ್ತು ಪದ್ಮಸಾಲಿಗಳು ತೆಲುಗು ಮಾತನಾಡುತ್ತಾರೆ. ಕುರುಹಿನಶೆಟ್ಟರಲ್ಲಿ ೬೦ ಗೋತ್ರಗಳಿದ್ದು ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರು ಶೈವ ಹಾಗೂ ವೈಷ್ಣವ ಮತಾವಲಂಬಿಗಳು. ಪುರೋಹಿತರಿಲ್ಲದ ಈ ವರ್ಗದ ಜನ ಮಗು ಹುಟ್ಟಿದ ೧೨ನೇ ದಿನ ಅಥವಾ ಮೂರು ತಿಂಗಳ ಒಳಗೆ ನಾಮಕರಣವನ್ನೂ ಋತುಮತಿಯಾದ ಹೆಣ್ಣಿಗೆ ೧೬ ನೇ ದಿನ ಆರತಿ ಶಾಸ್ತ್ರವನ್ನೂ ಮಾಡುತ್ತಾರೆ. ಇವರು ಹುಬ್ಬಳ್ಳಿಯ ನೀಲಕಂಠ ಮಠಕ್ಕೆ ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಇವರಲ್ಲಿ ಶವಕ್ಕೆ ಅಗ್ನಿ ಸಂಸ್ಕಾರ ಮಾಡುವ ಪದ್ಧತಿ ಇದೆ.

**ಕುಂಬಾರ :** ಮಣ್ಣಿನಿಂದ ಮಡಕೆ, ಕುಡಿಕೆಗಳನ್ನು ಮಾಡುವುದು, ಹೆಂಚನ್ನು ತಯಾರಿಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಹಲವರು ವ್ಯಾಪಾರ, ಕೃಷಿ, ಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಕುಂಬಾರಶೆಟ್ಟಿ, ಹರವಿಗುಂಬಾರ, ಬೈಲುಗುಂಬಾರ ಮೊದಲಾದ ಪಂಗಡಗಳಿದ್ದು, ಸಾಂಪ್ರದಾಯಿಕವಾಗಿ ಪರಸ್ಪರ ವಿವಾಹ ಸಂಬಂಧ ಬೆಳೆಸುವ ಪದ್ಧತಿಯಿಲ್ಲ. ಕನ್ನಡ ಭಾಷಿಕರಾದ ಇವರಲ್ಲಿ ಕೆಲವರು ತೆಲುಗು ಬಲ್ಲವರಾಗಿದ್ದಾರೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ತೆರ ಪದ್ಧತಿ ರೂಢಿಯಲ್ಲಿದ್ದು ವಿಧವಾ ವಿವಾಹ ಹಾಗೂ ವಿಚ್ಛೇದನಕ್ಕೆ ಅನುಮತಿ ಇದೆಯಾದರೂ ವಿರಳವೆನ್ನಬಹುದು. ಇವರು ಶೈವ ಹಾಗೂ ವೈಷ್ಣವ ಮತಾವಲಂಬಿಗಳಾಗಿದ್ದಾರೆ. ಕುಂಭೇಶ್ವರನನ್ನು ಪೂಜಿಸುವ ಈ ಜನ ಮೃತರನ್ನು ಹೂಳುತ್ತಾರೆ.

**ಕೊರಮ:** ಇವರು ಹಿಂದೆ ಅಲೆಮಾರಿ ಬುಡಕಟ್ಟಿನವರಾಗಿದ್ದಿರಬಹುದೆಂಬ ಅಭಿಪ್ರಾಯವಿದೆ. ಈಗ ಅವರು ಒಂದೆಡೆ ನೆಲೆಯಾಗಿದ್ದಾರೆ. ಇವರು ಹಂದಿ ಸಾಕಣೆ, ಕೃಷಿ, ಕೃಷಿಕೂಲಿ ಮಾಡುವುದು, ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವುದೇ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಕೆಲವು ಮಹಿಳೆಯರು ಕಣಿ ಹೇಳುವುದನ್ನು ಉಪವೃತ್ತಿಯಾಗಿ ಅವಲಂಬಿಸಿದ್ದಾರೆ. ಇಂಥವರನ್ನು ಕೊರವಂಜಿಗಳೆಂದು ಕರೆಯಲಾಗುತ್ತದೆ. ಇವರಲ್ಲಿ ಒಳ ವಿವಾಹವಾಗುವ ಅನೇಕ ಪಂಗಡಗಳಿವೆ. ತೆರ ಪದ್ಧತಿ ರೂಢಿಯಲ್ಲಿದ್ದು, ವಿಧವಾವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಅನುಮತಿಯಿದೆ. ಇವರ ಧಾರ್ಮಿಕ ಕಾರ್ಯಗಳನ್ನು ಅವರ ಕುಲದ ಹಿರಿಯರಾಗಲೀ, ಬ್ರಾಹ್ಮಣ ಪುರೋಹಿತರಾಗಲೀ ನಡೆಸಿಕೊಡುವರು. ಮಾಂಸಾಹಾರಿಗಳಾದ ಇವರು ಮೃತರನ್ನು ಹೂಳುತ್ತಾರೆ. ಇವರ ಪ್ರಧಾನ ದೈವ ತಿರುಪತಿ ವೆಂಕಟರಮಣ ಆಗಿದ್ದು, ಮುನೇಶ್ವರ, ಮಾರಿಯಮ್ಮ, ಹಲಗಮ್ಮ, ಗಂಗಮ್ಮ ಮೊದಲಾದ ದೇವತೆಗಳನ್ನು ಪೂಜಿಸುವುದೂ ಉಂಟು.

**ಗಾಣಿಗ:** ಗಾಣದಿಂದ ಎಣ್ಣೆ ತೆಗೆದು ವ್ಯಾಪಾರ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಒಕ್ಕಲುತನ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಹೆಗ್ಗಾಣಿಗ ಶೆಟ್ಟರು, ಕೊಂಗಾಣಿಗ ಶೆಟ್ಟರು, ಕಿರುಗಾಣಿಗ ಶೆಟ್ಟರು ಮೊದಲಾದ ಪಂಗಡಗಳಿದ್ದು, ಸಾಂಪ್ರದಾಯಿಕವಾಗಿ ಪರಸ್ಪರ ಪಂಗಡಗಳಲ್ಲಿ ವಿವಾಹ ಸಂಬಂಧ ಮಾಡುವುದು ರೂಢಿಯಲ್ಲಿಲ್ಲ. ಕನ್ನಡ ಭಾಷಿಕರಾದ ಇವರು ಶೈವ ಮತ್ತು ವೈಷ್ಣವ ಎರಡೂ ಪರಂಪರೆಯ ದೇವರನ್ನು ಆರಾಧಿಸುತ್ತಾರೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ವಿವಾಹವು ಅನುಕೂಲಕ್ಕೆ ತಕ್ಕಂತೆ ಗಂಡಿನ ಮನೆಯಲ್ಲಾಗಲೀ ಹೆಣ್ಣಿನ

ಮನೆಯಲ್ಲಾಗಲೀ ನಡೆಯುತ್ತದೆ. ತೆರ ಪದ್ಧತಿ ರೂಢಿಯಲ್ಲಿದೆ. ಮಾಂಸಾಹಾರಿಗಳಾದ ಇವರಿಗೆ ಮಹಾನವಮಿ ವಿಶೇಷ ಹಬ್ಬವೆನಿಸಿಕೊಂಡಿದೆ. ಇವರಲ್ಲಿ ಶವವನ್ನು ಹೂಳುವ ಪದ್ಧತಿಯಿದೆ. ತಮ್ಮ ಕುಲದೇವರು ಹಾಗೂ ಸ್ಥಳೀಯ ದೇವರುಗಳಿಗೆ ನಡೆದುಕೊಳ್ಳುವ ಇವರಿಗೆ ಧರ್ಮಸ್ಥಳ, ಮಹದೇಶ್ವರಬೆಟ್ಟ ಮೊದಲಾದವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ಗೊಲ್ಲ:** ಯಾದವ ವಂಶಜರಾದ ತಾವು, ಅನೇಕ ವರ್ಷಗಳ ಹಿಂದೆ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದವರೆಂದು ಇವರು ಹೇಳಿಕೊಳ್ಳುತ್ತಾರೆ. ಜಿಲ್ಲೆಯಲ್ಲಿ ಮೊದಲಿಗೆ ಇವರು ಮದ್ದೂರು ತಾಲೂಕಿಗೆ ಬಂದು, ಆನಂತರ ಇತರೆಡೆ ನೆಲೆಸಿರಬಹುದೆಂಬ ಅಭಿಪ್ರಾಯವಿದೆ. ಮೊದಲಿಗೆ ಗೋವುಗಳ ಪಾಲನೆಯೇ ಇವರ ಪ್ರಧಾನವೃತ್ತಿಯಾಗಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಿ ತಮ್ಮ ಜೀವನವನ್ನು ನಡೆಸುತ್ತಿದ್ದರು. ಈಚೆಗೆ ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲೂ ಇವರು ತೊಡಗಿದ್ದಾರೆ. ಕೋಲಾಟ ಆಡುವುದರಲ್ಲಿ ಇವರಿಗೆ ವಿಶೇಷ ಆಸಕ್ತಿಇದೆ. ಇವರಲ್ಲಿ ಕಾಡುಗೊಲ್ಲ, ಊರುಗೊಲ್ಲ ಮುಂತಾದ ಪಂಗಡಗಳಿವೆ. ಗಂಡಿನ ಕಡೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ತೆರ ಪದ್ಧತಿ ರೂಢಿಯಲ್ಲಿದೆ. ವಿವಾಹವು ಸಾಮಾನ್ಯವಾಗಿ ಗಂಡಿನ ಮನೆಯಲ್ಲೇ ನಡೆಯುತ್ತದೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ಗೋಕುಲಾಷ್ಟಮಿ ವಿಶೇಷ ಹಬ್ಬವಾಗಿದೆ. ವೈಷ್ಣವ ಮತಾವಲಂಬಿಗಳಾದ ಇವರು ಕೃಷ್ಣ, ವೆಂಕಟರಮಣ ಮೊದಲಾದ ದೇವರನ್ನು ಪೂಜಿಸುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ಶವವನ್ನು ಹೂಳುವ ಅಥವಾ ಸುಡುವ ಪದ್ಧತಿಗಳಿವೆ. ಇವರ ಸ್ತ್ರೀಯರು ಕೈಗೆ 'ಕೃಷ್ಣಮುದ್ರೆ' ಅಥವಾ 'ಗೊಲ್ಲ ಕಡಗ' ಧರಿಸುವುದರಿಂದ ವಿಧವೆಯರನ್ನೂ 'ಮುತ್ತೈದೆ' ಎಂದೇ ಪರಿಗಣಿಸುವುದು ಇವರಲ್ಲಿನ ವಿಶೇಷವಾಗಿದೆ.

ಅರುವನಹಳ್ಳಿ ಕಟ್ಟೆಮನೆಯವರೆಂದು ಕರೆಯಲ್ಪಡುವ ಗೊಲ್ಲ ಜನಾಂಗದ ಕೆಲವರು ಚಿತ್ರಲಿಂಗಸ್ವಾಮಿ (ಜುಂಜಪ್ಪ) ಮತ್ತು ನರಸಿಂಹಸ್ವಾಮಿ ದೇವರನ್ನೂ, ಎಲ್ಲಮ್ಮ ದೇವಿಯನ್ನೂ ಪೂಜಿಸುತ್ತಾರೆ. ಶ್ರಾವಣ ಮಾಸದಲ್ಲಿ ಶಿಂಷಾ ಹೊಳೆಯ ದಡದಲ್ಲಿ ಹೂವು ಮತ್ತು ಆಭರಣಗಳಿಂದ ಅಲಂಕೃತವಾದ ಚಿತ್ರಲಿಂಗಸ್ವಾಮಿಯನ್ನು ಪೂಜಿಸುತ್ತಾರೆ. ದೀಪಾವಳಿ, ಶಿವರಾತ್ರಿಗಳಲ್ಲಿ ಚಿತ್ರಲಿಂಗಸ್ವಾಮಿಗೆ ವಿಶೇಷವಾದ ಪೂಜೆ ಸಲ್ಲಿಸಲಾಗುತ್ತದೆ.

**ತಿಗಳ :** ತಿಗಳರು ತಮ್ಮನ್ನು ವಹ್ನಿಕುಲಕ್ಷತ್ರಿಯರು, ವನ್ನೇರು ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುವುದುಂಟು. ತರಕಾರಿ ಮತ್ತು ಹೂತೋಟಗಳನ್ನು ಬೆಳೆಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಅನೇಕರು ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಈ ಜನರು ಕನ್ನಡ ಅಥವಾ ತಮಿಳು ಮಾತನಾಡುತ್ತಾರೆ. ಇವರಲ್ಲಿ ಹಲವು ಹೊರ ವಿವಾಹದ ವಿಭಾಗಗಳಿದ್ದು, ಪ್ರತಿಯೊಂದು ವಿಭಾಗಕ್ಕೆ ಅವರ ಪೋಷಕ ದೈವದ ಹೆಸರನ್ನು ಇಟ್ಟಿರುತ್ತಾರೆ. ಅಲ್ಲದೆ ಒಳವಿವಾಹ ಮಾಡಿಕೊಳ್ಳುವ ಎರಡು ಮುಖ್ಯ ವಿಭಾಗಗಳಿವೆ. ಅವುಗಳೆಂದರೆ ಹುಳ್ಳಿ ಅಥವಾ ಕನ್ನಡ ತಿಗಳರು ಮತ್ತು ಅರವ (ತಮಿಳು) ತಿಗಳರು ಅಥವಾ ಧರ್ಮರಾಯನ ಒಕ್ಕಲು. ಇವರಲ್ಲಿ ಪುರೋಹಿತವರ್ಗವಿಲ್ಲ. ಕುಲದ ಮುಖ್ಯಸ್ಥರೇ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾರೆ. ವಿಧವಾ ವಿವಾಹ ಹಾಗೂ ವಿಚ್ಛೇದನಕ್ಕೆ ಅನುಮತಿಯಿದೆ.

ಇವರಲ್ಲಿ ಶೈವರೂ, ವೈಷ್ಣವರೂ ಇದ್ದು, ದ್ರೌಪದಿಯನ್ನು ತಮ್ಮ ಕುಲದೇವತೆಯೆಂದೂ ಈಕೆಯು ಆದಿ ಶಕ್ತಿಯ ಸ್ವರೂಪವೆಂದೂ ದೃಢವಾಗಿ ನಂಬಿದ್ದಾರೆ. ಧರ್ಮರಾಯನ ಭಕ್ತರಾಗಿರುವ ಇವರಿಗೆ ಚೈತ್ರ ಮಾಸದ ಹುಣ್ಣಿಮೆಯಂದು ಆಚರಿಸಲ್ಪಡುವ ಕರಗವು ಒಂದು ವಿಶಿಷ್ಟ ಹಬ್ಬವಾಗಿದೆ. ಇವರು ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ. ಈ ಜನಾಂಗದವರಲ್ಲಿ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯಿದ್ದು, ಸಮಾಜದ ಆಗುಹೋಗುಗಳನ್ನು ನೋಡಿಕೊಳ್ಳುವುದರಲ್ಲಿ ಯಜಮಾನನು ಪ್ರಮುಖ ಪಾತ್ರವಹಿಸುವನು.

**ದರ್ಜಿ :** ಬಟ್ಟೆ ಹೊಲಿಯುವುದು ಇವರ ಸಾಂಪ್ರದಾಯಿಕ ಕಸುಬಾಗಿದ್ದು ಈಚೆಗೆ ಕೆಲವರು ಬಟ್ಟೆ ವ್ಯಾಪಾರ ಮಾಡುವುದು ಮತ್ತಿತರ ಉದ್ಯೋಗಗಳಲ್ಲೂ ತೊಡಗಿದ್ದಾರೆ. ಇವರು ತಮ್ಮನ್ನು ಭಾವಸಾರಕ್ಷತ್ರಿಯ, ಚಿಪ್ಪಿಗ, ನಾಮದೇವ ಸಿಂಪಿ ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ನಾಮದೇವ ಸಿಂಪಿಗಳು ತಾವು ಮರಾಠಿ ಸಂತ ನಾಮದೇವನ ಮೂಲದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಚಂದ್ರಿಕಾ ಇವರ ವಿಶೇಷ ದೇವತೆಯಾಗಿದ್ದು ಆ ದೇವಿಗೆ ಗಣೇಶ ಚತುರ್ಥಿಯ ದಿನ ಪೂಜೆ ಸಲ್ಲುತ್ತದೆ. ಕನ್ನಡ ಹಾಗೂ ಮರಾಠಿ ಮಾತನಾಡುವ ಇವರಲ್ಲಿ ಯಜ್ಞೋಪವೀತ ಧಾರಣೆ ಮತ್ತು ಮಾಂಸಾಹಾರ ಸೇವನೆ ರೂಢಿಯಲ್ಲಿದೆ. ಇವರಲ್ಲಿ ಜಾತಿ ಪಂಚಾಯತಿ ರೂಢಿಯಲ್ಲಿದೆ; ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಒಪ್ಪಿತವಾಗಿವೆ. ಪಂಢರಪುರದ ಪಾಂಡುರಂಗ, ಖಂಡೋಬ, ತುಳಜಾಪುರದ ಅಂಬಾಭವಾನಿ ಮೊದಲಾದ ದೇವತೆಗಳಿಗೆ ವಿಶೇಷವಾಗಿ ನಡೆದುಕೊಳ್ಳುವ ಇವರು ಮೃತರಿಗೆ ಅಗ್ನಿಸಂಸ್ಕಾರ ಮಾಡುತ್ತಾರೆ.

**ದೇವಾಂಗ:** ಸಂಸ್ಕೃತ ಪದವಾದ ಇದು ದೇವರ ಶರೀರ ಎಂಬ ಅರ್ಥವನ್ನು ಕೊಡುತ್ತದೆ. ಒಂದು ಐತಿಹ್ಯದ ಪ್ರಕಾರ ದೇವತೆಗಳಿಗೆ ಹಾಗೂ ಮನುಷ್ಯರಿಗೆ ಬೇಕಾದ ಬಟ್ಟೆಗಳನ್ನು ನೇಯುವುದಕ್ಕಾಗಿ ಮಹಾದೇವನು ದೇವಾಂಗ ಋಷಿಯನ್ನು ಸೃಷ್ಟಿಸಿದನು. ಆ ಋಷಿಯಿಂದಾಗಿ ಈ ಜನಾಂಗಕ್ಕೆ ದೇವಾಂಗ ಎಂದು ಹೆಸರು ಬಂದಿದೆ. ನೇಕಾರಿಕೆಯು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಈಚೆಗೆ ಕೃಷಿ, ವ್ಯಾಪಾರ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ಕೆಲವರು ತೊಡಗಿದ್ದಾರೆ. ಇವರಲ್ಲಿ ಶಿವಾಚಾರ ದೇವಾಂಗ, ಕನ್ನಡ ದೇವಾಂಗ, ತೆಲುಗು ದೇವಾಂಗ ಹಾಗೂ ಹಠಗಾರರು ಎಂಬ ನಾಲ್ಕು ಗುಂಪುಗಳಿವೆ. ಇವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಯಜಮಾನನ ಅಧ್ಯಕ್ಷತೆಯಲ್ಲಿ ಕಟ್ಟೆ ಮನೆಗಳಿವೆ. ಬೆಂಗಳೂರಿನಲ್ಲಿ ಈ ಸಮಾಜದ ಸಂಘವಿದೆ. ಇವರು ಕನ್ನಡ ಹಾಗೂ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಒಳ ವಿವಾಹದ ಅನೇಕ ಗುಂಪುಗಳಿವೆ. ಇವರು ಶೈವರಾದರೂ ಕೆಲವರು ವಿಷ್ಣುವನ್ನೂ ಪೂಜಿಸುತ್ತಾರೆ. ಮಾರಿಯಮ್ಮ, ಮುನೇಶ್ವರ ಮೊದಲಾದ ಗ್ರಾಮದೇವತೆಗಳನ್ನೂ ಪೂಜಿಸುವುದುಂಟು. ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದಲ್ಲಿರುವ ಬನಶಂಕರಿ ಇವರ ಬುಡಕಟ್ಟಿನ ದೇವತೆ. ಇವರಲ್ಲಿ ಜನಿವಾರ ಧಾರಣೆ ಹಾಗೂ ಮಾಂಸಾಹಾರ ಸೇವನೆ ಪದ್ಧತಿಯಿದೆ. ಇವರು ಮೃತರನ್ನು ಹೂಳುತ್ತಾರೆ. ಇವರಲ್ಲಿ ಶ್ರಾದ್ಧ ಪದ್ಧತಿ ರೂಢಿಯಲ್ಲಿಲ್ಲದಿದ್ದರೂ ಮೃತರ ವಾರ್ಷಿಕ ತಿಥಿಯನ್ನು ಕಳಸ ಪೂಜೆ ಮಾಡಿ ತಮ್ಮವರಿಗೆ ಭೋಜನ ಏರ್ಪಡಿಸುವ ಮೂಲಕ ಆಚರಿಸುತ್ತಾರೆ. ಹಂಪೆಯಲ್ಲಿರುವ ಗಾಯತ್ರಿ ಪೀಠದ ಗುರುಗಳು ಇವರ ಧಾರ್ಮಿಕ ಗುರುಗಳಾಗಿದ್ದಾರೆ. ತಳಗವಾಡಿ, ಮಂಡ್ಯ, ಕೊಡಿಯಾಲ, ಮೇಲುಕೋಟೆ, ಕಿಕ್ಕೇರಿ, ಹೊಸಹೊಳಲು ಮುಂತಾದೆಡೆಗಳಲ್ಲಿ ದೇವಾಂಗದವರು ವಿಶೇಷವಾಗಿ ಕಂಡುಬರುತ್ತಾರೆ.

**ನಾಯಿಂದ :** ಇವರು ತಮ್ಮನ್ನು ಕ್ಷೌರಿಕ, ಹಜಾಮ, ನಯನಕ್ಷತ್ರಿಯ, ಭಜಂತ್ರಿ ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುವುದುಂಟು. ಕ್ಷೌರಿಕ ವೃತ್ತಿ ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ವಿವಾಹ ಮೊದಲಾದ ಶುಭಸಮಾರಂಭಗಳಲ್ಲಿ ನಾದಸ್ವರ ನುಡಿಸುತ್ತಾರೆ. ಈಚೆಗೆ ಹಲವರು ಕೃಷಿ ಮತ್ತಿತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಮೊರಸು, ಉಪ್ಪಿನ, ಶೀಲವಂತ ಮೊದಲಾದ ಉಪಪಂಗಡಗಳಿವೆ. ಕನ್ನಡ ಇವರ ಭಾಷೆಯಾಗಿದ್ದು, ಹಲವರು ತೆಲುಗು ಮಾಡನಾಡುವುದೂ ಉಂಟು. 'ತೆರ (ವಧುದಕ್ಷಿಣೆ) ಪದ್ಧತಿ' ಇವರಲ್ಲಿ ರೂಢಿಯಲ್ಲಿದೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಡುತ್ತಾರೆ. ಶಿವ ಹಾಗೂ ವಿಷ್ಣುವನ್ನು ಪೂಜಿಸುವ ಇವರು ಮುನೇಶ್ವರ, ಗಂಗಮ್ಮ, ಮಾರಿಯಮ್ಮ ಮೊದಲಾದ ದೇವತೆಗಳನ್ನು ಆರಾಧಿಸುತ್ತಾರೆ. ಮಾಂಸಾಹಾರಿಗಳಾದ ಇವರು ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ.

**ಬ್ರಾಹ್ಮಣ:** ಬ್ರಾಹ್ಮಣರಲ್ಲಿ ಪ್ರಮುಖವಾಗಿ ಸ್ಮಾರ್ತರು (ಶಂಕರಾಚಾರ್ಯರ ಅನುಯಾಯಿಗಳು), ಮಾಧ್ವರು (ಮಧ್ವಾಚಾರ್ಯರ ಅನುಯಾಯಿಗಳು) ಮತ್ತು ಶ್ರೀವೈಷ್ಣವರು (ರಾಮಾನುಜಾಚಾರ್ಯರ ಅನುಯಾಯಿಗಳು)

ಎಂಬ ಮೂರು ಪಂಗಡಗಳಿವೆ. ಈ ಪ್ರತೀ ಪಂಗಡದಲ್ಲಿಯೂ ಹಲವು ಉಪ ಪಂಗಡಗಳಿವೆ: ಸ್ಮಾರ್ತರಲ್ಲಿ ಮುಲಕನಾಡು, ಬಡಗನಾಡು, ಬಬ್ಬೂರಕಮ್ಮೆ, ಉಲಚಕಮ್ಮೆ, ಹೊಯ್ಸಳಕರ್ನಾಟಕ, ಸಂಕೇತಿ ಮೊದಲಾದವರು; ಮಾಧ್ವರಲ್ಲಿ ರಾಘವೇಂದ್ರಮಠದವರು, ವ್ಯಾಸರಾಯಮಠದವರು, ಶಿವಳ್ಳಿ (ಉಡುಪಿ), ದೇಶಸ್ಥ ಮಠದವರು; ಶ್ರೀವೈಷ್ಣವರಲ್ಲಿ ತೆಂಗಲೆ ಮತ್ತು ವಡಗಲೆ ಎಂಬ ಎರಡು ಮುಖ್ಯ ಸಂಪ್ರದಾಯಗಳಿದ್ದು, ಅವರಲ್ಲಿ ಮಂಡಯಂ ಐಯ್ಯಂಗಾರ್, ಹೆಮ್ಮಿಗೆಯಾರ್, ತಿರುಮಲಯಾರ್, ಹೆಬ್ಬಾರ್ ಮೊದಲಾದ ಉಪಪಂಗಡಗಳಿವೆ. ಸ್ಮಾರ್ತರಲ್ಲಿ ಸಂಕೇತಿಗಳು ಕೆಲವು ದ್ರಾವಿಡ ಶಬ್ದ ಮಿಶ್ರಣವಾದ ಭಾಷೆಯನ್ನೂ ಮುಲಕನಾಡು ಸ್ಮಾರ್ತರು ತೆಲುಗು ಭಾಷೆಯನ್ನೂ, ಮಾಧ್ವರಲ್ಲಿ ಶಿವಳ್ಳಿ ಬ್ರಾಹ್ಮಣರು ತುಳುಭಾಷೆಯನ್ನೂ, ಶ್ರೀವೈಷ್ಣವರು ತಮಿಳು ಭಾಷೆಯನ್ನೂ ಮಾತನಾಡುವವರಾದರೂ ಎಲ್ಲರೂ ಕನ್ನಡ ಬಲ್ಲವರಾಗಿದ್ದಾರೆ.

ಬ್ರಾಹ್ಮಣರನ್ನು ಅನೇಕ ಗೋತ್ರ ಹಾಗೂ ಪ್ರವರಗಳಿಂದ ಗುರುತಿಸಲಾಗುತ್ತದೆ. ಕಾಶ್ಯಪ, ಭಾರದ್ವಾಜ, ವಿಶ್ವಾಮಿತ್ರ, ಹರಿತ್ಸ, ಕೌಂಡಿನ್ಯ ಮೊದಲಾದವು ಇದಕ್ಕೆ ಉದಾಹರಣೆಗಳಾಗಿವೆ. ಸಗೋತ್ರ ವಿವಾಹವಿಲ್ಲದ ಇವರಲ್ಲಿ ೧೬ ಸಂಸ್ಕಾರಗಳಿದ್ದು, ಅವುಗಳಲ್ಲಿ ಉಪನಯನವೇ ಅತಿ ಮುಖ್ಯವಾದುದು. ಇವರ ದಿನಚರಿಯಲ್ಲಿ ಅನೇಕ ಕಟ್ಟುಪಾಡುಗಳಿವೆ. ಬೆಳಿಗ್ಗೆ ಪ್ರಾತ: ಸಂಧ್ಯಾವಂದನೆ, ಮಧ್ಯಾಹ್ನ ಮಾಧ್ಯಾಹ್ನಿಕ ಹಾಗೂ ಸಂಜೆ ಸಾಯಂ ಸಂಧ್ಯಾವಂದನೆ ಮಾಡುವುದು, ನಿತ್ಯ ದೇವಪೂಜೆ ಮೊದಲಾದುವುಗಳನ್ನು ಆಚರಿಸುವುದು ಇದಕ್ಕೆ ಕೆಲವು ಉದಾಹರಣೆಯಾಗಿವೆ. ಸ್ತ್ರೀಯರು ತುಳಸಿಯನ್ನು ಪೂಜಿಸುತ್ತಾರೆ. ಸಾಂಪ್ರದಾಯಿಕವಾಗಿ ಬ್ರಾಹ್ಮಣರಲ್ಲಿ ವೈದಿಕರು ಮತ್ತು ಲೌಕಿಕರೆಂಬ ಎರಡು ವರ್ಗಗಳಿವೆ. ವೈದಿಕರೆಂದರೆ ಪೌರೋಹಿತ್ಯದ ಕೆಲಸ ಮಾಡುವವರು. ಲೌಕಿಕರೆಂದರೆ ವ್ಯಾಪಾರಿಗಳು, ಗುತ್ತಿಗೆದಾರರು, ಸರಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ಮೊದಲಾದವರು. ಮೊದಲಿಗೆ ಇವರಲ್ಲಿ ಅನೇಕರು ಭೂಒಡೆಯರಾಗಿ ಜಮೀನ್ದಾರರು ಎನಿಸಿಕೊಂಡಿದ್ದರು. ಇವರಲ್ಲಿ ವಧುವಿನ ಪೋಷಕರು ವರನನ್ನು ಹುಡುಕುವುದು ಸಂಪ್ರದಾಯವಾಗಿದ್ದು, ವಿವಾಹವು ವಧುವಿನ ಗೃಹದಲ್ಲಿ ನಡೆಯುತ್ತದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಸಾಂಪ್ರದಾಯಿಕವಾಗಿ ರೂಢಿಯಲ್ಲಿಲ್ಲ. ಇವರು ಸಸ್ಯಾಹಾರಿಗಳು. ಹುಟ್ಟು–ಸಾವುಗಳ ಸಂದರ್ಭಗಳಲ್ಲಿ ೧೦ ದಿನಗಳ ಮೈಲಿಗೆ ಆಚರಿಸುತ್ತಾರೆ. ಇವರಲ್ಲಿ ಮೃತರಿಗೆ ಅಗ್ನಿಸಂಸ್ಕಾರ ಮಾಡುವ ಪದ್ಧತಿಯಿದೆ. ಮಕ್ಕಳು, ಸಾಧು, ಸಂನ್ಯಾಸಿಗಳು ಸತ್ತಾಗ ಶವವನ್ನು ಹೂಳುತ್ತಾರೆ. ಸತ್ತ ೩, ೫, ೭ ಅಥವಾ ೯ನೇ ದಿನದಿಂದ ಶ್ರಾದ್ಧವನ್ನು ಆರಂಭಿಸಿ ೧೨ನೇ ದಿನ ಮುಗಿಸುತ್ತಾರೆ. ೧೪ನೇ ದಿನ ವೈಕುಂಠ ಸಮಾರಾಧನೆಯನ್ನು ಆಚರಿಸಿ, ತಮ್ಮ ಬಂಧು ಮಿತ್ರರಿಗೆ ಸಮಾರಾಧನೆ ಏರ್ಪಡಿಸುತ್ತಾರೆ. ಒಂದು ವರ್ಷದವರೆಗೆ ಪ್ರತೀ ತಿಂಗಳೂ ಮಾಸಿಕ ಶ್ರಾದ್ಧವನ್ನು ಮಾಡಿ, ಮುಂದೆ ಪ್ರತೀ ವರ್ಷ ವಾರ್ಷಿಕ ಶ್ರಾದ್ಧವನ್ನು ಮಾಡುತ್ತಾರೆ.

**ಬಣಜಿಗ:** ಬಣಜಿಗ ಎಂಬ ಪದವು ವಣಿಕ ಎಂಬ ಸಂಸ್ಕೃತ ಮೂಲದಿಂದ ಬಂದಿದೆ. ಇವರನ್ನು ಬಲಿಜ ಎಂದೂ ಕರೆಯುವುದುಂಟು. ಇವರಲ್ಲಿ ಎಲೆ ಬಣಜಿಗ, ದಾಸ ಬಣಜಿಗ, ಸೆಟ್ಟಿ ಬಣಜಿಗ, ನಾಯ್ಡು ಬಣಜಿಗ ಮುಂತಾದ ಪಂಗಡಗಳಿದ್ದು, ವ್ಯಾಪಾರ ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಈಚೆಗೆ ಇವರು ವ್ಯವಸಾಯ, ನೌಕರಿ ಮೊದಲಾದವುಗಳಲ್ಲೂ ತೊಡಗಿದ್ದಾರೆ. ಸೆಟ್ಟಿ ಬಣಜಿಗರು ಬಳೆ ವ್ಯಾಪಾರ ಮಾಡುವರು. ದಾಸ ಬಣಜಿಗರು ಮೊದಲಿಗೆ ಜೈನಕ್ಷತ್ರಿಯರಾಗಿದ್ದು, ರಾಮಾನುಜಾಚಾರ್ಯರ ಕಾಲದಲ್ಲಿ ತಾವು ವೈಷ್ಣವ ಮತಾವಲಂಬಿಗಳಾದವರೆಂದು ಹೇಳಿಕೊಳ್ಳುತ್ತಾರೆ. ಇವರಲ್ಲಿ ಕನ್ನಡ ಹಾಗೂ ತೆಲುಗು ಭಾಷಿಕರಿದ್ದಾರೆ. ತೆಲುಗು ಬಣಜಿಗರು ಶೈವ ಅಥವಾ ವೈಷ್ಣವರಾಗಿರುತ್ತಾರೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಗಳಿಗೆ ಇವರಲ್ಲಿ ಸಾಂಪ್ರದಾಯಿಕ ಅನುಮತಿಯಿಲ್ಲ. ಮಾಂಸಾಹಾರಿಗಳಾದ ಇವರು ಮೃತರನ್ನು ಸಾಮಾನ್ಯವಾಗಿ ಹೂಳುತ್ತಾರೆ.

**ಬೆಸ್ತ:** ಇವರು ತಮ್ಮನ್ನು ಗಂಗಕುಲ, ಗಂಗಾಮತ, ಗಂಗೆಮಕ್ಕಳು ಮೊದಲಾದ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ಮೀನು ಹಿಡಿಯುವುದು ಮತ್ತು ದೋಣಿ ನಡೆಸುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಬೇಸಾಯ, ಕೂಲಿ, ನೌಕರಿ ಮೊದಲಾದವುಗಳಲ್ಲಿಯೂ ತೊಡಗಿದ್ದಾರೆ. ಇವರು ಮಳವಳ್ಳಿ, ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ ಮತ್ತು ಮದ್ದೂರು ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಕನ್ನಡ ಇವರ ಭಾಷೆ. ಜಾತಿ ಪಂಚಾಯತಿ ಇವರಲ್ಲಿದೆ. ಗಂಡಿನ ಮನೆಯವರೇ ವಿವಾಹ ಸಂಬಂಧಕ್ಕಾಗಿ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ತೆರ ಪದ್ಧತಿ ರೂಢಿಯಲ್ಲಿದೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಇವರಲ್ಲಿ ಪ್ರಚಲಿತವಿದೆ. ಇವರು ಶಿವ ಹಾಗೂ ವಿಷ್ಣು ಆರಾಧಕರಾಗಿದ್ದು ನಂಜನಗೂಡು, ಧರ್ಮಸ್ಥಳ, ತಿರುಪತಿ ಮೊದಲಾದ ಯಾತ್ರಾ ಸ್ಥಳಗಳಿಗೆ ಹೋಗಿಬರುತ್ತಾರಲ್ಲದೆ ತೊಳಸಮ್ಮ, ಮಾರಮ್ಮ, ಪಟಾಳಮ್ಮ ಮೊದಲಾದ ದೇವತೆಗಳಿಗೂ ನಡೆದುಕೊಳ್ಳುತ್ತಾರೆ. ಇವರಲ್ಲಿ ಮೃತರನ್ನು ಹೂಳುತ್ತಾರೆ

**ಬೇಡ:** ಪ್ರಾಚೀನ ಋಷಿ ವಾಲ್ಮೀಕಿಯು ಬೇಡರವನೆಂಬ ನಂಬಿಕೆಯಿಂದ ಇವರು ತಮ್ಮನ್ನು ವಾಲ್ಮೀಕಿ ಮತಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಬೇಡರು ಸೈನಿಕರಾಗಿದ್ದರೆಂದು ಹೇಳಲಾಗಿದೆ. ಬೇಟೆಯಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು, ಈಚೆಗೆ ಇವರು ಕೃಷಿಕ್ಷೇತ್ರದಲ್ಲಿ ಗೇಣಿ ಒಕ್ಕಲಾಗಿಯೂ, ಬೇಸಾಯಗಾರರಾಗಿಯೂ, ಇತರ ಕ್ಷೇತ್ರಗಳಲ್ಲಿಯೂ ದುಡಿಯುತ್ತಿರುವರು. ಮೂಲತಃ ಇವರಲ್ಲಿ ಕೆಲವರ ಮಾತೃಭಾಷೆ ತೆಲುಗು ಆಗಿದ್ದರೂ ಈಗ ಎಲ್ಲರೂ ಕನ್ನಡ ಭಾಷಿಕರಾಗಿದ್ದಾರೆ. ಇವರಲ್ಲಿ ಅನೇಕ ಗೋತ್ರಗಳಿವೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸಿಕೊಡುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ಇವರಲ್ಲಿ ಶೈವ ಮತ್ತು ವೈಷ್ಣವರಿಬ್ಬರೂ ಇದ್ದಾರೆ. ಮಾಂಸಾಹಾರಿಗಳಾದ ಇವರು ತಮ್ಮ ಕುಲದೇವತೆಗಳನ್ನೂ, ಗಂಗಮ್ಮ, ದುರ್ಗಮ್ಮ, ಮಾರಿಯಮ್ಮ, ಹನುಮಂತ, ಈಶ್ವರ, ವೆಂಕಟರಮಣ ಮೊದಲಾದ ದೇವರುಗಳನ್ನೂ ಪೂಜಿಸುತ್ತಾರೆ. ಮೈಸೂರು ಜಿಲ್ಲೆಯ ನಂಜನಗೂಡು ಹಾಗೂ ತಿರುಪತಿ ಇವರ ಪ್ರಮುಖ ಯಾತ್ರಾಸ್ಥಳಗಳಾಗಿವೆ. ಬೆಂಗಳೂರಿನ ಬೇಡರ ಕಣ್ಣಪ್ಪ ಗುಡಿಯ ಆವರಣದಲ್ಲಿ ಹಾಗೂ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ವಾಲ್ಮೀಕಿ ಮಠಗಳಿವೆ. ಮೈಸೂರಿನ ಅರಸರಿಗೆ ಬೇಟೆಯಾಡುವುದರಲ್ಲಿ ಇವರು ನೆರವಾಗುತ್ತಿದ್ದರು.

**ಮೊದಲಿಯಾರ್:** ಮೊದಲಿಯಾರ್ ಎಂಬ ಪದವು ಮೊದಲ್ ಅಂದರೆ ಜ್ಯೇಷ್ಠ ಅಥವಾ ಮೊದಲು ಎಂಬ ಪದದಿಂದ ಬಂದಿದೆಯೆಂಬ ಅಭಿಪ್ರಾಯವಿದೆ. ಇವರು ವ್ಯಾಪಾರ, ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರ, ದಳ್ಳಾಳಿ, ಸರ್ಕಾರಿ/ಖಾಸಗಿ ನೌಕರಿ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರ ಮಾತೃ ಭಾಷೆ ತಮಿಳು ಆದರೂ ಕನ್ನಡ ಬಲ್ಲವರಾಗಿರುತ್ತಾರೆ. ಇವರಲ್ಲಿ ಜಾತಿ ಪಂಚಾಯತಿ ಇದೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತ ನಡೆಸಿಕೊಡುತ್ತಾನೆ. ಮಾಂಸಾಹಾರಿಗಳಾದ ಇವರಲ್ಲಿ ಶೈವರು ಹಾಗೂ ವೈಷ್ಣವರು ಕಂಡುಬರುತ್ತಾರೆ. ಇವರಲ್ಲಿ ಕೆಲವರು ಮೃತರನ್ನು ಹೂಳುವ, ಮತ್ತೆ ಕೆಲವರಲ್ಲಿ ಅಗ್ನಿಸಂಸ್ಕಾರ ಮಾಡುವ ಸಂಪ್ರದಾಯ ಇದೆ.

**ಮಾದಿಗ:** ಚರ್ಮ ಹದಮಾಡುವುದು, ಹಲಗೆ, ಪಾದರಕ್ಷೆ ಮೊದಲಾದ ಚರ್ಮದ ಸಾಮಗ್ರಿಗಳನ್ನು ಸಿದ್ಧಪಡಿಸುವುದು, ಅಲ್ಲದೆ, ಒಕ್ಕಲುತನದ ಪರಿಕರಗಳಾದ ಮಿಣಿ, ಬಾರುಕೋಲು, ಕಪಲಿ ಮೊದಲಾದವುಗಳನ್ನು ತಯಾರಿಸುವುದು ಇವರ ಸಾಂಪ್ರದಾಯಿಕ ಉದ್ಯೋಗಗಳಾಗಿವೆ. ಈಚೆಗೆ ಕೃಷಿ, ಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ಇವರು ತೊಡಗಿದ್ದಾರೆ. ನಾಟಕ, ದೊಣ್ಣೆವರಸೆ, ತಮಟೆ ಬಾರಿಸುವುದು, ಸೋಬಾನ

ಹೇಳುವುದು ಮೊದಲಾದವು ಇವರ ಕೆಲ ಸಾಂಪ್ರದಾಯಿಕ ಹವ್ಯಾಸಗಳಾಗಿವೆ. ಕನ್ನಡಿಗರಾದ ಇವರಲ್ಲಿ ಜಾತಿ ಪಂಚಾಯತಿ ವ್ಯವಸ್ಥೆ ಇದ್ದಿತು. ಇವರಲ್ಲಿ ಗಂಗರಕುಲ, ಬೆಳ್ಳೀರ್‌ಕುಲ, ಕಡಬುರ ಕುಲ, ನಾಗರ ಕುಲ ಮೊದಲಾದ ಕುಲಗಳಿವೆ. ವಿವಾಹ ಸಂಬಂಧಕ್ಕೆ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಪದ್ಧತಿಯಿದ್ದು, ವಿವಾಹವು ಅನುಕೂಲಕ್ಕೆ ತಕ್ಕಂತೆ ಗಂಡಿನ ಮನೆಯಲ್ಲಾಗಲೀ ಹೆಣ್ಣಿನ ಮನೆಯಲ್ಲಾಗಲೀ ನಡೆಯಬಹುದು. ತೆರ ಪದ್ಧತಿ ರೂಢಿಯಲ್ಲಿದೆ. ಇವರಲ್ಲಿ ಕುಲದ ಮುಖ್ಯಸ್ಥನೇ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಡುತ್ತಾನೆ. ಎಲ್ಲಾ ಹಿಂದೂ ಹಬ್ಬಗಳನ್ನೂ ಆಚರಿಸುವ ಇವರಿಗೆ ಯುಗಾದಿ, ಮಹಾಲಯ ಅಮಾವಾಸ್ಯೆ ಹಾಗೂ ದೀಪಾವಳಿ ವಿಶೇಷವಾದವು. ಯುಗಾದಿಯಾದ ೧೫ ದಿನಕ್ಕೆ ಇವರು ನೀಲಗಾರರನ್ನು ಕರೆದು ಕಜ್ಜಾಯತುಪ್ಪ ದ ಊಟವನ್ನು ಹಾಕುವರು. ಮಾಂಸಾಹಾರವನ್ನು ಸೇವಿಸುವ ಇವರು ಮೃತರನ್ನು ಹೂಳುತ್ತಾರೆ. ಇವರು ಗ್ರಾಮದೇವತೆ ಹಾಗೂ ತಮ್ಮ ಕುಲದೇವತೆಗಳನ್ನು ಪೂಜಿಸುವರು. ಧರ್ಮಸ್ಥಳ, ಕೊಳ್ಳೇಗಾಲ ತಾಲೂಕಿನ ಮಲೆ ಮಹದೇಶ್ವರ, ಕುರುಬನ ಕಟ್ಟೆ ಹಾಗೂ ಕೆ.ಆರ್.ನಗರ ತಾಲೂಕಿನ ಕಪ್ಪಡಿ ಇವರ ಕೆಲವು ಯಾತ್ರಾಸ್ಥಳಗಳಾಗಿವೆ.

**ಮೇದ:** ಮೊರ, ಬುಟ್ಟಿ, ಬೀಸಣಿಗೆ, ತಡಿಕೆ ಮೊದಲಾದವುಗಳನ್ನು ಬಿದಿರಿನಿಂದ ತಯಾರಿಸುವ ಪಾರಂಪರಿಕ ಕೈಕಸುಬನ್ನು ಇವರು ಮಾಡುತ್ತಾರೆ. ಅಲ್ಲದೆ ಕೃಷಿ, ಸಣ್ಣ ಪುಟ್ಟ ವ್ಯಾಪಾರ, ಕೂಲಿ ಮೊದಲಾದವೂ ಇವರ ಇತರ ಉದ್ಯೋಗಗಳಾಗಿವೆ. ಇವರಲ್ಲಿ ಗರಿ ಮೇದರು, ಪಲ್ಲಿ ಮೇದರು, ಬಂಡಿಕಾರ ಮೇದರು ಎಂಬ ಒಳಪಂಗಡಗಳೂ, ಕೆಲ ಕುಲಗಳೂ ಇವೆ. ಇವರು ಕನ್ನಡ ಹಾಗೂ ತೆಲುಗು ಭಾಷೆಗಳನ್ನಾಡುವರು. ಇವರ ಧಾರ್ಮಿಕ ಕಾರ್ಯಗಳನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತ ನಡೆಸಿಕೊಡುವುದುಂಟು. ತೆರ ಪದ್ಧತಿ ರೂಢಿಯಲ್ಲಿದ್ದು, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನ ಪ್ರಚಲಿತ ಇವೆ. ಮಾಂಸಾಹಾರಿಗಳಾದ ಇವರಲ್ಲಿ ಶೈವರು ಮತ್ತು ವೈಷ್ಣವರು ಕಂಡುಬರುತ್ತಾರೆ. ಭೈರವೇಶ್ವರ, ಈಶ್ವರ, ನರಸಿಂಹಸ್ವಾಮಿ, ಮಾರಿಯಮ್ಮ, ದುರ್ಗಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಸಂಕ್ರಾಂತಿಯ ದಿನ ವಿಶೇಷವಾಗಿ ಮಲ್ಲಮ್ಮನ ಪೂಜೆ ಮಾಡುತ್ತಾರೆ. ಅಂದು ತಮ್ಮ ಕಸುಬಿಗೆ ಬೇಕಾದ ಹೊಸ ಬಿದಿರನ್ನು ತಂದು ಪೂಜಿಸುತ್ತಾರೆ. ಸಾಂಪ್ರದಾಯಿಕವಾಗಿ ಶವವನ್ನು ಹೂಳುತ್ತಾರೆ.

**ವಡ್ಡ:** ವಡ್ಡರನ್ನು ಬೋವಿಗಳೆಂದೂ ಕರೆಯುತ್ತಾರೆ. ಇವರಲ್ಲಿ ಕಲ್ಲು ವಡ್ಡರು, ಮಣ್ಣು ವಡ್ಡರು ಹಾಗೂ ಉಪ್ಪು ವಡ್ಡರು ಎಂಬ ವಿಭಾಗಗಳಿದ್ದು, ಈ ಪ್ರತಿಯೊಂದು ವಿಭಾಗದಲ್ಲಿಯೂ ಹಲವು ಹೊರ ವಿವಾಹದ ಉಪವಿಭಾಗಗಳಿವೆ. ಕಲ್ಲು ಒಡೆಯುವುದು, ಬಂಡೆಕಲ್ಲು ಅಗೆಯುವುದು, ಪಾಯ ತೋಡುವುದು, ಬಾವಿ ತೋಡುವುದು, ಕಲ್ಲು ಮಾರಾಟ ಮಾಡುವುದು, ಗಣಿಗಾರಿಕೆ ಮೊದಲಾದವು ಇವರ ಸಾಂಪ್ರದಾಯಿಕ ಉದ್ಯೋಗಗಳಾಗಿದ್ದು, ರಸ್ತೆ ನಿರ್ಮಾಣ, ಕೃಷಿ ಮೊದಲಾದ ಉದ್ಯೋಗಗಳಲ್ಲೂ ಈಚೆಗೆ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯತಿ ಇದೆ. ಇವರು ಮೂಲತಃ ತೆಲುಗು ಮಾತನಾಡುವ ಪ್ರದೇಶಕ್ಕೆ ಸೇರಿದವರಾಗಿರಬೇಕೆಂಬ ಅಭಿಪ್ರಾಯವಿದೆ. ಇವರು ಕನ್ನಡ ಹಾಗೂ ತೆಲುಗು ಮಾತನಾಡುತ್ತಾರೆ. ತೆರ ಪದ್ಧತಿ ರೂಢಿಯಲ್ಲಿದ್ದು ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಅನುಮತಿಯಿದೆ. ಇವರು ಮಾಂಸಾಹಾರಿಗಳು. ತಿರುಪತಿಯ ವೆಂಕಟರಮಣನನ್ನು ವಿಶೇಷವಾಗಿ ಆರಾಧಿಸುತ್ತಾರೆ. ಮಾರಿಯಮ್ಮ, ಚೌಡಮ್ಮ ಮೊದಲಾದ ದೇವತೆಗಳನ್ನೂ ಪೂಜಿಸುವುದುಂಟು. ಇವರಲ್ಲಿ ಶವ ಹೂಳುವ ಪದ್ಧತಿಯಿದೆ.

**ವಿಶ್ವಕರ್ಮ:** ವಿಶ್ವಕರ್ಮ ಸಮುದಾಯದವರು ವಿಶೇಷವಾಗಿ ಪರಂಪರಾಗತ ಕಲಾ ಕೌಶಲ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಇವರನ್ನು ಪಾಂಚಾಳರೆಂದೂ ಕರೆಯುವುದುಂಟು. ಇವರಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿ, ಕಂಚು, ಹಿತ್ತಾಳೆ ಕೆಲಸ ಮಾಡುವ ಕಂಚುಗಾರ, ಕಬ್ಬಿಣದ ಕೆಲಸ ಮಾಡುವ ಕಮ್ಮಾರ (ಲೋಹಾರ), ಮರದ ಕೆಲಸ

ಮಾಡುವ ಬಡಗಿ ಮತ್ತು ಶಿಲ್ಪದ ಕೆಲಸ ಮಾಡುವ ಶಿಲ್ಪಿಗಳು ಸೇರಿದ್ದಾರೆ. ವಿಶ್ವ ಬ್ರಹ್ಮನ ಐದು ಮುಖಗಳಿಂದ ಹುಟ್ಟಿದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಋಷಿಗಳ ಮಕ್ಕಳಾದ ಸನಕ, ಸನಂದನ, ಅಹಭೂವನ, ಪ್ರಾತ್ನಸ ಮತ್ತು ಸುಪರ್ಣರು ಪಾಂಚಾಳರ ಗೋತ್ರಕಾರರೆಂದೂ ಇವರಿಂದ ಮುಂದೆ ೧೨೫ ಗೋತ್ರಗಳು ಹುಟ್ಟಿದವೆಂದೂ ಹೇಳಿಕೆ ಇದೆ. ಯಂತ್ರ-ಮಂತ್ರಗಳನ್ನು ಇವರಲ್ಲಿ ಕೆಲವರು ಅಭ್ಯಾಸ ಮಾಡಿರುತ್ತಾರೆ. ಕನ್ನಡ ಭಾಷಿಕರಾದ ಇವರಲ್ಲಿ ಜನಿವಾರ ಧರಿಸುವ ಪದ್ಧತಿಯಿದೆ. ಇವರ ಧಾರ್ಮಿಕಾಚರಣೆಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುವರು. ವಿವಾಹ ಸಂಬಂಧಕ್ಕಾಗಿ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಮನೆಯಲ್ಲೇ ಆಗುತ್ತದೆ. ತೆರಪದ್ಧತಿ ರೂಢಿಯಲ್ಲಿದೆ. ಕಾಳಿಕಾದೇವಿ ಇವರ ಕುಲದೇವತೆ. ಇವರು ಗ್ರಾಮದೇವತೆಗಳಿಗೆ, ತಿರುಪತಿ ವೆಂಕಟರಮಣ, ನಂಜನಗೂಡು ನಂಜುಂಡೇಶ್ವರ ಮೊದಲಾದ ದೇವತೆಗಳಿಗೂ ಸ್ಥಳೀಯ ದೇವರುಗಳಿಗೂ ಹಾಗೂ ಮಳವಳ್ಳಿ ತಾಲೂಕಿನ ಹಲಗೂರಿನ ಬಳಿ ಇರುವ ಚಿಕ್ಕಲ್ಲೂರಿನ ಸಿದ್ಧಪ್ಪಾಜಿ ಮಠಕ್ಕೂ ನಡೆದುಕೊಳ್ಳುತ್ತಾರೆ. ಇವರಲ್ಲಿ ಮೃತರಿಗೆ ಅಗ್ನಿಸಂಸ್ಕಾರ ಮಾಡುವ ಪದ್ಧತಿ ಇದೆ.

**ವೈಶ್ಯ:** ಆರ್ಯವೈಶ್ಯ, ಶೆಟ್ಟಿ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಇವರ ವಂಶಪಾರಂಪರ್ಯ ಉದ್ಯೋಗವು ವ್ಯಾಪಾರ - ವಾಣಿಜ್ಯಗಳಾಗಿದ್ದು, ಈಚೆಗೆ ಇವರು ಹಲವಾರು ಇತರ ಉದ್ದಿಮೆಗಳಲ್ಲೂ ತೊಡಗಿದ್ದಾರೆ. ಇವರು ಮನೆಯಲ್ಲಿ ತೆಲುಗು ಮಾತನಾಡುವವರಾಗಿದ್ದರೂ ಕನ್ನಡ ಬಲ್ಲವರಾಗಿದ್ದಾರೆ. ಜನಿವಾರ ಧರಿಸುವ ಇವರಲ್ಲಿ ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಗಳಿಗೆ ಸಾಂಪ್ರದಾಯಿಕವಾಗಿ ಅನುಮತಿಯಿಲ್ಲ. ಶಾಖಾಹಾರಿಗಳಾದ ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸುತ್ತಾರೆ. ವೈಶ್ಯರ ದೇವರುಗಳಲ್ಲಿ ನಗರೇಶ್ವರ ಹಾಗೂ ಕನ್ಯಕಾಪರಮೇಶ್ವರಿ (ವಾಸವಿ) ಪ್ರಮುಖವಾದುವು. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ವೈಶಾಖ ಶುದ್ಧ ದಶಮಿಯ ವಾಸವೀ ಜಯಂತಿಯು ಪ್ರಮುಖವಾಗಿದ್ದು, ಅದನ್ನು ಮನೆಗಳಲ್ಲೇ ಅಲ್ಲದೆ ಸಾಮೂಹಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳೊಡನೆ ನಡೆಸುವುದೂ ರೂಢಿಯಲ್ಲಿದೆ. ವೈದಿಕ ಧರ್ಮದಂತೆ ಇವರಲ್ಲಿ ಮೃತರಿಗೆ ಅಗ್ನಿಸಂಸ್ಕಾರ ಮಾಡುತ್ತಾರೆ.

**ಹೊಲೆಯ:** ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಕಂಡುಬರುವ ಇವರು ಸಾಂಪ್ರದಾಯಿಕವಾಗಿ ಗ್ರಾಮದ ಊಳಿಗದವರಾಗಿ ಗ್ರಾಮೀಣ ಸಮಾಜ ವ್ಯವಸ್ಥೆಯಲ್ಲಿ ಹೊಂದಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಒಕ್ಕಲುತನ, ಕೃಷಿ, ಕೂಲಿ, ಮುಂತಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯತಿ ಇದೆ. ಕನ್ನಡ ಭಾಷಿಕರಾದ ಇವರಲ್ಲಿ ಬೆಳ್ಳಿಕುಲ, ವೀಳ್ಯೆಕುಲ, ಹೂವಿನ ಕುಲ ಮೊದಲಾದ ಕುಲಗಳಿವೆ. ವಿವಾಹ ಸಂಬಂಧಕ್ಕಾಗಿ ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಸಂಪ್ರದಾಯವಿದ್ದು, ತೆರಪದ್ಧತಿ ರೂಢಿಯಲ್ಲಿದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ವಿಧವಾ ವಿವಾಹದಲ್ಲಿ ಸಾಮಾನ್ಯವಾಗಿ ದೇವರ ಸನ್ನಿಧಿಯಲ್ಲಿ ಮಾಂಗಲ್ಯ ಕಟ್ಟುವುದು ರೂಢಿಯಲ್ಲಿದ್ದು, ಆಗ ಮುತ್ತೈದೆಯರು ಭಾಗವಹಿಸುವುದಿಲ್ಲ. ಈ ಸಮಾಜದ ಯಜಮಾನರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವರು. ಮಾಂಸಾಹಾರಿಗಳಾದ ಇವರು ತಮ್ಮ ಕುಲದೇವತೆಯರನ್ನೂ ಗ್ರಾಮದೇವತೆಗಳನ್ನೂ ಪೂಜಿಸುವುದಲ್ಲದೆ, ಧರ್ಮಸ್ಥಳದ ಮಂಜುನಾಥ, ಯಡಿಯೂರು ಸಿದ್ಧಲಿಂಗೇಶ್ವರ, ತಿರುಪತಿ ವೆಂಕಟರಮಣ ಮೊದಲಾದ ದೇವರುಗಳಿಗೂ ನಡೆದುಕೊಳ್ಳುತ್ತಾರೆ. ಸಾಂಪ್ರದಾಯಿಕವಾಗಿ ಮೃತರನ್ನು ಹೂಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಗ್ನಿಸಂಸ್ಕಾರ ಮಾಡುವುದೂ ಉಂಟು.

**ಸಾತಾನಿ:** ಸಾತಾನಿಗಳು ಶ್ರೀವೈಷ್ಣವ ಮತಾವಲಂಬಿಗಳಾಗಿದ್ದು, ತಾವು ರಾಮಾನುಜಾಚಾರ್ಯರ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ. ಶ್ರೀವೈಷ್ಣವ ಸಂಪ್ರದಾಯದ ಹನ್ನೆರಡು ಆಳ್ವಾರರ ವೈಭವವನ್ನು ವರ್ಣಿಸುವ ಪವಿತ್ರ ಮಂತ್ರಗಳನ್ನು ಅಪಾರ ಭಕ್ತಿಯಿಂದ ಪಠಿಸುತ್ತಾರೆ. ಇವರು ವಿಶೇಷವಾಗಿ ಆಂಜನೇಯ

ದೇವಾಲಯಗಳಲ್ಲಿ ಅರ್ಚಕರಾಗಿಯೂ, ಕೃಷಿ ಮತ್ತಿತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರು ಉಪ್ಪಾರ, ಕಾಡುಗೊಲ್ಲ ಮೊದಲಾದವರ ಮನೆಯ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವುದೂ ಉಂಟು. ಇವರಲ್ಲಿ ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಗಳಿಗೆ ಸಾಂಪ್ರದಾಯಿಕ ಅನುಮತಿ ಇಲ್ಲ. ಇವರು ತಿರುಪತಿ ವೆಂಕಟರಮಣ, ಮೇಲುಕೋಟೆ ಚೆಲುವರಾಯ, ಶ್ರೀರಂಗಂನ ರಂಗನಾಥ ಮೊದಲಾದ ದೇವರಿಗೆ ನಡೆದುಕೊಳ್ಳುತ್ತಾರೆ ಮೃತರಿಗೆ ಅಗ್ನಿ ಸಂಸ್ಕಾರ ಮಾಡುತ್ತಾರೆ.

**ಲಿಂಗಾಯತ:** ಇವರನ್ನು ಲಿಂಗವಂತ, ಲಿಂಗಧಾರಿ, ವೀರಶೈವ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಕೃಷಿ, ವ್ಯಾಪಾರ, ವಾಣಿಜ್ಯ ಮೊದಲಾದ ಉದ್ಯೋಗಗಳಲ್ಲಿ ತೊಡಗಿರುವ ಇವರ ಪ್ರಮುಖ ವಿಭಾಗಗಳೆಂದರೆ: ೧) ಜಂಗಮರು (ಪುರೋಹಿತ ವರ್ಗ) ೨) ಪಂಚಮಸಾಲಿಗಳು ಅಥವಾ ಪಂಚಾಚಾರ್ಯರು ೩) ಬಣಜಿಗರು (ಸಾಂಪ್ರಾದಾಯಿಕ ವ್ಯಾಪಾರಿಗಳು) ಮತ್ತು ಸಾದರು (ಸಾಂಪ್ರದಾಯಿಕ ಕೃಷಿಕರು). ಇವರು ಕನ್ನಡ ಭಾಷಿಕರು. ಸಮಾಜ ಸುಧಾರಕರಾದ ಬಸವಣ್ಣನವರು ಬೋಧಿಸಿದ ಸಿದ್ಧಾಂತಕ್ಕೆ ಶಕ್ತಿ ವಿಶಿಷ್ಟಾದ್ವೈತ ಎಂದು ಕರೆಯಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು, ಬಳ್ಳಾರಿ ಜಿಲ್ಲೆಯ (ಮೂಲ : ಮಧ್ಯಪ್ರದೇಶ) ಉಜ್ಜನಿ, ಉತ್ತರ ಪ್ರದೇಶದ ಕೇದಾರ ಮತ್ತು ಕಾಶಿ ಹಾಗೂ ಆಂಧ್ರಪ್ರದೇಶದ ಶ್ರೀಶೈಲ ಇವರ ಪಂಚಪೀಠಗಳಾಗಿವೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳು ಇವರ ಆಚರಣೆಯ ಪ್ರಮುಖ ಧಾರ್ಮಿಕ ಲಕ್ಷಣಗಳಾಗಿದ್ದು ಅವು ಇವರ ಧಾರ್ಮಿಕತೆಯ ವಿಶೇಷತೆಯನ್ನು ಬಿಂಬಿಸುತ್ತವೆ. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದಗಳನ್ನೊಳಗೊಂಡ ಅಷ್ಟಾವರಣವು ದೈನಂದಿನ ಜೀವನದ ಕ್ರಮವಾಗಿದೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳು ಪಂಚಾಚಾರದ ಮೂಲಭೂತ ನೈತಿಕ ತತ್ವಗಳಾಗಿವೆ. ಷಟ್‌ಸ್ಥಲಗಳಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳನ್ನು ಲೌಕಿಕದಿಂದ ಪರಮಾರ್ಥದತ್ತ ಕೊಂಡೊಯ್ಯುವ ವಿವಿಧ ಆಧ್ಯಾತ್ಮಿಕ ಹಂತಗಳೆಂದು ಪರಿಗಣಿಸಿದೆ. ಲಿಂಗಾಯತರು ಸಸ್ಯಾಹಾರಿಗಳು. ಇವರು ಸಾಮಾನ್ಯವಾಗಿ ಏಕ ದೇವೋಪಾಸಕರಾಗಿದ್ದು, ಇಷ್ಟಲಿಂಗವನ್ನು ಧರಿಸಿದವರು ಯಾವಾಗಲೂ ಪರಿಶುದ್ಧರೆಂದು ಭಾವಿಸುತ್ತಾರೆ. ಜಂಗಮರು ವಿರಕ್ತರು ಅಥವಾ ಗುರುವರ್ಗ ಪ್ರಕಾರಗಳಿಗೆ ಸೇರಿರುತ್ತಾರೆ. ವಿರಕ್ತರು ಸಂಸಾರವನ್ನು ತ್ಯಜಿಸಿ ಸಾಮಾನ್ಯವಾಗಿ ಮಠಗಳಲ್ಲಿ ವಾಸಿಸುತ್ತಾರೆ. ಜಿಲ್ಲೆಯಲ್ಲಿ ಅನೇಕ ವೀರಶೈವ ಮಠಗಳಿವೆ. ಇವರಲ್ಲಿ ಸತ್ತವರನ್ನು ಕುಳಿತ ಭಂಗಿಯಲ್ಲಿ ಹೂಳುವುದು ರೂಢಿಯಲ್ಲಿದೆ. ಸತ್ತ ೧೧ನೇ ದಿನ ಶಿವಗಣಾರಾಧನೆ ಮಾಡುತ್ತಾರೆ. ಯಡಿಯೂರು ಸಿದ್ಧಲಿಂಗೇಶ್ವರ, ಶ್ರೀಶೈಲ ಮಲ್ಲಿಕಾರ್ಜುನ, ರೇವಣ ಸಿದ್ಧೇಶ್ವರ, ಭ್ರಮರಾಂಬ, ರೇವಮ್ಮ ಮೊದಲಾದ ದೇವತೆಗಳಿಗೆ ಇವರು ನಡೆದುಕೊಳ್ಳುತ್ತಾರೆ.

**ಸೋಲಿಗರು:** ಬಿಳಿಗಿರಿ ರಂಗನಬೆಟ್ಟ ಪರಿಸರದಿಂದ ಸ್ಥಾನಾಂತರಗೊಂಡ ಇವರು ಮುತ್ತತ್ತಿ ಮೊದಲಾದೆಡೆ ನೆಲೆಗೊಂಡಿದ್ದಾರೆ. ಮೂಲತಃ ಜೇನುಬೇಟೆ, ಅರಣ್ಯ ಉತ್ಪನ್ನಗಳ ಸಂಗ್ರಹ ಮಾಡಿ ಜೀವಿಸುತ್ತಿದ್ದ ಸೋಲಿಗರು ಈಚೆಗೆ ಸರ್ಕಾರ ನೀಡಿದ ಜಮೀನಿನಲ್ಲಿ ಬೇಸಾಯ ಮಾಡುತ್ತಿರುವುದಾಗಿಯೂ ಇವರ ಹೆಂಗಸರು ಬಳೆ, ಕರಿಮಣಿ, ಟೇಪು ಮುಂತಾದ ಸಣ್ಣ ಪುಟ್ಟ ವಸ್ತುಗಳ ವ್ಯಾಪಾರವನ್ನೂ, ಗಂಡಸರು ಸಾಮಾನ್ಯವಾಗಿ ಬೀಗ ರಿಪೇರಿ ಮಾಡುವುದು, ಫೋಟೋಗಳಿಗೆ ಕಟ್ಟುಹಾಕುವುದು ಮೊದಲಾದ ಉದ್ಯೋಗಗಳನ್ನೂ ಬಿಡುವಿನಲ್ಲಿ ಮಾಡುವುದಾಗಿ ತಿಳಿದುಬಂದಿದೆ. ಇವರಲ್ಲಿ ಕೆಲವರು ವಿರಾಮವೇಳೆಯಲ್ಲಿ ಸಣ್ಣ–ಪುಟ್ಟ ಪ್ರಾಣಿಪಕ್ಷಿಗಳನ್ನು ಬೇಟೆಯಾಡುವುದೂ ಉಂಟು. ಇವರಲ್ಲಿ ಅನೇಕ ಕುಲಗಳಿದ್ದು ಒಂದೇ ಕುಲದಲ್ಲಿ ವಿವಾಹವಾಗುವಂತಿಲ್ಲ. ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕುವ ಸಂಪ್ರದಾಯವಿದೆ. ಇವರಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ಪೌರೋಹಿತ್ಯದ ಮನೆತನವಿದ್ದು, ಧಾರ್ಮಿಕ ಕಾರ್ಯಗಳನ್ನು ಅವರೇ ನಡೆಸಿಕೊಡುತ್ತಾರೆ. ಇವರಲ್ಲಿ ಮೃತರನ್ನು ಹೂಳುತ್ತಾರೆ.

## ಸಾಮಾಜಿಕ ಜೀವನ

**ಅವಿಭಕ್ತ ಕುಟುಂಬ ಪದ್ಧತಿ :** ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಅವಿಭಕ್ತ ಕುಟುಂಬಗಳು ಕಂಡುಬರುವುದು ಸಾಮಾನ್ಯ. ಇತ್ತೀಚೆಗೆ ಇತರೆಡೆಯಂತೆ ಈ ಜಿಲ್ಲೆಯಲ್ಲೂ ಅವಿಭಕ್ತ ಕುಟುಂಬಗಳು ಬಹಳ ಮಟ್ಟಿಗೆ ಇಳಿಮುಖವಾಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿವಿಭಜನೆಯು ಇದಕ್ಕೆ ಪ್ರಮುಖ ಕಾರಣವಾಗಿದೆ ಎನ್ನಬಹುದು. ಸಂಚಾರ ಮತ್ತು ಸಾರಿಗೆ ಸಂಪರ್ಕಗಳ ಬೆಳವಣಿಗೆ, ಶಿಕ್ಷಣ, ವ್ಯಾಪಾರ, ಕೈಗಾರಿಕೆಗಳ ಅಭಿವೃದ್ಧಿ ಮುಂತಾದವು ನಗರೀಕರಣಕ್ಕೆ ಎಡೆಮಾಡಿಕೊಟ್ಟಿದ್ದು, ಗ್ರಾಮೀಣ ಜನರು ನಗರಪ್ರದೇಶಗಳಿಗೆ ಬಂದು ನೆಲೆಸುತ್ತಿರುವುದು ಮತ್ತೊಂದು ಪ್ರಬಲವಾದ ಕಾರಣವಾಗಿದೆ. ನಗರ ಪ್ರದೇಶಗಳಲ್ಲಿ ಬದಲಾಗುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳಿಂದ ಅವಿಭಕ್ತ ಕುಟುಂಬಗಳು ಶಿಥಿಲವಾಗುತ್ತಿವೆ. ಆದರೂ ಜಿಲ್ಲೆಯ ಕೆಲವೆಡೆಗಳಲ್ಲಿ ಹಾಗೂ ಕೆಲವು ಸಮುದಾಯಗಳಲ್ಲಿ ಇಂದಿಗೂ ಅವಿಭಕ್ತ ಕುಟುಂಬಗಳಿರುವುದು ಕಂಡುಬರುತ್ತದೆ.

**ಗರ್ಭಾವಸ್ಥೆ ಮತ್ತು ಜನನ :** ಗರ್ಭಾವಸ್ಥೆಯಲ್ಲಿದ್ದಾಗ ಹಾಗೂ ಮಗು ಜನನವಾದಾಗ ಆಚರಿಸುವ ಅನೇಕ ಧಾರ್ಮಿಕ ಸಂಪ್ರದಾಯಗಳು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿಯೂ ರೂಢಿಯಲ್ಲಿವೆ. ಗ್ರಹಣ ಕಾಲದಲ್ಲಿ ಗರ್ಭಿಣಿಯರು ಹೊರಗೆ ಬರಬಾರದೆಂಬ ನಂಬಿಕೆ ಮತ್ತು ಅವರಿಗೆ ಇರಬಹುದಾದ ತಿಂಡಿ-ತಿನಿಸುಗಳ ಬಯಕೆಗಳನ್ನು ಪೂರೈಸುವುದು ರೂಢಿಯಲ್ಲಿದೆ. ಹಿಂದೂಗಳಲ್ಲಿ ಗರ್ಭಿಣಿಯರಿಗೆ ೩ ತಿಂಗಳಾದಾಗ ಗಂಡನ ಮನೆಯವರು ಮುಚ್ಚೋರೆ ಬಾಗಿನವನ್ನು ನೀಡುವ ಸಂಪ್ರದಾಯವೂ ಕೆಲವರಲ್ಲಿದೆ. ಏಳು ಅಥವಾ ಒಂಭತ್ತನೇ ತಿಂಗಳಲ್ಲಿ ಬಳೆ ತೊಡಿಸುವ (ಸೀಮಂತ) ಶಾಸ್ತ್ರವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಮೊದಲನೆ ಹೆರಿಗೆಗೆ ಹೆಣ್ಣು ತವರು ಮನೆಗೆ ಹೋಗುತ್ತಾಳೆ. ಮಗು ಹುಟ್ಟಿದ ೧೦ ದಿನಗಳನ್ನು ಮೈಲಿಗೆಯಾಗಿ ಆಚರಿಸಿ, ೧೧ನೇ ದಿನ ಸ್ನಾನ ಶುದ್ಧಿ ಮಾಡಿಕೊಂಡು ಮೈಲಿಗೆಯನ್ನು ನಿವಾರಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಅಂದೇ ಮಗುವಿಗೆ ನಾಮಕರಣ ಮಾಡುತ್ತಾರೆ. ಆದರೆ ಅನಿವಾರ್ಯವಾದಾಗ ಮೂರು ತಿಂಗಳೊಳಗಾಗಿ ನಾಮಕರಣ ಶಾಸ್ತ್ರ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆರಿಗೆಯು ಆಸ್ಪತ್ರೆಯಲ್ಲಾಗುವುದು ಹೆಚ್ಚುತ್ತಾಬಂದಿರುವುದರಿಂದ, ಕೆಲವು ಸಂಪ್ರದಾಯಗಳು ಕಣ್ಮರೆಯಾಗಿವೆ. ಮಕ್ಕಳಿಲ್ಲದ ಸಂದರ್ಭಗಳಲ್ಲಿ ದತ್ತು ತೆಗೆದುಕೊಳ್ಳುವ ಪದ್ಧತಿಯು ಸಾಮಾನ್ಯವಾಗಿ ಎಲ್ಲಾ ವರ್ಗಗಳಲ್ಲಿಯೂ ರೂಢಿಯಲ್ಲಿದೆ. ಹೆಣ್ಣುಮಕ್ಕಳು ಋತುಮತಿಯರಾದಾಗ ಮೂರು ದಿನಗಳಿಂದ ೧೫ ದಿನಗಳವರೆಗೆ (ಕೆಲವರು ೩೦ ದಿನಗಳವರೆಗೆ) ಆಕೆಯನ್ನು ಪ್ರತ್ಯೇಕವಾಗಿ ಕೂರಿಸಿ ಪ್ರತಿನಿತ್ಯ ಆರತಿಯನ್ನು ಬೆಳಗಿ ಕೊನೆಯ ದಿನ ಸೂತಕ ಕಳೆದುಕೊಂಡು ತಮ್ಮ ಬಂಧು-ಮಿತ್ರರಿಗೆ ಸಿಹಿ ಊಟ ಹಾಕುವುದು ಎಲ್ಲಾ ಹಿಂದೂಗಳಲ್ಲೂ ಸಾಮಾನ್ಯವಾಗಿದೆ. ಜೈನರು, ಬ್ರಾಹ್ಮಣರು ವೈದಿಕ ಧರ್ಮವನ್ನಾಚರಿಸುವ ಇತರ ಜಾತಿಗಳಲ್ಲಿ ಗಂಡು ಮಕ್ಕಳಿಗೆ ಉಪನಯನವನ್ನು ಮಾಡುತ್ತಾರೆ. ಜಂಗಮರಲ್ಲಿ ಅಯ್ಯಾಚಾರ ದೀಕ್ಷೆಯನ್ನು ಕೊಡಲಾಗುತ್ತದೆ.

ಮುಸಲ್ಮಾನರಲ್ಲಿ ಮಗು ಹುಟ್ಟಿದ ಕೂಡಲೇ ಕಿವಿಯಲ್ಲಿ ಅಜಾನ್ ಹೇಳಿ ಹೆಸರಿಡುತ್ತಾರೆ. ಮುಂದೆ ಹೆಸರು ಬದಲಾಯಿಸಿಕೊಳ್ಳಲು ಅವಕಾಶವಿರುತ್ತದೆ. ಕರ್ಜೂರವನ್ನು ಜೇನುತುಪ್ಪದಲ್ಲಿ ಅದ್ದಿ ಮಗುವಿನ ಬಾಯಿಗೆ ಸವರುವರು. ಮಗು ಹುಟ್ಟಿದ ಐದು ಅಥವಾ ಆರನೇ ದಿನಕ್ಕೆ ಮಗುವಿಗೆ ಹೊಸ ಅರಿವೆಯನ್ನು ತೊಡಿಸಿ, 'ದೃಷ್ಟಿಬೀಳ'ದ ಹಾಗೆ ಅಲಂಕರಿಸುತ್ತಾರೆ. ಇದಕ್ಕೆ ಹಖೀಖ ಎನ್ನುತ್ತಾರೆ. ಕ್ರೈಸ್ತರಲ್ಲಿ ಸಹ ಮಗು ಹುಟ್ಟಿದ ಒಂದು ತಿಂಗಳೊಳಗೆ ಹೆಸರಿಡುವ ಸಮಾರಂಭವನ್ನು ಚರ್ಚಿನಲ್ಲಿ ನಡೆಸುವುದು ರೂಢಿಯಲ್ಲಿದೆ.

**ವಿವಾಹ :** ಹಿಂದೂಗಳಲ್ಲಿ ಕನ್ಯಾದಾನದ ಸಂಪ್ರದಾಯವಿದೆ. ಕೆಲವು ಜಾತಿಗಳಲ್ಲಿ ಗಂಡಿನ ಮನೆಯವರೇ ಹೆಣ್ಣನ್ನು ಹುಡುಕಿಕೊಂಡು ಹೋಗುವ ಸಂಪ್ರದಾಯವಿದೆ. ಮದುವೆಯು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ

ಅಥವಾ ಕೆಲವು ಜಾತಿಗಳಲ್ಲಿ ಮೊದಲೇ ನಿಶ್ಚಯಿಸಿದಂತೆ ಗಂಡಿನ ಮನೆಯಲ್ಲಿ ನಡೆಯುತ್ತದೆ. ಇತ್ತೀಚಿನ ದಿನಗಳಲ್ಲಿ ದೇವಸ್ಥಾನ, ಮಠ ಇಲ್ಲವೇ ಛತ್ರ (ಕಲ್ಯಾಣ ಮಂಟಪ)ಗಳಲ್ಲಿ ಬಹುತೇಕ ಮದುವೆಗಳು ನಡೆಯುತ್ತವೆ. ಒಂದೇ ಕುಲ ಅಥವಾ ಗೋತ್ರದಲ್ಲಿ ವಿವಾಹ ನಿಷಿದ್ಧ. ವಿವಾಹವು ಒಂದೇ ಜಾತಿ ಹಾಗೂ ಉಪಜಾತಿಗಳಲ್ಲಿ ನೆರವೇರುವುದು ಸಂಪ್ರದಾಯವಾಗಿದ್ದರೂ, ಈಚೆಗೆ ವಿವಿಧ ಉಪಜಾತಿಗಳಲ್ಲಿ ವಿವಾಹ ಸಂಬಂಧವಾಗುವುದೂ ಉಂಟು. ವೀಳ್ಯದ ಶಾಸ್ತ್ರ ಅಥವಾ ನಿಶ್ಚಿತಾರ್ಥದಲ್ಲಿ ಮದುವೆಯ ಪ್ರಸ್ತಾಪ ನಿಶ್ಚಿತ ರೂಪ ತಾಳುತ್ತದೆ. ಬ್ರಾಹ್ಮಣರಲ್ಲಿ ಹಾಗೂ ವೈದಿಕ ಸಂಪ್ರದಾಯವನ್ನನುಸರಿಸುವ ವೈಶ್ಯ ಮೊದಲಾದವರಲ್ಲಿ ವರಪೂಜೆ (ವರ ಮತ್ತು ವರನ ತಂದೆ ತಾಯಿಗಳನ್ನು ಗೌರವದಿಂದ ಬರಮಾಡಿಕೊಳ್ಳುವುದು); ನಾಂದಿ (ವಧೂ–ವರರ ಪೂರ್ವಜರನ್ನು ಆಹ್ವಾನಿಸುವುದು); ಕಾಶೀಯಾತ್ರೆ; ಕಂಕಣಧಾರಣ ; ಧಾರೆ ಎರೆಯುವುದು; ಅಕ್ಷತೆ ಹಾಕುವುದು; ಗುರುಹಿರಿಯರು ಆಶೀರ್ವದಿಸಿದ ಮಂಗಳ ಸೂತ್ರವನ್ನು ಕಟ್ಟುವುದು ; ಲಾಜಹೋಮ (ಹೋಮದಲ್ಲಿ ಭತ್ತದ ಅರಳನ್ನು ಅರ್ಪಿಸುವುದು) ಮತ್ತು ಸಪ್ತಪದಿ (ವಧೂವರರು ಪವಿತ್ರ ಅಗ್ನಿಕುಂಡದ ಸುತ್ತಲೂ ಏಳು ಹೆಜ್ಜೆಗಳನ್ನು ಕ್ರಮಿಸುವುದು) ಆಚರಣೆಗಳು ವಿವಾಹದ ಕರಾರನ್ನು ಸಂಸ್ಕಾರ ರೂಪದಲ್ಲಿ ಸ್ಥಿರಗೊಳಿಸುತ್ತವೆ. ಭೂಮ (ನವದಂಪತಿಗಳು ಜೊತೆಯಲ್ಲಿ ಕುಳಿತು ಊಟ ಮಾಡುವುದು), ಆನಂತರ ಗಂಡಿನ ಮನೆಯವರು ಮದುಮಗಳನ್ನು ತಮ್ಮ ಮನೆಗೆ ಶಾಸ್ತ್ರೋಕ್ತವಾಗಿ ಬರಮಾಡಿಕೊಳ್ಳುವುದರ ಮೂಲಕ (ಮನೆ ತುಂಬಿಸಿಕೊಳ್ಳುವುದು) ವಿವಾಹ ಸಂಸ್ಕಾರವು ಕೊನೆಗೊಳ್ಳುತ್ತದೆ.

ಲಿಂಗಾಯತರು ಪಂಚಕಲಶ ಅಂದರೆ ಐದು ಪವಿತ್ರ ಬಿಂದಿಗೆಗಳ ಪ್ರತಿಷ್ಠಾಪನೆ, ಸುರಿಗೆ ಸುತ್ತುವುದು, ಅರಿಶಿನ ಧಾರಣೆ, ಅಕ್ಷತೆ ಮುಂತಾದ ವಿಧಿಗಳನ್ನು ಆಚರಿಸುತ್ತಾರೆ. ವೀರಭದ್ರನನ್ನು ಕುಲದೇವರೆಂದು ಆರಾಧಿಸುವ ಕುಟುಂಬಗಳು ಮದುವೆಯ ಮೊದಲು ಗುಗ್ಗುಳ ಸೇವೆಯನ್ನೂ ಕೈಗೊಳ್ಳುವರು. ಕಳಶಗಳಲ್ಲಿ ಹಾಲು, ಲೋಬಾನ, ಗುಗ್ಗುಳ ಅಥವಾ ಧೂಪ ಮುಂತಾದ ಪದಾರ್ಥಗಳನ್ನು ತುಂಬಿ ಮೆರವಣಿಗೆಯಲ್ಲಿ ಕೊಂಡೊಯ್ಯುವರು. ಇದು ವೀರಭದ್ರ ಮತ್ತು ಶಿವನಿಗೆ ಸಲ್ಲಿಸುವ ಪೂಜೆಯಾಗಿರುತ್ತದೆ. ಪುರವಂತರು ಈ ಸೇವೆಯನ್ನು ನೆರವೇರಿಸುವರು. ಮಂಗಳಸೂತ್ರವನ್ನು ಕಟ್ಟುವುದು, ಮತ್ತಿತರ ಕೆಲ ವಿವಾಹ ವಿಧಿಗಳು ಬೇರೆ ಹಿಂದೂ ವಿಧಿಗಳನ್ನು ಹೋಲುತ್ತವೆ.

ಲಿಂಗಾಯತ, ಒಕ್ಕಲಿಗ ಮತ್ತಿತರ ಬಹುತೇಕ ಜಾತಿಗಳಲ್ಲಿ ಮದುವೆಯ ಮೊದಲು ಹಾಲುಗಂಬವನ್ನು ಮದುವೆ ಮಂಟಪದಲ್ಲಿ ನಿಲ್ಲಿಸುತ್ತಾರೆ. ಹಾಲುಗಂಬಕ್ಕೆ ವಾಡಿಕೆಯಂತೆ ಕುಂಕುಮ, ಕೇಸರಿ ಮತ್ತು ಸುಣ್ಣ ಬಳಿದು, ಹಸಿರೆಲೆಗಳಿಂದ ಅಲಂಕರಿಸಿ, ಚೌಕಾಕಾರವಾಗಿ ಅದರ ಸುತ್ತಲೂ ಕಲಶಗಳನ್ನಿಟ್ಟು, ನೂಲಿನಿಂದ ಆ ಕಲಶಗಳನ್ನು ದಿಗ್ಬಂದಿಸಿ ಪೂಜೆ ಸಲ್ಲಿಸುತ್ತಾರೆ. ಆನಂತರ, ವಧುವಿನ ಕೊರಳಿಗೆ ವರನು ಮಾಂಗಲ್ಯವನ್ನು ಕಟ್ಟುವನು. ಅನೇಕ ಜಾತಿಗಳಲ್ಲಿ ತೆರ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಕೆಲವು ಜಾತಿಗಳಲ್ಲಿ ಮಾತ್ರ ಪುನರ್ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಸಾಂಪ್ರದಾಯಿಕವಾಗಿ ಅನುಮತಿಯಿದೆ. ವಿಧವೆಯರು ಪುನರ್ವಿವಾಹವಾಗುವುದಕ್ಕೆ ಕೂಡಿಕೆ ಎನ್ನುತ್ತಾರೆ. ಸಾಮಾನ್ಯವಾಗಿ ಇದು ರಾತ್ರಿ ವೇಳೆಯಲ್ಲಿ ನಡೆಯುತ್ತದೆ ಹಾಗೂ ಇದರಲ್ಲಿ ಮುತ್ತೈದೆಯರು ಭಾಗವಹಿಸುವುದಿಲ್ಲ. ಹಿಂದೂ ವಿವಾಹ ಕಾಯಿದೆಯನ್ವಯ ನ್ಯಾಯಾಲಯದ ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಅವಕಾಶವಿದೆ.

ಇತ್ತೀಚೆಗೆ ಸಾಮೂಹಿಕ ವಿವಾಹಗಳು ಈ ಜಿಲ್ಲೆಯಲ್ಲಿ ಜನಪ್ರಿಯವಾಗುತ್ತಿವೆ. ವಿವಾಹದ ವೆಚ್ಚಗಳನ್ನು ಮಿತಗೊಳಿಸುವ ಇವು ಬಡವರಿಗಂತೂ ವರಪ್ರದವಾಗಿವೆ. ಅನೇಕ ಸಂಘ–ಸಂಸ್ಥೆ ಹಾಗೂ ಮಠಗಳು ಈ ಧಾರ್ಮಿಕ ಕಾರ್ಯವನ್ನು ನೆರವೇರಿಸುತ್ತಿದ್ದು ಆ ಸಂದರ್ಭದಲ್ಲಿ ಮದುಮಕ್ಕಳಿಗೆ ಹೊಸ ಬಟ್ಟೆ ಹಾಗೂ ಮಂಗಳಸೂತ್ರವನ್ನು ನೀಡಲಾಗುತ್ತದೆ.

ಅನ್ಯ ಜಾತಿಯ ನಡುವೆ ವೈವಾಹಿಕ ಸಂಬಂಧ ಬೆಳೆಸುವುದಕ್ಕೆ ಅಂತರ್ಜಾತೀಯ ವಿವಾಹವೆನ್ನುತ್ತಾರೆ (ಕೆಲವೊಮ್ಮೆ ಭಿನ್ನ ಧರ್ಮಗಳವರೂ ಪ್ರೀತಿಸಿ ವಿವಾಹ ಆಗುವುದುಂಟು). ಪರಿಶಿಷ್ಟ ಜಾತಿಯವರ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಯೋಜನೆಯಡಿ ಕರ್ನಾಟಕ ಸರ್ಕಾರವು ಈ ರೀತಿ ವಿವಾಹವಾದ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ೨೫,೦೦೦ ರೂ.ಗಳ (೧೨,೫೦೦ ರೂ.ಗಳ ನಗದು ಮತ್ತು ೧೨,೫೦೦ ರೂ.ಗಳ ರಾಷ್ಟ್ರೀಯ ಉಳಿತಾಯ ಪತ್ರ) ಪ್ರೋತ್ಸಾಹ ಧನವನ್ನು ನೀಡುತ್ತಿದೆ (ವಿವರಗಳಿಗೆ ೧೬ನೇ ಅಧ್ಯಾಯ ನೋಡಿರಿ).

ಮುಸ್ಲಿಮರಲ್ಲಿ ಮದುವೆಯ ದಿನ ಮದುಮಗನಿಗೆ ವಿವಾಹದ ಬಟ್ಟೆಗಳನ್ನು ತೊಡಿಸಿ ರುಮಾಲಿನಿಂದ ಇಳಿಬಿಟ್ಟ 'ಸೇಹರಾ' ಅಥವಾ ಹೂಮಾಲೆಗಳಿಂದ ಮುಖವನ್ನು ಮುಚ್ಚುವಂತೆ ಮಾಡುವರು. ವಿವಾಹ ನೆರವೇರಿಸಲು ಖಾಜಿಯು ಗಂಡು ಮತ್ತು ಹೆಣ್ಣಿನ ಒಪ್ಪಿಗೆ (ಕಬೂಲ್) ಪಡೆಯುವನು. ಈ ಒಪ್ಪಂದವು ಹೆಣ್ಣಿನ ಕಡೆಯ ಒಬ್ಬ ವಕೀಲ ಹಾಗೂ ಒಬ್ಬ ಗವಾ (ಸಾಕ್ಷಿ) ಮತ್ತು ಗಂಡಿನ ಕಡೆಯ ಒಬ್ಬ 'ಗವಾ'ರ ಸಮ್ಮುಖದಲ್ಲಿ ನಡೆದು ಅದಕ್ಕಾಗಿ ಇಟ್ಟಿರುವ ಪುಸ್ತಕ ದಫ್ತರ್‌ದಲ್ಲಿ ದಾಖಲಾಗುತ್ತದೆ. ಇದಕ್ಕೆ ಸಾಕ್ಷಿಗಳೂ ಸಹಿ ಮಾಡುತ್ತಾರೆ. ವರನು ವಧುವಿಗೆ ವಿಶಿಷ್ಟ ಉಡುಗೊರೆ ಅಥವಾ 'ಮೆಹರ್' ಕೊಡುವನು. ಆಗ ಖಾಜಿಯು 'ನಿಖಾ' ಓದುತ್ತಾನೆ. ಹಿಂದೂಗಳ ಸಂಪ್ರದಾಯದಂತೆ ಇವರೂ 'ಲಚ್ಚಾ' (ಕರಿಮಣಿ) ಉಪಯೋಗಿಸುತ್ತಾರೆ. ಆದರೆ ಇದನ್ನು ವರನಿಗೆ ಬದಲಾಗಿ ವಿವಾಹಿತ ಹಿರಿಯ ಮಹಿಳೆಯೊಬ್ಬಳು ವಧುವಿನ ಕುತ್ತಿಗೆಗೆ ಕಟ್ಟುವಳು. ಮುಸಲ್ಮಾನರ ಮದುವೆಗಳ ಮೂರು ಮುಖ್ಯ ಅಂಶಗಳೆಂದರೆ–ಗಂಡು ಹೆಣ್ಣಿನ ಒಪ್ಪಿಗೆ, ಸಾಕ್ಷಿದಾರರ ರುಜುವಾತು ಮತ್ತು ಮದುವೆಯ ನಿಶ್ಚಯಗಳು. ಮದುವೆಯಾದ ಆನಂತರ ಹೆಣ್ಣನ್ನು ಗಂಡಿನ ಮನೆಗೆ ಕರೆದುಕೊಂಡು ಹೋಗಿ 'ವಲೀಮ' (ಬೀಗರ ಔತಣ) ಆಚರಿಸುತ್ತಾರೆ. ಮದುವೆಯಾದ ಬಳಿಕ ಮೊದಲನೇ ಶುಕ್ರವಾರ ಹುಡುಗನು ಹುಡುಗಿಯ ಮನೆಯಲ್ಲಿ ಔತಣಕ್ಕೆ ಹೋಗುತ್ತಾನೆ. ಆನಂತರ ಮುಂದಿನ ಮೂರು ಶುಕ್ರವಾರಗಳು ಹತ್ತಿರದ ಸಂಬಂಧಿಕರಲ್ಲಿ ಔತಣಕ್ಕೆ ಆಮಂತ್ರಿತನಾಗುತ್ತಾರೆ. ಇದನ್ನು 'ಚಾರ್ ಜುಮ್ಮಾ' ಅಥವ 'ಜುಮ್ಮಾಗಿ' ಎನ್ನುತ್ತಾರೆ.

ಕ್ರೈಸ್ತರಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸೇರಿ ಮಾತುಕತೆ ನಡೆಸಿದ ಆನಂತರ ನಿಶ್ಚಿತಾರ್ಥವನ್ನು ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ಏರ್ಪಡಿಸುತ್ತಾರೆ. ನಿಶ್ಚಿತಾರ್ಥದಲ್ಲಿ ಹೆಣ್ಣು–ಗಂಡು ಉಂಗುರ ಅಥವಾ ಯಾವುದಾದರೂ ಆಭರಣವನ್ನು ಬದಲಾಯಿಸಿಕೊಳ್ಳುತ್ತಾರೆ. ಮದುವೆಯ ದಿನ ನಿಶ್ಚಯವಾದ ಮೇಲೆ ಮುಂದಿನ ಮೂರು ಭಾನುವಾರಗಳಲ್ಲಿ ಮದುವೆಯ ವಿಷಯವನ್ನು ಮುಂದೆ ಒದಗಬಹುದಾದ ಸಮಸ್ಯೆಗಳನ್ನು ಬಗೆಹರಿಸಲು ಚರ್ಚಿನಲ್ಲಿ ಪ್ರಾರ್ಥನೆ ಬಳಿಕ ಪ್ರಕಟಿಸುತ್ತಾರೆ. ಇದನ್ನು 'ಬಾನ್' ಎನ್ನುತ್ತಾರೆ. ಮದುವೆಯ ದಿನ ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ಮದುವೆಯನ್ನು ಪಾದ್ರಿಗಳು ವಿಧಿವತ್ತಾಗಿ ನೆರವೇರಿಸುತ್ತಾರೆ. ವಧೂವರರು ಉಂಗುರಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ತಾಳಿ ಕಟ್ಟುವ ಸಂಪ್ರದಾಯವೂ ಇವರಲ್ಲಿ ರೂಢಿಗೆ ಬಂದಿದೆ. ಮದುವೆಯ ಪುಸ್ತಕದಲ್ಲಿ ಸಾಕ್ಷಿದಾರರೊಂದಿಗೆ ಸಹಿ ಮಾಡುತ್ತಾರೆ. ಕೊನೆಗೆ ಊಟ ಮತ್ತು ಸಂಗೀತದೊಡನೆ ಸಮಾರಂಭವು ಮುಕ್ತಾಯಗೊಳ್ಳುತ್ತದೆ.

ಭಾರತ ಸರ್ಕಾರದ ವಿವಾಹ ಕಾಯ್ದೆಯನ್ವಯ ಎಲ್ಲರೂ ಕಡ್ಡಾಯವಾಗಿ ವಿವಾಹವನ್ನು ನೋಂದಣಿ ಮಾಡಬೇಕು. ಅದರಂತೆ ಜಿಲ್ಲೆಯ ಉಪನೋಂದಣಿ ಕಛೇರಿಗಳಲ್ಲಿ ೧೯೯೮–೯೯, ೧೯೯೯–೨೦೦೦ ಹಾಗೂ ೨೦೦೦–೨೦೦೧ರ ಸಾಲಿನಲ್ಲಿ ನೋಂದಣಿಯಾಗಿರುವ ದತ್ತಕ ಸ್ವೀಕಾರ ಹಾಗೂ ವಿವಾಹಗಳ ಮಾಹಿತಿಯನ್ನು **ಕೋಷ್ಟಕ ೩.೧೮** ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೧೮ ದತ್ತುಪತ್ರ ಹಾಗೂ ವಿವಾಹಗಳ ನೋಂದಣಿ**

| ಉ.ನೋಂ.ಕಛೇರಿಗಳು | ೧೯೯೮–೯೯ | | | ೧೯೯೯–೨೦೦೦ | | | ೨೦೦೦–೨೦೦೧ | | |
|---|---|---|---|---|---|---|---|---|---|
| | ಎ | ಬಿ | ಸಿ | ಎ | ಬಿ | ಸಿ | ಎ | ಬಿ | ಸಿ |
| ಕೃಷ್ಣರಾಜಪೇಟೆ | ೪ | ೧೮ | – | ೧೦ | ೨೧ | ೧ | ೭ | ೧೪ | ೭ |
| ಮದ್ದೂರು | ೫ | ೯ | ೫ | ೪ | ೪ | ೮ | ೮ | ೨೩ | ೩ |
| ಮಳವಳ್ಳಿ | ೧ | ೧೦ | – | ೩ | ೧೬ | ೨ | ೩ | ೧೫ | – |
| ಮಂಡ್ಯ | ೮ | ೨೪ | ೮೦ | ೧೦ | ೧೪ | ೧೦೮ | ೭ | ೧೯ | ೭೮ |
| ಪಾಂಡವಪುರ | ೧ | ೧೫ | – | ೨ | ೯ | – | ೧ | ೧೪ | ೩ |
| ಶ್ರೀರಂಗಪಟ್ಟಣ | ೨ | ೧೩ | – | – | ೧೫ | ೩ | ೧ | ೭ | ೧ |
| ನಾಗಮಂಗಲ | ೪ | ೧೩ | ೨ | ೨ | ೧೫ | ೩ | – | ೬ | ೩ |
| ಬೆಳ್ಳೂರು | – | – | ೧೩ | – | ೨೦ | – | ೧ | ೬ | ೧ |
| ಒಟ್ಟು | ೨೫ | ೧೦೨ | ೧೦೦ | ೩೧ | ೧೧೪ | ೧೨೫ | ೨೮ | ೧೦೪ | ೯೬ |

(ಎ) ದತ್ತು ಪತ್ರಗಳು (ಬಿ) ವಿಶೇಷ ವಿವಾಹಗಳು (ಸಿ) ಹಿಂದೂ ವಿವಾಹಗಳು

**ಶವಸಂಸ್ಕಾರ ಪದ್ಧತಿ :** ಹಿಂದೂಗಳಲ್ಲಿ ಆಯಾ ಜಾತಿಯ ಸಂಪ್ರದಾಯಕ್ಕೆ ಅನುಗುಣವಾಗಿ ಶವವನ್ನು ದಹನ ಮಾಡುವ ಅಥವಾ ಹೂಳುವ ಪದ್ಧತಿಗಳೆರಡೂ ರೂಢಿಯಲ್ಲಿವೆ. ವೈದಿಕ ಪದ್ಧತಿಯನ್ನಾಚರಿಸುವ ಜಾತಿಗಳಲ್ಲಿ ಸಾವು ಸಂಭವಿಸುವ ಸಮಯಕ್ಕೆ ವ್ಯಕ್ತಿಯ ಬಾಯಿಗೆ ಗಂಗಾಜಲವನ್ನು ಬಿಡುವುದು ರೂಢಿಯಲ್ಲಿದೆ. ಸಾವು ಸಂಭವಿಸಿದ ಮನೆಯ ಮುಂಭಾಗದಲ್ಲಿ ಬೆಂಕಿ ಹಾಕುತ್ತಾರೆ. ಶವವನ್ನು ದರ್ಬೆ ಹುಲ್ಲಿನ ಮೇಲೆ ಮಲಗಿಸುತ್ತಾರೆ. ಆನಂತರ ಶವಕ್ಕೆ ಸ್ನಾನ ಮಾಡಿಸಿ, ಬಿಳಿಬಟ್ಟೆಯಿಂದ ಸುತ್ತಿ ಸ್ಮಶಾನಕ್ಕೆ ಕೊಂಡೊಯ್ಯುತ್ತಾರೆ. ಸಾಂಪ್ರದಾಯಿಕವಾಗಿ ಹೆಗಲ ಮೇಲೆ ಹೊತ್ತು ಶವವನ್ನು ಸಾಗಿಸುವುದು ರೂಢಿಯಲ್ಲಿದ್ದರೂ ನಗರ ಪ್ರದೇಶಗಳಲ್ಲಿ ಹಾಗೂ ಲಭ್ಯವಿರುವ ಕಡೆ ವಾಹನಗಳಲ್ಲಿ ಸಾಗಿಸುವುದೂ ಉಂಟು. ಮೃತರ ಹಿರಿಯ ಮಗನು (ಕೆಲವರಲ್ಲಿ ತಾಯಿಗೆ ಕಿರಿಯ ಮಗ) ಸಂಸ್ಕಾರ ಮಾಡುವುದು ರೂಢಿಯಲ್ಲಿದೆ. ಶವ ಸಂಸ್ಕಾರದ ನಂತರ, ಸಂಸ್ಕಾರಕ್ಕೆ ಹೋಗಿದ್ದವರು ಮನೆಗೆ ಹಿಂತಿರುಗಿ ಶವವನ್ನು ಮಲಗಿಸಿದ್ದ ಜಾಗದಲ್ಲಿ ಹಚ್ಚಿಡಲಾದ ದೀಪವನ್ನು ನೋಡುತ್ತಾರೆ. ಉಳಿದ ಹನ್ನೆರಡು ದಿನಗಳೂ ಆ ದೀಪ ಉರಿಸುತ್ತಾರೆ. ಮರಣದ ಮೂರನೆಯ ದಿನದಂದು ಶವದ ಅಸ್ಥಿ ಮತ್ತು ಬೂದಿಗಳನ್ನು ನದಿಯಲ್ಲಿ ವಿಸರ್ಜಿಸುವುದು ರೂಢಿಯಲ್ಲಿದೆ. ಕೆಲವರಲ್ಲಿ ಸಂಸ್ಕಾರ ವಿಧಿಗಳನ್ನು ಮೂರು, ಐದು, ಏಳು ಅಥವಾ ಒಂಭತ್ತನೇ ದಿನದಿಂದ ಆರಂಭಿಸಿ ೧೦ನೇ ದಿನ ಧರ್ಮೋದಕ, ೧೧ನೆಯ ದಿನದಂದು ಸಪಿಂಡೀಕರಣ ವಿಧಿಯನ್ನು ಮಾಡಿ, ೧೨ನೆಯ ದಿನ ಶ್ರಾದ್ಧವನ್ನು ಆಚರಿಸಿ, ೧೩ ಅಥವಾ ೧೪ನೇ ದಿನ ವೈಕುಂಠ ಸಮಾರಾಧನೆಯನ್ನು ವಿಧಿವತ್ತಾಗಿ ಮಾಡಿ, ತಮ್ಮ ಬಂಧುಮಿತ್ರರಿಗೆ ಸಮಾರಾಧನೆ ಏರ್ಪಡಿಸುವರು. ಮುಂದೆ, ಸತ್ತ ಮೊದಲ ವರ್ಷದ ಪ್ರತೀ ಮಾಸದಲ್ಲಿ ಮಾಸಿಕ ಶ್ರಾದ್ಧವನ್ನು ಆಚರಿಸಿ, ವರ್ಷದ ಕೊನೆಯಲ್ಲಿ ವರ್ಷಾಬ್ಧಿಕವನ್ನು ಮಾಡಿ ಆನಂತರದಲ್ಲಿ ಪ್ರತೀ ವರ್ಷ ಸತ್ತ ದಿನ ವಾರ್ಷಿಕ ಶ್ರಾದ್ಧವನ್ನು ಮಾಡುವುದು ರೂಢಿಯಲ್ಲಿದೆ. ಸರ್ವಪಿತೃ ಅಮಾವಾಸ್ಯೆಯ ದಿನ ಕೆಲವರು ಮೃತ ಬಂಧುಗಳಿಗೆ ತರ್ಪಣ ಬಿಡುತ್ತಾರೆ. ಸಾಮಾನ್ಯವಾಗಿ ಸನ್ಯಾಸಿಗಳ ಹಾಗೂ ಉಪನಯನವಾಗದ ಮಕ್ಕಳ ಶವಗಳನ್ನು ಹೂಳುತ್ತಾರೆ.

ಹೂಳುವ ಪದ್ಧತಿಯಿರುವ ಹಿಂದೂಗಳಲ್ಲಿ ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಕೂರಿಸಿ ಅಥವಾ ದಕ್ಷಿಣ ದಿಕ್ಕಿಗೆ ಶವದ ತಲೆಯಿಟ್ಟು ಮಲಗಿಸಿ ಗೋರಿ ಮಾಡುವರು. ಮರಣದ ಮೂರನೇ ದಿನ ಹಾಲು ಬೆರೆಸಿ

ತಯಾರಿಸಿದ ಆಹಾರವನ್ನು ಶವ ಹೂಳಿದ ಜಾಗದಲ್ಲಿಡುವುದು ರೂಢಿಯಲ್ಲಿದೆ. ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಸತ್ತ ಹನ್ನೊಂದು, ಹನ್ನೆರಡು, ಹದಿಮೂರು ಅಥವಾ ಹದಿನಾಲ್ಕನೇ ದಿನ ಬಂಧು ಮಿತ್ರರನ್ನು ಕರೆದು ಪಾಯಸದ ಊಟ ಹಾಕುವರು. ಮರಣ ಹೊಂದಿದ ಪೂರ್ವಜರಿಗೆ ಸರ್ವಪಿತೃ ಅಮಾವಾಸ್ಯೆಯ ದಿನ ಎಡೆ ಇಡುವ ಪದ್ಧತಿಯೂ ಕೆಲವರಲ್ಲಿದೆ.

ಲಿಂಗಾಯತರಲ್ಲಿ ಸಾವಿನ ಅಂಚಿನಲ್ಲಿರುವ ವ್ಯಕ್ತಿಯನ್ನು ಬಿಳಿವಸ್ತ್ರದ ಮೇಲೆ ಮಲಗಿಸಿ ಮಂತ್ರ ಪಾದೋದಕವನ್ನು ಬಾಯಿಗೆ ಹಾಕಿ, ದೇಹಕ್ಕೆ ವಿಭೂತಿ ಸವರುತ್ತಾರೆ. ಶವದ ಕಾಲುಮಡಿಸಿ, ಕೂರಿಸಿ, ಅಲಂಕರಿಸಿ ಭಜನೆ ಮಾಡುತ್ತಾ ರುದ್ರಭೂಮಿಗೆ ಕೊಂಡೊಯ್ಯುವರು. ಶವವನ್ನು ಕುಳಿತ ಭಂಗಿಯಲ್ಲಿ ಉತ್ತರಕ್ಕೆ ಮುಖಮಾಡಿ ಹೂಳುವುದು ರೂಢಿಯಲ್ಲಿದೆ. ಜಂಗಮರೇ ಅಂತ್ಯಕ್ರಿಯೆಯ ಕ್ರಿಯಾವಿಧಿಗಳನ್ನು ನೆರವೇರಿಸಿಕೊಡುತ್ತಾರೆ. ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ರುದ್ರಭೂಮಿಗೆ ತೆರಳಿದ್ದವರು ಕೈಕಾಲು ತೊಳೆದು (ನೀರು ಮುಟ್ಟಿ), ಮೃತನ ಮನೆಗೆ ಬಂದು ದೀಪವನ್ನು ನೋಡಿ ಹಿಂದಿರುಗುತ್ತಾರೆ. ಮರಣವಾದ ಹನ್ನೊಂದನೆಯ ದಿನ ಶಿವಗಣಾರಾಧನೆಯನ್ನು ಆಚರಿಸಿ ತಮ್ಮ ಬಂಧು ಮಿತ್ರರಿಗೆ ಸಮಾರಾಧನೆ (ಭೋಜನ) ಏರ್ಪಡಿಸುವರು.

ಮುಸಲ್ಮಾನರಲ್ಲಿ ಸಾಯುವಾಗ ಕಲೀಮಾ (ಕುರಾನ್ ಪಠಣ) ಪಠಿಸಿ ಬಾಯಿಗೆ ನೀರು ಹಾಕುತ್ತಾರೆ. ಆನಂತರ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಇದಕ್ಕೆ ಗುಸುಲ್ ಎನ್ನುತ್ತಾರೆ. ಬಳಿಕ ಪುರುಷರಾದರೆ ಬಿಳಿಬಟ್ಟೆ, ಸ್ತ್ರೀಯರಾದರೆ ಕೆಂಪುಬಟ್ಟೆ ತೊಡಿಸಿ ಬಟ್ಟೆಗೆ ಸುಗಂಧ, ಕಣ್ಣಿಗೆ ಸುರಮ (ಕಾಡಿಗೆ) ಹಚ್ಚಿ, ವಧುವಿನಂತೆ ಅಲಂಕರಿಸುತ್ತಾರೆ. ಈ ಸಂದರ್ಭದಲ್ಲಿ ಹೊರಗಾದ ಹೆಂಗಸರು ಭಾಗವಹಿಸುವಂತಿಲ್ಲ. ಶವದ ಸುತ್ತ ಬಂಧು ಮಿತ್ರರು ಕುಳಿತು ಕುರಾನ್ ಪಠಣ ಮಾಡುತ್ತಾರೆ. ಶವ ಕೊಂಡೊಯ್ಯುವಾಗ ಎದುರಿಗೆ ಬಂದ ಮುಸಲ್ಮಾನರು ಸಾಮಾನ್ಯವಾಗಿ ಅಂತಸ್ತಿನ ಭೇದವಿಲ್ಲದೆ ಸ್ವಲ್ಪ ದೂರ ಚಟ್ಟಕ್ಕೆ ಹೆಗಲನ್ನು ಕೊಡುತ್ತಾರೆ. ಶವಸಂಸ್ಕಾರಕ್ಕೆ ಮೊದಲು ನಮಾಜ್ ಮಾಡುವರು. ಇದನ್ನು ನಮಾಜೆ ಜನಾಜ ಎನ್ನುತ್ತಾರೆ. ತಲೆಯನ್ನು ಉತ್ತರ ದಿಕ್ಕಿಗೂ ಮುಖವನ್ನು ಮೆಕ್ಕಾ ಕಡೆಗೂ ಮಾಡಿ ಶವ ಹೂಳುತ್ತಾರೆ. ಶವಸಂಸ್ಕಾರದ ಬಳಿಕ ಅಲ್ಲಿದ್ದವರಿಗೆ ಉತ್ತುತ್ತಿಯನ್ನು ಹಂಚುತ್ತಾರೆ. ಸ್ಮಶಾನದಿಂದ ೪೦ ಹೆಜ್ಜೆ ಬಂದ ನಂತರ ಗೋರಿಯ ಕಡೆ ಮುಖ ಮಾಡಿಕೊಂಡು ಪ್ರಾರ್ಥನೆ ಮಾಡಿ ಮೃತರಿಗೆ ಅಂತಿಮ ಗೌರವ ಸಲ್ಲಿಸುತ್ತಾರೆ. ಮೂರನೆಯ ದಿನ ಮುಂಜಾನೆ ಬಂಧು ಮಿತ್ರರು ಮಸೀದಿಗೆ ಹೋಗಿ ನಮಾಜ್ ಮಾಡಿ ಆನಂತರ ಫಾತೆಹಾಖಾನಿ ಪ್ರಾರ್ಥನೆ ಸಲ್ಲಿಸಿ ಅಲ್ಲಿದ್ದವರಿಗೆ ಸಿಹಿ ಹಂಚಿ, ಸ್ಮಶಾನಕ್ಕೆ ಹೋಗಿ ಸತ್ತವರ ಆತ್ಮಕ್ಕೆ ಶಾಂತಿ ಕೋರುತ್ತಾರೆ. ಹಾಗೆಯೇ ಸತ್ತ ೧೦ನೆಯ, ೨೦ನೆಯ ಮತ್ತು ೪೦ನೆಯ ದಿನ ಪ್ರಾರ್ಥನೆ ಮಾಡುತ್ತಾರೆ. ಸತ್ತ ಮೊದಲನೇ ವರ್ಷದ ದಿನ ಬಂಧು ಮಿತ್ರರು ಮತ್ತು ಬಡಬಗ್ಗರಿಗೆ ಸಂತರ್ಪಣೆ ಮಾಡುತ್ತಾರೆ.

ಕ್ರೈಸ್ತರಲ್ಲಿ ವ್ಯಕ್ತಿ ಸಾಯುವ ಸಮಯಕ್ಕೆ ಪ್ಯಾರಿಷ್ ಪಾದ್ರಿಯನ್ನು ಕರೆಸುತ್ತಾರೆ. ಪ್ರಾಟೆಸ್ಟೆಂಟ್‌ರಲ್ಲಿ ಸಾಯುತ್ತಿರುವ ವ್ಯಕ್ತಿಗೆ ಚರ್ಚಿನ ಧರ್ಮಗುರುವು ಕರ್ತನ ಪವಿತ್ರ ಕಡೆಯ ಭೋಜನವೆಂಬ ಸಂಸ್ಕಾರವನ್ನು ಮಾಡುವರು. ರೋಮನ್ ಕ್ಯಾಥೊಲಿಕ್‌ರಲ್ಲಿ ಪಾದ್ರಿಯು ಸಾಯುತ್ತಿರುವವರ ಶರೀರಕ್ಕೆ ಪವಿತ್ರಎಣ್ಣೆಯನ್ನು ಸವರುತ್ತಾರೆ. ಸತ್ತ ಆನಂತರ ದೇಹವನ್ನು ತೊಳೆದು ಅಲಂಕರಿಸಿ ಒಂದು ಎತ್ತರವಾದ ಜಾಗದಲ್ಲಿಡುತ್ತಾರೆ. ಪಕ್ಕದಲ್ಲಿ ಮೇಣದ ಬತ್ತಿ ಉರಿಯುತ್ತಿರುತ್ತದೆ. ಮೇಲುಗಡೆ ಶಿಲುಬೆಯಿರುತ್ತದೆ. ಪವಿತ್ರವಾದ ನೀರನ್ನು ಕಾಲು ಬಳಿ ಇಟ್ಟಿರುತ್ತಾರೆ. ಬಂದವರೆಲ್ಲರೂ ಆ ಪವಿತ್ರ ನೀರನ್ನು ಶರೀರದ ಮೇಲೆ ಚಿಮುಕಿಸುತ್ತಾರೆ. ಅನುಕೂಲವಿರುವವರು ಕಪ್ಪು ಬಟ್ಟೆ ತೊಟ್ಟ ಶವ ಹೊರುವವರನ್ನು (ಪಾಲ್ ಬೇರರ್ಸ್) ಕರೆಸಿ ಶವವನ್ನು ಶವದ ಪೆಟ್ಟಿಗೆಯಲ್ಲಿರಿಸಿ ಹೊತ್ತು ಅಥವಾ ಕುದುರೆಗಾಡಿಯಲ್ಲಿಟ್ಟು ಪ್ಯಾರಿಷ್ ಚರ್ಚ್‌ಗೆ ಕೊಂಡೊಯ್ಯುತ್ತಾರೆ. ಅಲ್ಲಿ ಪಾದ್ರಿಯು ಮೃತದೇಹದ ಮೇಲೆ ಪವಿತ್ರ ನೀರನ್ನು ಚಿಮುಕಿಸಿ ಆಶೀರ್ವದಿಸುತ್ತಾನೆ. ಆನಂತರ ಶವವನ್ನು ಹೂಳುತ್ತಾರೆ. ರೋಮನ್ ಕ್ಯಾಥೊಲಿಕ್

ಜನಾಂಗದವರಲ್ಲಿ ಸತ್ತ ದಿನ, ಮೂರನೇ, ಏಳನೇ ಹಾಗೂ ೨೦ನೇ ದಿನ (ಪ್ರಾಟೆಸ್ಟೆಂಟ್‌ರಲ್ಲಿ ಹತ್ತನೆಯ ದಿನ) ಸತ್ತವರಿಗೆ ವಿಶೇಷ ಪ್ರಾರ್ಥನೆ ನಡೆಸುತ್ತಾರೆ.

**ಗೃಹ ಜೀವನ :** ಮಂಡ್ಯ ಜಿಲ್ಲೆಯಲ್ಲಿ ವಿವಿಧ ಶೈಲಿಗಳ ಮನೆಗಳು ಕಂಡುಬರುತ್ತವೆ. ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗಳ ಪ್ರಭಾವದಿಂದ ಇತ್ತೀಚೆಗೆ ನಗರಪ್ರದೇಶದ ಮನೆಗಳ ರಚನೆಯಲ್ಲಿ ಹಲವಾರು ಬದಲಾವಣೆಗಳು ಕಂಡುಬಂದಿವೆ. ಗ್ರಾಮೀಣ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸುವಾಗ ಯೋಜನೆ ಅಥವಾ ಶುಚಿತ್ವಕ್ಕೆ ಮಹತ್ವ ನೀಡಿರುವುದು ವಿರಳ. ಹಿಂದಿನ ಕಾಲದವು ಬಹುತೇಕವಾಗಿ ಮಣ್ಣಿನ ಗೋಡೆಗಳುಳ್ಳ ಮನೆಗಳಾಗಿದ್ದು, ಸಾಮಾನ್ಯವಾಗಿ ಅವು ಮುಂಭಾಗದಲ್ಲಿ ತೆರೆದ ಜಗಲಿ, ಒಳಗೆ ನಡುಮನೆ, ಅದರ ಪಕ್ಕದಲ್ಲಿ ಅನುಕೂಲಕ್ಕೆ ತಕ್ಕಂತೆ ಒಂದೆರಡು ಕೊಠಡಿಗಳು, ಮನೆಯ ಹಿಂಭಾಗ ಬಚ್ಚಲುಮನೆ ಹಾಗೂ ಹಿತ್ತಲುಗಳನ್ನು, ಹೊರಪಕ್ಕದಲ್ಲಿ ಹೊಸಾರು (ವಪ್ಪಾರ) ವನ್ನೂ ಒಳಗೊಂಡಿರುತ್ತವೆ. ಬ್ರಾಹ್ಮಣರ ಮನೆಯ ಮುಂದೆ ತುಳಸಿಕಟ್ಟೆ, ಬಾವಿ (ಕೆಲವು ಕಡೆ ಪ್ರತೀ ಮನೆಯ ಒಳ ಭಾಗದಲ್ಲೇ ಒಂದೊಂದು ಬಾವಿ ಇರುವುದೂ ಕಂಡು ಬಂದಿದೆ) ಮತ್ತು ಅಡಿಗೆ ಮನೆಯ ಒಂದು ಭಾಗದಲ್ಲಿ ದೇವರ ಜಗಲಿ ಹಾಗೂ ಬೇಸಾಯಗಾರರ ಮನೆಗಳಲ್ಲಿ ದನದ ಕೊಟ್ಟಿಗೆಯನ್ನೂ ಕಾಣಬಹುದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ತೊಟ್ಟಿಮನೆ (ಮನೆಯ ನಡುಭಾಗದಲ್ಲಿ ಮೇಲ್ಛಾವಣಿಯಿಲ್ಲದ ತೆರೆದ ಜಾಗ)ಗಳಿದ್ದು ಸಾಮಾನ್ಯವಾಗಿ ಮನೆಗಳಲ್ಲಿ ಬತ್ತ ಮೊದಲಾದ ಧಾನ್ಯಗಳನ್ನು ಶೇಖರಿಸಿಡುವ ಕಣಜ ಅಥವಾ ಈಚಲು ಚಾಪೆ ಇಲ್ಲವೇ ಬಿದಿರಿನಿಂದ ಮಾಡಿದ ಪೆಟ್ಟೆ ಇರುವುದು ಕಂಡುಬರುತ್ತದೆ. ಹಿಂದಿನ ಕಾಲದ ಮನೆಗಳು ಸಗಣಿ ಅಥವ ಗಾರೆ ನೆಲವನ್ನೊಳಗೊಂಡಿದ್ದು, ಶ್ರೀಮಂತರ ಮನೆಗಳಲ್ಲಿ ನೆಲಕ್ಕೆ ಕಡಪಕಲ್ಲನ್ನು ಹಾಸುತ್ತಿದ್ದರು. ಗೋಡೆಗಳ ರಚನೆಗೆ ಮಣ್ಣು, ಕಲ್ಲು, ಗಾರೆ ಬಳಸಿ, ಮೇಲೆ ಹೊರಮಣ್ಣು ಅಥವಾ ಮಣ್ಣುಗಾಜು ಮಾಡಲಾಗುತ್ತಿದ್ದು ಈಚೆಗೆ ಸುಟ್ಟ ಇಟ್ಟಿಗೆ, ಸಿಮೆಂಟ್ ಬಳಸುವುದು ರೂಢಿಗೆ ಬಂದಿದೆ. ಹಿಂದಿನ ಕಾಲದ ಮನೆಗಳಲ್ಲಿ ಮೇಲ್ಛಾವಣಿಗೆ ಭೂತಾಳಿ ಸೊಪ್ಪು, ಒಣಹುಲ್ಲು ಹಾಗೂ ನಾಡಹೆಂಚುಗಳನ್ನು ಬಳಸುತ್ತಿದ್ದು, ಮಂಗಳೂರು ಹೆಂಚನ್ನು ಬಳಸಿರುವುದು ಸಾಮಾನ್ಯವಾಗಿಯೂ, ತಾರಸಿ ಮೇಲ್ಛಾವಣಿಗಳು ಅತ್ಯಂತ ವಿರಳವಾಗಿಯೂ ಕಂಡುಬರುತ್ತವೆ. ಈಚೆಗೆ ಜನರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳು ಮತ್ತು ಅಭಿರುಚಿಗಳಿಗೆ ತಕ್ಕಂತೆ ನವೀನ ಶೈಲಿಗಳಲ್ಲಿ ಒಂದು ಅಥವಾ ಎರಡು ಮಹಡಿಗಳುಳ್ಳ ವಿಶಾಲವಾದ ಮನೆಗಳನ್ನು ಕಟ್ಟಿರುವುದೇಅಲ್ಲದೆ, ನೆಲಕ್ಕೆ ವಿವಿಧ ಬಗೆಯ ಮೊಸಾಯಿಕ್, ಮೇಲ್ಛಾವಣಿಗೆ ತಾರಸಿ, ತೇಗ, ಹಲಸು ಮೊದಲಾದ ಮರಗಳಿಂದ ಮಾಡಿದ, ವಿವಿಧ ಆಕಾರ ಹಾಗೂ ವಿನ್ಯಾಸಗಳ ಬಾಗಿಲು, ಕಿಟಕಿಗಳನ್ನು ಬಳಸಿರುವುದು ಕಂಡುಬರುತ್ತದೆ. ಆದರೂ ಜಿಲ್ಲೆಯ ಅನೇಕ ಕಡೆಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣು ಕಲ್ಲಿನ ಗೋಡೆಯ ಜೋಪಡಿ ಮನೆಗಳನ್ನು ಇಂದಿಗೂ ಕಾಣಬಹುದಾಗಿದೆ.

ಮುಸಲ್ಮಾನರ ಮನೆಯ ಹೊರಗೋಡೆಗಳು ಎತ್ತರವಾಗಿರುತ್ತವೆ. ಇವರ ಮಹಿಳೆಯರ ಪರದಾ ಪದ್ಧತಿಯು ಇದಕ್ಕೆ ಕಾರಣವಾಗಿರಬಹುದು.

ಕ್ರೈಸ್ತರ ಗೃಹಗಳಲ್ಲಿ ಮರದ ಬಾಗಿಲುವಾಡಗಳು, ಮಂಕಿಟಾಪ್‌ಗಳು ಅಥವಾ ಕಿಟಕಿಯ ಮೇಲ್ಭಾಗದಲ್ಲಿ ಕಮಾನುಗಳು ಕಂಡುಬರುತ್ತವೆ. ಮನೆಯಲ್ಲಿ ಮರ ಅಥವಾ ಸಿಮೆಂಟಿನಿಂದ ಕೃತಕ ಜಗಲಿಯನ್ನು ನಿರ್ಮಿಸಿ ಅದರ ಮೇಲೆ ಮೇರಿ ಮತ್ತು ಏಸುವಿನ ಮೂರ್ತಿ ಅಥವಾ ಶಿಲುಬೆ ಇಡಲಾಗಿರುತ್ತದೆ. ಇವರು ಪ್ರಾರ್ಥನೆಯನ್ನು ಇದೇ ಜಾಗದಲ್ಲಿ ಮಾಡುತ್ತಾರೆ.

ವಿದ್ಯುಚ್ಛಕ್ತಿ ಹಾಗೂ ಶೌಚಾಲಯ ಸೌಲಭ್ಯಗಳು ಮನೆಗಳಲ್ಲಿ ದಿನೇ ದಿನೇ ಹೆಚ್ಚುತ್ತಾ ಬಂದಿದ್ದರೂ, ಅನೇಕ ಮನೆಗಳಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಇದು ಇನ್ನೂ ವಿರಳವಾಗಿಯೇ ಇದೆ.

**ಆಹಾರಾಭ್ಯಾಸಗಳು:** ಆಹಾರಾಭ್ಯಾಸಗಳನ್ನು ಶಾಖಾಹಾರಿ ಹಾಗೂ ಮಾಂಸಾಹಾರಿ ಎಂಬ ಎರಡು ಪದ್ಧತಿಗಳಾಗಿ ವಿಂಗಡಿಸಬಹುದು. ಹಿಂದೂಗಳಲ್ಲಿ ಪ್ರಧಾನವಾಗಿ ಬ್ರಾಹ್ಮಣರು, ಲಿಂಗಾಯತರು, ವೈಶ್ಯರು ಮತ್ತು ಜೈನರು ಸಸ್ಯಾಹಾರಿಗಳಾಗಿದ್ದು ಇತರ ಅನೇಕ ಜಾತಿಯವರು ಮಾಂಸಾಹಾರಿಗಳೂ ಆಗಿರುತ್ತಾರೆ. ಮಾಂಸಾಹಾರಿಗಳಲ್ಲಿ ಕೆಲವರು ಸೋಮವಾರ ಹಾಗೂ ಶನಿವಾರದ ದಿನಗಳಲ್ಲಿ ಹಾಗೂ ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಮಾಂಸಾಹಾರ ಸೇವಿಸುವುದಿಲ್ಲ. ಜಿಲ್ಲೆಯಲ್ಲಿ ರಾಗಿ ಮತ್ತು ಅಕ್ಕಿ ಪ್ರಧಾನ ಆಹಾರಾಂಶಗಳಾಗಿದ್ದು, ಈಚೆಗೆ ಗೋಧಿಯೂ ಬಳಕೆಗೆ ಬಂದಿದೆ. ಮೊದಲಿಗೆ ರೈತಾಪಿ ಮನೆಗಳಲ್ಲಿ ಬೆಳಗಿನ ವೇಳೆಗೆ ತಂಗಳೇ ಉಪಾಹಾರವಾಗಿದ್ದು, ಹಲವರಲ್ಲಿ ಉಪ್ಪಿಟ್ಟು, ಇಡ್ಲಿ, ದೋಸೆ, ರೊಟ್ಟಿ, ರಾಗಿಹುರಿಟ್ಟು ಮೊದಲಾದ ತಿಂಡಿಗಳನ್ನು ಬಳಸುವುದು ರೂಢಿಯಲ್ಲಿದ್ದು, ಈಚೆಗೆ ಚಪಾತಿ, ಪೂರಿಗಳನ್ನೂ ಮಾಡುವುದುಂಟು. ಮಧ್ಯಾಹ್ನ ಹಾಗೂ ರಾತ್ರಿಯ ವೇಳೆಯಲ್ಲಿ ಊಟಕ್ಕೆ ಸಾಮಾನ್ಯವಾಗಿ ರಾಗಿಮುದ್ದೆ, ಅನ್ನದ ಜೊತೆಗೆ ಹುರುಳಿಕಟ್ಟು, ಬೇಳೆಸಾರು ಅಥವಾ ಸಾಂಬಾರು (ಹುಳಿ) ಕೂಟು, ಮೇಲೋಗರ, ಮೆಣಸಿನಸಾರು, ಮೊಸರಿನ ಹುಳಿ, ಗೊಜ್ಜು, ಪಲ್ಯ ಹಾಗೂ ಮೊಸರು ಬಳಸುವುದೂ ರೂಢಿಯಲ್ಲಿದೆ. ಊಟದ ಜೊತೆಯಲ್ಲಿ ಹಪ್ಪಳ, ಸಂಡಿಗೆ, ವಿವಿಧ ಬಗೆಯ ಉಪ್ಪಿನಕಾಯಿ ಮುಂತಾದವುಗಳನ್ನೂ ಸಾಂದರ್ಭಿಕವಾಗಿ ಬಳಸುತ್ತಾರೆ. ಮೊದಲಿಗೆ ಅವರೆ, ಅಲಸಂದೆ, ಹುರುಳಿ, ಹೆಸರು, ತೊಗರಿ(ಬೇಳೆ), ಕಡಲೆ, ಉದ್ದು ಮೊದಲಾದ ಕಾಳುಗಳು; ಬದನೆಕಾಯಿ, ಕುಂಬಳಕಾಯಿ, ಅವರೆಕಾಯಿ, ಗೋರಿಕಾಯಿ, ಹುರುಳಿಕಾಯಿ, ಬೆಂಡೆಕಾಯಿ, ಹಾಗಲಕಾಯಿ, ಪಡವಲಕಾಯಿ, ಸೌತೆಕಾಯಿ, ಮೂಲಂಗಿ ಮೊದಲಾದ ತರಕಾರಿಗಳು ಹಾಗೂ ಮೆಂತ್ಯ, ಸಬ್ಬಸಿಗೆ, ಅರಿವೆ, ಚಕ್ಕೋತ, ಬಸಳೆ, ಹೊನಗೊನೆ ಮೊದಲಾದ ವಿವಿಧ ಬಗೆಯ ಸೊಪ್ಪುಗಳು ಬಳಕೆಯಲ್ಲಿದ್ದು ಈಚೆಗೆ ಟೊಮೊಟೋ, ಕ್ಯಾರೆಟ್, ಬೀಟ್‌ರೂಟ್, ಆಲೂಗಡ್ಡೆ, ದಪ್ಪ ಮೆಣಸಿನಕಾಯಿ, ವಿವಿಧ ಬಗೆಯ ಕೋಸು, ತೊಂಡೆಕಾಯಿ, ನುಗ್ಗೆಕಾಯಿ ಮೊದಲಾದ ತರಕಾರಿಗಳನ್ನೂ ಬಳಸುತ್ತಿದ್ದಾರೆ. ಕೆಲವು ಸಂಪ್ರದಾಯಸ್ಥರು ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಬಳಸುವುದಿಲ್ಲ.

ವೈದಿಕ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವವರು ಊಟಕ್ಕೆ ಬಾಳೆಎಲೆ ಅಥವಾ ಮುತ್ತುಗದ ಎಲೆ ಬಳಸುತ್ತಾರೆ. ಇತರರು ಮೊದಲಿಗೆ ಕಂಚು ಅಥವಾ ಅಲ್ಯುಮಿನಿಯಂ ತಟ್ಟೆಯನ್ನು ಬಳಸುತ್ತಿದ್ದು, ಈಚೆಗೆ ಸ್ಟೈನ್‌ಲೆಸ್ ಸ್ಟೀಲ್ ತಟ್ಟೆಗಳನ್ನು ಬಳಸುವುದು ಸಾಮಾನ್ಯವಾಗಿದೆ. ಇತ್ತೀಚೆಗೆ ಹೋಟೆಲ್‌ಗಳು, ಬೇಕರಿ ಮತ್ತು ತಂಪು ಪಾನೀಯದ ಅಂಗಡಿಗಳು ನಗರ ಹಾಗೂ ಪಟ್ಟಣಗಳಲ್ಲಿ ಹೆಚ್ಚಾಗಿ ಕಂಡುಬಂದರೂ ಕೆಲವು ದೊಡ್ಡ ಗ್ರಾಮಗಳಲ್ಲೂ ಆರಂಭವಾಗಿವೆ.

ಮುಸಲ್ಮಾನರು ಮಾಂಸಾಹಾರಿಗಳಾಗಿದ್ದು, ಸಂಪ್ರದಾಯದಂತೆ ಕಡಿದ (ಹಲಾಲ್) ಮಾಂಸವನ್ನು ಮಾತ್ರ ಬಳಸುತ್ತಾರೆ. ಆದರೆ ಇದು ಮೀನಿಗೆ ಅನ್ವಯಿಸುವುದಿಲ್ಲ. ಹಬ್ಬ ಮದುವೆ ಮುಂತಾದ ಸಂದರ್ಭಗಳಲ್ಲಿ ಇವರು ಬಿರಿಯಾನಿ, ಪಲಾವ್, ಕೋಳಿ ಖೈಮಾ, ಶಾವಿಗೆಪಾಯಸ, ಚೋಂಗೆ (ಒಂದು ರೀತಿಯ ಕರಿಕಡುಬು) ಮತ್ತಿತರ ಸಿಹಿ ಪದಾರ್ಥಗಳನ್ನು ತಯಾರಿಸುತ್ತಾರೆ.

ಕ್ರೈಸ್ತರು ಮಾಂಸಾಹಾರಿಗಳು. ಇವರು ತಮ್ಮ ಹಬ್ಬ, ಮದುವೆ ಮೊದಲಾದ ಸಂದರ್ಭಗಳಲ್ಲಿ ಬಿರಿಯಾನಿ, ಪಲಾವ್, ಕೇಕ್, ವಿವಿಧ ಬಗೆಯ ಸಿಹಿತಿಂಡಿ ಮೊದಲಾದುವನ್ನು ತಯಾರಿಸುತ್ತಾರೆ.

**ಮದ್ದೂರು ವಡೆ:** ಇದು ಮದ್ದೂರು ರೈಲ್ವೆ ನಿಲ್ದಾಣದ ಉಪಾಹಾರ ಮಂದಿರದಲ್ಲಿ ೧೯೦೨ರಲ್ಲಿ ಒಂದು ಹೊಸ ಪ್ರಯೋಗವಾಗಿ ತಯಾರಿಸಿದ ತಿನಿಸಾಗಿದ್ದು, ಅದು ಇಂದಿಗೂ ಒಂದು ಪ್ರಖ್ಯಾತ ಹಾಗೂ ರುಚಿಯಾದ ತಿಂಡಿಯಾಗಿ ಪ್ರಚಾರದಲ್ಲಿದೆ. ರವೆ, ಅಕ್ಕಿಹಿಟ್ಟು, ಮೈದಾಹಿಟ್ಟು ಹಾಗೂ ಬಳ್ಳಾರಿ ಈರುಳ್ಳಿ ಇತ್ಯಾದಿಗಳನ್ನು ಬಳಸಿ ಇದನ್ನು ತಯಾರಿಸುತ್ತಾರೆ.

**ಉಡುಪು:** ಉಡುಪು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಆಯಾ ಪ್ರದೇಶದ ಹವಾಮಾನ ಜಾತಿ, ಮತ, ರೂಢಿ–ಪದ್ಧತಿ ಮೊದಲಾದವು ಇದಕ್ಕೆ ಕಾರಣವಾಗಿವೆ. ಸಾಂಪ್ರದಾಯಿಕವಾಗಿ ಈ ಜಿಲ್ಲೆಯ ಹಿಂದೂ ಗಂಡಸರಲ್ಲಿ ರೂಢಿಯಲ್ಲಿರುವ ಉಡುಪುಗಳೆಂದರೆ: ಧೋತರ ಅಥವಾ ಪಂಚೆಯನ್ನು ಕಚ್ಚೆ ಹಾಕಿ ಇಲ್ಲವೆ ಸಾಧಾರಣವಾಗಿ ಉಡುವುದು; ತುಂಬು ತೋಳಿನ ಅಂಗಿ ಹಾಗೂ ಹೆಗಲ ಮೇಲೆ ಒಂದು ಚೌಕ. ವೈದಿಕ ಧರ್ಮವನ್ನು ಶಿಸ್ತಾಗಿ ಪರಿಪಾಲಿಸುವವರು ಕಚ್ಚೆ ಪಂಚೆಯನ್ನುಟ್ಟು, ಶಲ್ಯ ಅಥವಾ ಶಾಲನ್ನು ಹೊದೆಯುತ್ತಾರೆ. ಈ ಮೊದಲು, ಕಛೇರಿಗಳಲ್ಲಿ ಕೆಲಸ ಮಾಡುವವರು ಹಾಗೂ ಹಿರಿಯ ಯಜಮಾನರು ಕೋಟನ್ನು ಧರಿಸಿ, ಟೋಪಿ ಅಥವಾ ರುಮಾಲನ್ನು ತಲೆಗೆ ಧರಿಸಿ ಕೈಯಲ್ಲಿ ಕೊಡೆ ಹೊಂದಿರುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಮೇಲುಕೋಟೆಯಲ್ಲಿ ತಯಾರಾಗುವ ದೊಡ್ಡ ಅಂಚಿನ ರೇಷ್ಮೆ ಪಂಚೆಯು ಪ್ರಸಿದ್ಧವಾಗಿತ್ತು. ಹೊಲ ಗದ್ದೆಗಳಲ್ಲಿ ಕೆಲಸ ಮಾಡುವವರು ಪಟಾಪಟ್ಟಿ ಚಡ್ಡಿ ಮತ್ತು ಮಂದವಾದ ಬಟ್ಟೆಯಿಂದ ಹೊಲಿಸಿರುವ ಅರ್ಧ ತೋಳಿನ ಅಂಗಿಯನ್ನು ಧರಿಸುತ್ತಾರೆ. ಗಂಡು ಮಕ್ಕಳು ಸಾಮಾನ್ಯವಾಗಿ ನಿಕ್ಕರ್ (ಚಡ್ಡಿ) ಅಥವಾ ಪೈಜಾಮ ಇಲ್ಲವೇ ಲುಂಗಿ ಮತ್ತು ಷರ್ಟನ್ನು ಧರಿಸುವರು. ಈಚೆಗೆ ತರುಣರು ಹಾಗೂ ನೌಕರಿಯಲ್ಲಿರುವ ಬಹುತೇಕ ಪುರುಷರಲ್ಲಿ ಪ್ಯಾಂಟ್ ಮತ್ತು ಬುಷ್ ಷರ್ಟ್ ಧರಿಸುವುದು ಕಾಣಬರುತ್ತದೆ. ಹೆಂಗಸರ ಪ್ರಧಾನ ಉಡುಪುಗಳೆಂದರೆ ಸೀರೆ ಮತ್ತು ಕುಪ್ಪಸ. ಮೊದಲಿಗೆ ಒಂಭತ್ತು ಗಜ ಉದ್ದದ ನೂಲಿನ ಸೀರೆಯನ್ನು ಕೆಲವರು ಒಳಕಚ್ಚೆ ಹಾಕಿ, ಕೆಲವರು ಮೇಲ್ಕಚ್ಚೆ ಹಾಕಿ ಹಾಗೂ ಶ್ರೀವೈಷ್ಣವ ಸ್ತ್ರೀಯರು ತಮ್ಮದೇ ಶೈಲಿಯಲ್ಲಿ ಉಡುವುದು ಸಾಮಾನ್ಯವಾಗಿದ್ದು, ಈಚೆಗೆ ಬಹುತೇಕ ಸ್ತ್ರೀಯರಲ್ಲಿ ಆರು ಗಜ ಉದ್ದದ ವಿವಿಧ ಬಗೆಯ ಸೀರೆಗಳನ್ನು ಒಳಲಂಗದ ಮೇಲೆ ಉಡುವುದು ರೂಢಿಯಲ್ಲಿದೆ. ಗ್ರಾಮೀಣ ಹೆಂಗಸರು ಐದು ಅಥವಾ ಆರು ಗಜದ ಹಸಿರು ಕಂಬಿಸೀರೆ, ಕೆಂಪಂಚಿನ ಸೀರೆ, ಕಪ್ಪಂಚಿನ ಸೀರೆ ಉಡುವುದು ಮೊದಲಿಗೆ ರೂಢಿಯಲ್ಲಿದ್ದಿತು. ಹೆಣ್ಣುಮಕ್ಕಳ ಸಾಮಾನ್ಯ ಉಡುಪೆಂದರೆ, ಲಂಗ ಅಥವಾ ದಾವಣಿ ಮತ್ತು ಕುಪ್ಪಸಗಳಾಗಿದ್ದು ಈಚೆಗೆ ಸ್ಕರ್ಟ್, ಚೂಡಿದಾರ್, ಸಲ್ವಾರ್–ಕಮೀಜ್ ಮೊದಲಾದವುಗಳನ್ನೂ ಧರಿಸುತ್ತಾರೆ. ಮದುವೆ–ಮುಂಜಿ ಮೊದಲಾದ ಸಮಾರಂಭಗಳಲ್ಲಿ ರೇಷ್ಮೆ ಸೀರೆಯನ್ನುಡುತ್ತಾರೆ. ನಾಗರಿಕತೆಯ ಪ್ರಭಾವದಿಂದ ಹೆಂಗಸರಲ್ಲಿ ವಾಯಿಲ್, ನೈಲಾನ್, ಪಾಲಿಯೆಸ್ಟರ್, ಜಾರ್ಜೆಟ್, ಟೆರಿಲೀನ್, ಶಿಫಾನ್ ಹಾಗೂ ಗಂಡಸರಲ್ಲಿ ಟೆರಿಕಾಟ್, ಟೆರಿಉಲ್ ಮೊದಲಾದ ನೂಲುಗಳಿಂದ ತಯಾರಿಸಿದ ಉಡುಪುಗಳನ್ನು ಧರಿಸುವುದು ಕಂಡುಬರುವುದಲ್ಲದೆ ಉಡುಪಿನ ಶೈಲಿಯಲ್ಲೂ ಬಹಳಷ್ಟು ಮಾರ್ಪಾಡನ್ನು ಕಾಣಬಹುದಾಗಿದೆ.

ಮುಸಲ್ಮಾನರಲ್ಲಿ ಗಂಡಸರು ಪೈಜಾಮ, ಷರ್ಟ್ ಅಥವಾ ಉದ್ದನೆಯ ನಿಲುವಂಗಿ (ಜುಬ್ಬ ಅಥವಾ ಶೇರವಾನಿ) ಹಾಗೂ ಟೋಪಿಯನ್ನು ಧರಿಸುವುದು ಸಾಂಪ್ರದಾಯಿಕ ಉಡುಪಾಗಿದೆ. ಸ್ತ್ರೀಯರು ಉದ್ದವಾದ ಹಾಗೂ ಸಡಿಲವಾದ ಪೈಜಾಮ ಅಥವಾ ಸೀರೆ ಮತ್ತು ಕುಪ್ಪಸಗಳನ್ನು ಧರಿಸಿ ಹೊರಗೆ ಹೋಗುವಾಗ ತಲೆಯಿಂದ ಪಾದದವರೆಗೂ ಬುರ್ಖಾ ಧರಿಸುತ್ತಾರೆ.

ಕ್ರೈಸ್ತರಲ್ಲಿ ವಿಶೇಷ ಸಂದರ್ಭಗಳಿಗೆ ಹೊಂದುವ ವಿನ್ಯಾಸದ ಉಡುಪುಗಳನ್ನು ಧರಿಸುವುದು ಕಂಡುಬರುತ್ತದೆ. ವಿವಾಹ ಸಂದರ್ಭದಲ್ಲಿ ಕನ್ಯೆಯನ್ನು ಬಿಳಿಯ ಉದ್ದನೆಯ ಸ್ಕರ್ಟ್ ಅಥವಾ ಸೀರೆಯಿಂದ ಶೃಂಗರಿಸುವುದು ಅವರ ಸಂಪ್ರದಾಯವಾಗಿದೆ. ಚರ್ಚ್‌ನಲ್ಲಿ ಪ್ರಾರ್ಥನೆ ಮಾಡುವಾಗ ಸೆರಗನ್ನು ತಲೆಯ ಮೇಲೆ ಹೊದ್ದುಕೊಳ್ಳುವುದು ಕ್ರೈಸ್ತ ಮಹಿಳೆಯರಲ್ಲಿ ರೂಢಿಯಲ್ಲಿದೆ.

**ಗೃಹೋಪಕರಣಗಳು:** ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಕುಳಿತುಕೊಳ್ಳುವುದಕ್ಕೆ ಕಡ್ಡಿಚಾಪೆ, ಈಚಲುಚಾಪೆ, ಜಮಖಾನ, ಕಂಬಳಿ ಮೊದಲಾದವುಗಳನ್ನು ಬಳಸುತ್ತಿದ್ದು, ಇಂದಿಗೂ ಅವು ಹಲವಾರು ಕಡೆಗಳಲ್ಲಿ ಕಂಡುಬರುತ್ತವೆ. ಮೊದಲಿಗೆ ಹೆಚ್ಚಾಗಿ ಪಟ್ಟಣ ಪ್ರದೇಶಗಳಲ್ಲಿ ಅದರಲ್ಲೂ ಮಧ್ಯಮವರ್ಗದ ಹಾಗೂ ಶ್ರೀಮಂತರ ಮನೆಗಳಲ್ಲಿ

ಮರದಿಂದ ತಯಾರಿಸಿದ ಮಣೆ, ಕುರ್ಚಿ, ಬೆಂಚು, ಮೇಜು, ಮೂರು ಕಾಲಿನ ಸ್ಟೂಲ್ ಮೊದಲಾದ ಪೀಠೋಪಕರಣಗಳು ಬಳಕೆಯಲ್ಲಿದ್ದು, ಅಲ್ಮೆರಾ ಮೊದಲಾದವುಗಳು ಅತಿವಿರಳವಾಗಿದ್ದವು. ಆದರೆ ನಾಗರಿಕತೆಯ ಪ್ರಭಾವದಿಂದ, ಅದರಲ್ಲೂ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜನರ ಆರ್ಥಿಕ ಪರಿಸ್ಥಿತಿ ಮತ್ತು ಅಭಿರುಚಿಗಳಿಗೆ ತಕ್ಕಂತೆ ಕಬ್ಬಿಣ, ಬೆತ್ತ ಅಥವಾ ಮರದ ವಿವಿಧ ಬಗೆಯ ಪೀಠೋಪಕರಣಗಳ ಬಳಕೆಯು ಕಂಡುಬರುವುದಲ್ಲದೆ, ಸೋಫಾಸೆಟ್, ಊಟದ ಕುರ್ಚಿ-ಮೇಜು, ದಿವಾನ್, ಮಂಚ ಮೊದಲಾದ ಆಧುನಿಕ ಪೀಠೋಪಕರಣಗಳನ್ನೂ ಕಾಣಬಹುದಾಗಿದೆ. ಶ್ರೀಮಂತರ ಮನೆಗಳಲ್ಲಿ ತಮ್ಮ ಅಭಿರುಚಿಗೆ ತಕ್ಕಂತೆ ಕೆಲವು ಪೀಠೋಪಕರಣಗಳು ಕೆತ್ತನೆಯ ಕೆಲಸದಿಂದ ಕೂಡಿರುವುದೂ ಉಂಟು.

ನಾಗರಿಕತೆಯ ಪ್ರಭಾವದಿಂದ ನೀರು ತುಂಬಿಡಲು ಹಾಗೂ ಅಡಿಗೆ ಮಾಡಲು ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ಮನೆಗಳಲ್ಲಿ ಬಳಕೆಗೆ ಬಂದಿದ್ದರೂ ಅಲ್ಯುಮಿನಿಯಂ, ಹಿತ್ತಾಳೆ ಹಾಗೂ ತಾಮ್ರದ ಪಾತ್ರೆಗಳೂ ಕೆಲವರಲ್ಲಿ ಬಳಕೆಯಲ್ಲಿವೆ. ಗ್ರಾಮಾಂತರ ಪ್ರದೇಶಗಳ ಬಡವರ ಮನೆಗಳಲ್ಲಿ (ಮಣ್ಣಿನ) ಮಡಕೆ ಮತ್ತು ಅಲ್ಯುಮಿನಿಯಂ ಪಾತ್ರೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಹಲವು ಮನೆಗಳಲ್ಲಿ ನೀರಿಗಾಗಿ ಪ್ಲಾಸ್ಟಿಕ್‌ನ ಕೊಡ, ಬಕೀಟು, ಡಬ್ಬಗಳು ಬಳಕೆಯಲ್ಲಿವೆ. ಅಡಿಗೆ ತಯಾರಿಸಲು ಮೊದಲಿಗೆ ಸೌದೆ ಅಥವಾ ಇದ್ದಿಲನ್ನೇ ಹೆಚ್ಚಾಗಿ ಬಳಸುತ್ತಿದ್ದು, ಈಚಿನ ದಿನಗಳಲ್ಲಿ ಸೀಮೆಎಣ್ಣೆ, ವಿದ್ಯುತ್, ಅಡಿಗೆ ಅನಿಲ ಮೊದಲಾದವನ್ನು ಬಳಸುವುದೂ ರೂಢಿಯಲ್ಲಿದೆ. ಸೌರಶಕ್ತಿ ಹಾಗೂ ಜೈವಿಕ ಅನಿಲಗಳ ಬಳಕೆಯು ಕೆಲವೆಡೆ ಕಾಣಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಮಟ್ಟಿಗೆ ಸೌದೆ ಒಲೆ ಹಾಗೂ ಸೀಮೆಎಣ್ಣೆ ಬಳಕೆಯಲ್ಲಿವೆ.

**ಆಭರಣಗಳು :** ಬಹಳ ಹಿಂದಿನಿಂದ ಆಭರಣಗಳ ಮೇಲಿನ ಮೋಹವು ಸಾರ್ವತ್ರಿಕವಾಗಿದೆ. ಆಭರಣಗಳ ಬಳಕೆಯು ಬಹಳಮಟ್ಟಿಗೆ ಜನರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ನಾಗರಿಕತೆಯ ಪ್ರಭಾವದಿಂದ ಆಭರಣಗಳ ಶೈಲಿಯಲ್ಲಿಯೂ ಕೆಲವು ಮಾರ್ಪಾಡುಗಳನ್ನು ಕಾಣಬಹುದಾಗಿದೆ. ಆಭರಣಗಳನ್ನು ಕೇವಲ ಅಲಂಕಾರಕ್ಕಲ್ಲದೆ, ನಂಬಿಕೆ ಹಾಗೂ ಸಂಪ್ರದಾಯಗಳ ಸಂಬಂಧವಾಗಿಯೂ ಧರಿಸುವುದುಂಟು. ಮಕ್ಕಳಿಗೆ ಕಿವಿ ಚುಚ್ಚುವುದು ಒಂದು ಸಂಪ್ರದಾಯವಾಗಿದ್ದು ಒಂದು ಹರಳಿನ ಬೊಟ್ಟು, ಸ್ಟಾರ್, ಮುರುವು ಅಥವಾ ಲೋಲಾಕು ಮಕ್ಕಳ ಕಿವಿಯ ಆಭರಣಗಳಾಗಿವೆ. ಸರ, ಕಂಠೀ ಹಾರ (ಚೈನು), ಉಂಗುರ, ಕೈಕಡಗ, ಬೆಳ್ಳಿಯ ಕಾಲಂದಿಗೆ ಮತ್ತು ಕಾಲು ಚೈನು, ಸೊಂಟಕ್ಕೆ ಬೆಳ್ಳಿಯ ಉಡುದಾರ (ಗಂಡುಮಕ್ಕಳಿಗೆ) ಮೊದಲಾದವು ಮಕ್ಕಳ ಆಭರಣಗಳಾಗಿವೆ. ಸ್ತ್ರೀಯರು ತಮ್ಮ ಸೌಭಾಗ್ಯದ ಸಂಕೇತವಾಗಿ ಗಾಜಿನ ಬಳೆ ತೊಡುತ್ತಾರೆ. ಇದಕ್ಕಾಗಿಯೇ ಮದುವೆ ಶಾಸ್ತ್ರದಲ್ಲಿ ವಧುವಿಗೆ ಬಳೆ ತೊಡಿಸಿ ಮುತ್ತೈದೆಯರಿಗೆ ಬಳೆ ಕೊಡುವ ಸಂಪ್ರದಾಯವಿದೆ. ಕೈಗೆ ಮುರಿ, ಸಣ್ಣ ಕಪ್ಪ ಹಾಗೂ ಕಡಗ, ತೋಳಿಗೆ ಬಂದಿ ಮತ್ತು ವಂಕಿ, ಬೆರಳಿಗೆ ಹಸ್ತಾಳ ಪಟ್ಟಿ ಮತ್ತು ಉಂಗುರ, ಕೊರಳಿಗೆ ಗುಂಡಿನಸರ, ಅಡ್ಡಿಕೆ, ಚಿಂತಾಕು, ಕಾಸಿನ ಸರ, ಜೋಮಾಲೆಸರ, ಅವಲಕ್ಕಿಸರ ಹಾಗೂ ಕಂಠಿಸರ, ಕಿವಿಗೆ ಮುರುವು, ಹರಳಿನ ಓಲೆ, ಬುಗಡಿ, ಕೆನ್ನೆಸರ ಮತ್ತು ಝುಮುಕಿ, ಮೂಗಿಗೆ ನತ್ತು, ಕೆಂಪು ಹರಳಿನ ಬೊಟ್ಟು, ವಜ್ರದ ಬೊಟ್ಟು ಮತ್ತು ಬುಲಾಕು, ತಲೆಗೆ ನಾಗರು ಮತ್ತು ಬಂಗಾರದ ಹೂ, ಸೊಂಟಕ್ಕೆ ಗೆಜ್ಜೆ ಡಾಬು ಅಥವಾ ವಂಕಿಡಾಬು, ಕಾಲಿಗೆ ಕಾಲ್ಮುರಿ, ಕಾಲಂದಿಗೆ ಹಾಗೂ ಚೈನು ಮತ್ತು ವಿವಾಹಿತ ಸ್ತ್ರೀಯರಾದರೆ ಕೊರಳಿಗೆ ಮಾಂಗಲ್ಯ ಮತ್ತು ಬೆಳ್ಳಿಯ ಕಾಲುಂಗುರಗಳು ಕೆಲವು ಸಾಂಪ್ರದಾಯಿಕ ಆಭರಣಗಳಾಗಿವೆ. ಚಿನ್ನದ ಸರವನ್ನು ಧರಿಸುವುದೂ ಉಂಟು. ಪುರುಷರಲ್ಲಿ ಆಭರಣಗಳ ಬಳಕೆ ವಿರಳವೆಂದೇ ಹೇಳಬಹುದು. ಉಂಗುರ, ಕೈಗೆ ಚಿನ್ನ ಅಥವಾ ಬೆಳ್ಳಿಯ ಕಪ್ಪ (ಈಚೆಗೆ ಬಂಗಾರದ ಬ್ರೇಸ್‌ಲೆಟ್), ಕೊರಳಿಗೆ ಕಂಠೀ ಹಾರ (ಚೈನ್), ಸೊಂಟಕ್ಕೆ ಬೆಳ್ಳಿಯ ಉಡುದಾರ ಮತ್ತೆ ಕೆಲವರು ಕಿವಿಗೆ ಮುರುವು ಅಥವಾ ಕೆಂಪು ಕಲ್ಲಿನ ಒಂಟಿ (ಅತಕಡಕು) ಇವು ಪುರುಷರ ಕೆಲವು ಸಾಂಪ್ರದಾಯಿಕ

ಆಭರಣಗಳಾಗಿವೆ. ಈಚೆಗೆ ನಾನಾ ಬಗೆಯ, ವಿವಿಧ ವಿನ್ಯಾಸಗಳ ಆಭರಣಗಳು ಹಾಗೂ ಚಿನ್ನದ ಲೇಪನ ಮಾಡಿದ ಒಡವೆಗಳೂ ಬಳಕೆಯಲ್ಲಿವೆ.

**ಹಬ್ಬಗಳು:** ಹಿಂದೂಗಳಲ್ಲಿ ವರ್ಷದುದ್ದಕ್ಕೂ ಹಬ್ಬಗಳನ್ನಾಚರಿಸುವ ಹಾಗೂ ವ್ರತ-ಉಪವಾಸ ಕೈಗೊಳ್ಳುವ ಅನೇಕ ಪರ್ವ ದಿನಗಳಿವೆ. ಹಿಂದೂಗಳಲ್ಲಿ ವಿವಿಧ ಪಂಥಗಳಿಗೆ ಬೇರೆ ಬೇರೆ ಹಬ್ಬಗಳೂ ಇದ್ದು ಬ್ರಾಹ್ಮಣರಿಗೆ ಬೇರೆಯವರಿಗಿಂತ ಹೆಚ್ಚು ಹಬ್ಬಗಳು ಇವೆ. ಇಡೀ ವರ್ಷವನ್ನು ಉತ್ತರಾಯಣ ಮತ್ತು ದಕ್ಷಿಣಾಯಣ ಎಂಬ ಎರಡು ಸಮಭಾಗಗಳನ್ನಾಗಿ ವಿಭಾಗ ಮಾಡಲಾಗಿದೆ. ಜಿಲ್ಲೆಯಲ್ಲಿ ಆಚರಿಸುವ ಕೆಲವು ಪ್ರಮುಖ ಹಬ್ಬಗಳನ್ನು ಈ ಮುಂದೆ ಹಿಂದೂ ಪಂಚಾಂಗದ ತಿಥಿಗಳ ಅನುಕ್ರಮದಂತೆ ನಿರೂಪಿಸಿದೆ: ಯುಗಾದಿ ಶಾಲಿವಾಹನ ಶಕದ ಎಣಿಕೆ ಆರಂಭವಾಗುವ ಚೈತ್ರ ಮಾಸದ ಪ್ರಥಮ ದಿನ. ಅಂದು ಮುಂಜಾನೆ ಮನೆಯವರೆಲ್ಲರೂ ಅಭ್ಯಂಜನ ಮಾಡುವರು. ಮನೆಯ ಬಾಗಿಲುಗಳಿಗೆ ಮಾವು-ಬೇವಿನ ತಳಿರು ತೋರಣಗಳನ್ನು ಕಟ್ಟಿ ಮುಂಭಾಗವನ್ನು ರಂಗವಲ್ಲಿಯಿಂದ ಅಲಂಕರಿಸುತ್ತಾರೆ. ಈ ದಿನವನ್ನು ವರ್ಷದ ಅತ್ಯಂತ ಶುಭದಿನವೆಂದು ಭಾವಿಸಿ ಭಕ್ತಿಪೂರ್ವಕವಾಗಿ ಮನೆಯಲ್ಲಿ ದೇವರಿಗೆ ಪೂಜೆ ಸಲ್ಲಿಸುವದೇ ಅಲ್ಲದೆ ದೇವಸ್ಥಾನಗಳಿಗೆ ಹೋಗಿಬರುವ ಸಂಪ್ರದಾಯವೂ ಇದೆ. ಆ ದಿನ ಬೇವು-ಬೆಲ್ಲವನ್ನು ಸ್ವೀಕರಿಸಿ, ಹೋಳಿಗೆಯಂತಹ ವಿಶೇಷ ಭಕ್ಷ್ಯ ಭೋಜ್ಯಗಳನ್ನೂ ಮಾಡುತ್ತಾರೆ. ಹೊಸ ಉಡುಪನ್ನು ಧರಿಸುವುದು ಹಾಗೂ ಹೊಸ ಪಂಚಾಂಗವನ್ನು ಓದುವುದೂ ಈ ಹಬ್ಬದ ವಿಶೇಷವಾಗಿದೆ. ಯುಗಾದಿ ಮಾರನೇ ದಿನವನ್ನು ಮಾಂಸಾಹಾರಿಗಳು ವರ್ಷತೊಡಕು ಎಂದು ಆಚರಿಸಿ, ಅಂದು ತಪ್ಪದೇ ಮಾಂಸಾಹಾರ ಮಾಡುತ್ತಾರೆ.

ಚೈತ್ರಮಾಸದ ಶುಕ್ಲ ಪಕ್ಷದ ನವಮಿಯಂದು ವಿಷ್ಣುವಿನ ಏಳನೆಯ ಅವತಾರವಾದ ರಾಮನ ಹುಟ್ಟುಹಬ್ಬವಾಗಿ ರಾಮನವಮಿಯನ್ನು ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಸಂಗೀತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಲವಾರು ದಿನಗಳ ಕಾಲ ಸಂಘ ಸಂಸ್ಥೆಗಳು ನಡೆಸುತ್ತವೆ.

ವೈಶಾಖ ಶುದ್ಧ ತೃತೀಯವನ್ನು ಅಕ್ಷಯ ತೃತೀಯ ಎಂದು ಕರೆಯುತ್ತಾರೆ. ಈ ದಿನವನ್ನು ಸಂವತ್ಸರದ ಸಮಸ್ತ ದಿನಗಳಲ್ಲಿ ಅತೀವ ಭಾಗ್ಯದಾಯಕ ದಿನವೆಂದು ಪರಿಗಣಿಸುತ್ತಾರೆ. ಅನೇಕರು ತಮ್ಮ ನೂತನ ಕೆಲಸ ಕಾರ್ಯಗಳನ್ನು ಈ ದಿನ ಆರಂಭಿಸುವರು. ಈ ದಿನವೇ ಬಸವಣ್ಣನವರ ಜನ್ಮ ದಿನ. ಇದನ್ನು ಬಸವ ಜಯಂತಿ ಎಂದೂ ಆಚರಿಸುತ್ತಾರೆ. ಈ ದಿನವು ಲಿಂಗಾಯತರಿಗೆ ಪವಿತ್ರವಾಗಿದ್ದು, ಆ ಸಂದರ್ಭದಲ್ಲಿ ಅನೇಕ ಸಂಘ-ಸಂಸ್ಥೆಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತವೆ. ವೈಶಾಖಮಾಸದ ಶುದ್ಧ ಪಂಚಮಿಯ ದಿನ ಶಂಕರಾಚಾರ್ಯರ ಅನುಯಾಯಿಗಳು ಶಂಕರ ಜಯಂತಿಯನ್ನು ಆಚರಿಸುತ್ತಾರೆ, ಶಂಕರರ ತತ್ವ ಬೋಧನೆಗಳ ಮೇಲೆ ಉಪನ್ಯಾಸಗಳನ್ನೂ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಲವಾರು ಸಂಘ ಸಂಸ್ಥೆಗಳು ಏರ್ಪಡಿಸುತ್ತವೆ. ಇದೇ ಮಾಸದ ಶುದ್ಧ ತ್ರಯೋದಶಿಯಂದು ಕೆಲವು ಬ್ರಾಹ್ಮಣ ಪಂಗಡದವರು ವಿಷ್ಣುವಿನ ನಾಲ್ಕನೇ ಅವತಾರವಾದ ನರಸಿಂಹದೇವರ ಪುಣ್ಯದಿನವೆಂದು ನರಸಿಂಹ ಜಯಂತಿಯನ್ನು ಆಚರಿಸುತ್ತಾರೆ. ಆಷಾಢಮಾಸದ ಶುಕ್ಲಪಕ್ಷದ ಹನ್ನೊಂದನೆಯ ದಿನ ಆಷಾಢ ಏಕಾದಶಿ ವ್ರತವನ್ನು ಕೆಲವರು ಉಪವಾಸವಿದ್ದು ಆಚರಿಸುತ್ತಾರೆ.

ಶ್ರಾವಣಮಾಸದಲ್ಲಿ ಪ್ರತೀ ಸೋಮವಾರ ದೇವಾಲಯಗಳಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲುವುದಲ್ಲದೆ, ಕೆಲವರು ಒಪ್ಪೊತ್ತಿನ ಉಪವಾಸವನ್ನು ಮಾಡುವ ಸಂಪ್ರದಾಯವೂ ಇದೆ. ಈ ಮಾಸದಲ್ಲಿ ಪ್ರತೀ ಮಂಗಳವಾರ ಹೊಸದಾಗಿ ಲಗ್ನವಾದ ಹೆಣ್ಣುಮಕ್ಕಳು ತಮ್ಮ ಪಾತಿವ್ರತ್ಯ ಹಾಗೂ ಸುಮಂಗಲಿ ಸೌಭಾಗ್ಯಕ್ಕಾಗಿ ಮಂಗಳಗೌರಿ ವ್ರತವನ್ನು ಐದು ವರ್ಷಗಳವರೆಗೆ ಆಚರಿಸುವ ಸಂಪ್ರದಾಯ ಕೆಲವರಲ್ಲಿದೆ. ಶ್ರಾವಣ ಮಾಸದ ಶುದ್ಧ ಪಂಚಮಿಯ ದಿನ ನಾಗರ ಪಂಚಮಿಯನ್ನು ಎಲ್ಲಾ ಹಿಂದೂಗಳೂ ಆಚರಿಸುತ್ತಾರೆ. ಶ್ರಾವಣ ಪೂರ್ಣಿಮೆಗೆ ಕೆಲವರಲ್ಲಿ ಜನಿವಾರ ಬದಲಾಯಿಸುವುದೂ (ಉಪಾಕರ್ಮ) ರಕ್ಷಾಬಂಧನವನ್ನು ಆಚರಿಸುವುದೂ ಉಂಟು. ಶ್ರಾವಣ ಬಹುಳದ

ಎಂಟನೇ ದಿನ ಕೃಷ್ಣ ಜನ್ಮಾಷ್ಟಮಿಯನ್ನು ಕೃಷ್ಣನು ಹುಟ್ಟಿದ ಸಮಯವಾದ ಮಧ್ಯರಾತ್ರಿ ವೇಳೆಯಲ್ಲಿ ಕೃಷ್ಣನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಅನೇಕರು ಪೂಜೆಯವರೆವಿಗೆ ಮತ್ತೆ ಕೆಲವರು ಇಡೀ ದಿನ ಉಪವಾಸ ಕೈಗೊಳ್ಳುವುದುಂಟು. ಆ ಸಂದರ್ಭದಲ್ಲಿ ಭಜನೆ ಹಾಗೂ ಕೀರ್ತನೆಗಳನ್ನು ಹಾಡುತ್ತಾರೆ.

ಭಾದ್ರಪದ ಮಾಸದ ಶುಕ್ಲಪಕ್ಷದ ಗಣೇಶ ಚತುರ್ಥಿಯು ಒಂದು ಜನಪ್ರಿಯ ಹಬ್ಬವಾಗಿದೆ. ಅಂದು ಮಣ್ಣಿನಿಂದ ಮಾಡಿದ ಗಣಪತಿಯನ್ನು ಪ್ರತಿಷ್ಠಾಪಿಸಿ, ವಿವಿಧ ರೀತಿಯಲ್ಲಿ ಅಲಂಕರಿಸಿ, ಭಕ್ತಿ ಪೂರಕವಾಗಿ ಪೂಜಿಸಿ, ಭಕ್ಷ್ಯ ಭೋಜ್ಯಗಳನ್ನು ನೈವೇದ್ಯ ಮಾಡಿ ಧೂಪ-ದೀಪಗಳನ್ನು ಬೆಳಗುತ್ತಾರೆ. ಈ ಪರ್ವದಲ್ಲಿ ಗಣಪತಿ ಪೂಜೆಯನ್ನು ಒಂದು ದಿನದಿಂದ ಸುಮಾರು ೧೫ ದಿನಗಳವರೆಗೆ ಅನೇಕ ಸಂಘ ಸಂಸ್ಥೆಗಳು ಆಚರಿಸಿ ಸಂಗೀತ, ಹರಿಕಥೆ, ಪ್ರವಚನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ಗಣೇಶನ ಹಬ್ಬದ ಮರುದಿನ ಋಷಿ ಪಂಚಮಿಯನ್ನು ಕೆಲವರು ಆಚರಿಸುವುದುಂಟು.

ಮಹಾಲಯ ಅಮಾವಸ್ಯೆಯನ್ನು ಹಿರಿಯರ ಹಬ್ಬವೆಂದು ಬಹುಮುಖ್ಯವಾಗಿ ಆಚರಿಸುತ್ತಾರೆ. ವೈದಿಕ ಧರ್ಮವನ್ನಾಚರಿಸುವವರು ತಮ್ಮ ಪೂರ್ವಜರಿಗೆ ತರ್ಪಣ ನೀಡುತ್ತಾರೆ. ಈ ಹಬ್ಬಕ್ಕೆ ಶೂದ್ರಾಪಿ ಜನಗಳು ಬಹುಮಟ್ಟಿಗೆ ಎಲ್ಲರೂ ಹೊಸಬಟ್ಟೆ ಹೊಲಿಸಿಕೊಳ್ಳುತ್ತಾರೆ. ಹಬ್ಬದಂದು ಮಾಮೂಲಿನಂತೆ ನೆಲ-ಮನೆ ಸಾರಿಸಿ, ಮಡಿ ಮಾಡುತ್ತಾರೆ. ಅಂದು ಒಳಕೋಣೆಯಲ್ಲಿ ದೇವರ ಪ್ರತೀಕವಾಗಿ ಒಂದೆಡೆ ಬಿಂದಿಗೆಯಲ್ಲಿ ಹೊಸ ನೀರು ತುಂಬಿ ಅದರ ಮೇಲೆ ಹೊಸ ಸೀರೆ, ರವಿಕೆ ಇಡುತ್ತಾರೆ. ಅದರ ಮುಂದೆ ಬಾಳೆಎಲೆಯ ಮೇಲೆ ಅನ್ನ, ಸಾರು, ಮುದ್ದೆ ಇತ್ಯಾದಿ ವಿಶೇಷವಾಗಿ ಮಾಡಿದ ಎಲ್ಲಾ ಅಡುಗೆಯನ್ನೂ ಎಡೆ ಇಡುತ್ತಾರೆ. ಮನೆಯ ಪಡಸಾಲೆಯಲ್ಲಿ ಗತಿಸಿದ ಹಿರಿಯರ ಪ್ರೀತ್ಯರ್ಥ ಹೊಸ ಪಂಚೆಯ ಮೇಲೆ ಅಕ್ಕಿ ಸುರುವಿ ಅದರ ಮೇಲೆ ಕಳಸ ಇಟ್ಟು, ಅದರ ಮುಂದೆ ನಾಲ್ಕಾರು ಎಲೆಗಳ ಮೇಲೆ ಮಾಡಿದ ಅಡುಗೆಯ ಎಡೆ ಇಡುತ್ತಾರೆ. ಮಡಿವಾಳಿಯು ಈ ಹಬ್ಬಕ್ಕಾಗಿ ಮಡಿ ಮಾಡಿಕೊಟ್ಟ ಸೀರೆ, ಪಂಚೆ, ಹೊದಿಕೆ (ರಗ್ಗು) ಇತ್ಯಾದಿಗಳನ್ನೂ ಇಡಲಾಗುತ್ತದೆ. ಹಿರಿಯರಿಗೆ ಪ್ರಿಯವಾದ ಎಲ್ಲ ಬಗೆಯ ಅಡುಗೆ, ಹಣ್ಣು-ಹಂಪಲನ್ನು ಎಡೆ ಇಟ್ಟು ಪೂಜೆ ಮಾಡುತ್ತಾರೆ. ಮಾಂಸದ ಎಡೆ ಮಾಡಲೇಬೇಕಾದ ದಾಸಯ್ಯಗಳು, ಹರಿಜನರು ಮೊದಲಾದವರು ಆಯುಧಪೂಜೆಯಂದು ಈ ಎರಡೂ ಹಬ್ಬಗಳನ್ನು ಒಟ್ಟಿಗೇ ಮಾಡುತ್ತಾರೆ.

ಅಶ್ವಯುಜದಲ್ಲಿ ಬರುವ ನವರಾತ್ರಿ ಅಥವಾ ದಸರಾ ಒಂದು ವಿಶೇಷ ಹಬ್ಬವಾಗಿದ್ದು, ಈಚೆಗೆ ಅದನ್ನು ನಾಡಹಬ್ಬವೆಂದೂ ಕರೆಯುವುದುಂಟು. ಆಶ್ವಯುಜ ಶುದ್ಧ ಮೊದಲನೇ ದಿನ ನವರಾತ್ರಿ ಪಾಡ್ಯವಾಗಿದ್ದು ಅನೇಕರು ಅಂದು ಕಳಶವನ್ನು ಪ್ರತಿಷ್ಠಾಪಿಸಿ ನವರಾತ್ರಿ ಕೊನೆಯವರೆಗೂ ಅದಕ್ಕೆ ಪೂಜೆ ಸಲ್ಲಿಸುವರು. ಏಳನೆಯ ದಿನ (ಸಪ್ತಮಿ) ಸರಸ್ವತಿಯನ್ನು, ಎಂಟನೆಯ ದಿನ (ಅಷ್ಟಮಿ) ಶಕ್ತಿ ದೇವತೆಯಾದ ದುರ್ಗಾದೇವಿಯನ್ನು, ಒಂಭತ್ತನೆಯ ದಿನ (ಮಹಾನವಮಿ) ಆಯುಧ ಪೂಜೆಯನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಯಂತ್ರೋಪಕರಣಗಳನ್ನು ಹಾಗೂ ವಿವಿಧ ವೃತ್ತಿಗೆ ಸಂಬಂಧಿಸಿದ ಉಪಕರಣಗಳನ್ನು ಪೂಜಿಸುವುದೂ ರೂಢಿಯಲ್ಲಿದೆ. ಹತ್ತನೆಯ ದಿನ ವಿಜಯದಶಮಿಯನ್ನು ಬನ್ನಿಹಬ್ಬವೆಂದೂ ಅಚರಿಸುತ್ತಾರೆ. ದಸರಾ ಹಬ್ಬದ ವಿಶೇಷವಾಗಿ ಕೆಲವರು ಮನೆಗಳಲ್ಲಿ ಗೊಂಬೆ ಕೂರಿಸುತ್ತಾರೆ.

ದೀಪಾವಳಿಯು ಬೆಳಕಿನ ಹಬ್ಬ. ಈ ಹಬ್ಬವು ಆಶ್ವಯುಜ ಬಹುಳ ಹದಿಮೂರನೆಯ ದಿನ (ತ್ರಯೋದಶಿ) ಆರಂಭವಾಗಿ ಮೂರು ದಿನಗಳು ನಡೆಯುತ್ತದೆ. ತ್ರಯೋದಶಿಯನ್ನು ನೀರು ತುಂಬುವ ಹಬ್ಬವೆಂದು ಆಚರಿಸುತ್ತಾರೆ. ಚತುರ್ದಶಿಯ ದಿನ ಮನೆಯವರೆಲ್ಲರೂ ಅಭ್ಯಂಜನ ಮಾಡಿ, ದೇವರನ್ನು ಪೂಜಿಸಿ ಸಿಹಿಯೂಟವನ್ನು ಮಾಡುತ್ತಾರೆ. ಆ ದಿನವನ್ನು ನರಕಾಸುರನ ವಧೆಯ ದಿನವೆಂದು ಆಚರಿಸುತ್ತಾರೆ. ಅಮಾವಾಸ್ಯೆಯ ದಿನ ಸಂಜೆಯಲ್ಲಿ ನಗದು ಹಾಗೂ ಒಡವೆ ವಸ್ತುಗಳ ಸಮೇತ ಲಕ್ಷ್ಮಿಯನ್ನು ಪೂಜಿಸುತ್ತಾರೆ, ಕೆಲವರು ಕೇದಾರೇಶ್ವರ ವ್ರತವನ್ನೂ ಅಂದು

ಆಚರಿಸುವರು. ಆ ದಿನದಂದು ಬಲಿ ಚಕ್ರವರ್ತಿಯನ್ನು ಮನೆಗಳಲ್ಲಿ ಪೂಜಿಸಿ, ದೇವಸ್ಥಾನಗಳಿಗೆ ಹೋಗಿಬರುವ ಸಂಪ್ರದಾಯವೂ ಇದೆ. ಮದುವೆಯಾದ ಮೊದಲನೇ ವರ್ಷದಲ್ಲಿ ಹೆಣ್ಣುಮಕ್ಕಳು ತಮ್ಮ ಗಂಡನ ಜೊತೆ ತವರಿಗೆ ಬಂದು ಉಡುಗೊರೆಯನ್ನು ಸ್ವೀಕರಿಸುವುದೂ ಈ ಹಬ್ಬದ ಒಂದು ವಿಶೇಷವಾಗಿದೆ. ಮನೆಯನ್ನು ಸ್ವಚ್ಛಗೊಳಿಸಿ, ಹಸಿರುತೋರಣ ಹಾಗೂ ರಂಗವಲ್ಲಿಗಳಿಂದ ಅಲಂಕರಿಸುವುದೂ, ಮಕ್ಕಳು ಪಟಾಕಿಯನ್ನು ಸಿಡಿಸುವುದೂ ಈ ಹಬ್ಬದ ವೈಶಿಷ್ಟ್ಯವಾಗಿದೆ. ಕಾರ್ತಿಕ ಶುದ್ಧ ದ್ವಾದಶಿಯ ದಿನ ತುಳಸಿಯ ಲಗ್ನವೆಂದು ತುಳಸಿ ಪಬ್ಬವನ್ನು ಆಚರಿಸುವುದುಂಟು. ಅಂದು ತುಳಸಿಕಟ್ಟೆಯನ್ನು ಅಲಂಕರಿಸಿ ಸಂಜೆಗೆ ತುಳಸಿಯನ್ನು ಪೂಜಿಸುತ್ತಾರೆ. ಕಾರ್ತಿಕ ಶುದ್ಧ ಚತುರ್ದಶಿಯ ದಿನ ವೈಕುಂಠ ಚತುರ್ದಶಿಯನ್ನು ಆಚರಿಸುವುದು ಕೆಲವರಲ್ಲಿ ರೂಢಿಯಲ್ಲಿದೆ. ಮಾರ್ಗಶಿರ ಶುದ್ಧ ತ್ರಯೋದಶಿಯಂದು ಹನುಮ ಜಯಂತಿಯನ್ನು ಆಚರಿಸುವರು. ದೀಪಾವಳಿಯಲ್ಲಿ ಕೃಷಿಕರು ಲಕ್ಷ್ಮಿಗೆ ಸಮಾನವೆಂದು ಭಾವಿಸಲಾದ ತಿಪ್ಪೆಗುಂಡಿಯನ್ನು ಒಪ್ಪಮಾಡಿ, ಕಸದ ಗುಪ್ಪೆಯ ಬಳಿ ಹಣತೆ ಹಚ್ಚಿಟ್ಟು ಪೂಜೆ ಮಾಡುತ್ತಾರೆ. ಕಾರ್ತಿಕ ಮಾಸದ ಪೂರಾ ಮನೆಗಳ ಹೆಬ್ಬಾಗಿಲಲ್ಲಿ ಸಗಣಿ ಉಂಡೆಗೆ ಹುಚ್ಚೆಳ್ಳು ಹೂ ಮುಡಿಸಿ, ನಡುವೆ ಹಣತೆ ಹಚ್ಚಿಡುವುದು ಸಾಮಾನ್ಯವಾಗಿದೆ.

ಪ್ರತೀ ಜನವರಿ ಹದಿನಾಲ್ಕು ಅಥವಾ ಹದಿನೈದನೆಯ ದಿನಾಂಕಕ್ಕೆ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಇದು ಸುಗ್ಗಿಯ ಆಗಮನವನ್ನು ಸೂಚಿಸುವುದರಿಂದ, ಕೊಯ್ದು ತಂದ ಹೊಸ ಭತ್ತದ ಅಕ್ಕಿಯನ್ನು ಬೇಯಿಸಿ ಹುಗ್ಗಿ ಅಥವಾ ಪೊಂಗಲ್ ಮಾಡುತ್ತಾರೆ. ಈ ಹಬ್ಬದಲ್ಲಿ ಬಂಧುಮಿತ್ರರು ಪರಸ್ಪರ ಎಳ್ಳು-ಬೆಲ್ಲ ಕೊಟ್ಟು ಸ್ನೇಹ ಭಾವದಿಂದ ಸಿಹಿಯಾಗಿರೋಣ ಎಂದು ಅಭಿನಂದಿಸುತ್ತಾರೆ. ಕೃಷಿಕರು ತಮ್ಮ ದನ, ಎಮ್ಮೆಗಳ ಮೈತೊಳೆದು, ಕೊಂಬುಗಳಿಗೆ ಬಣ್ಣ ಹಚ್ಚಿ, ಸಂಜೆ ಊರ ಬಾಗಿಲಲ್ಲಿ ಕಿಚ್ಚು ಹಾಯಿಸುವುದು ಸಂಕ್ರಾಂತಮ್ಮನನ್ನು ಪೂಜಿಸುವುದು ಅಂದಿನ ವಿಶೇಷ ಆಚರಣೆಯಾಗಿದೆ. ಅಂದು ರಾಗಿ ಮೆದೆ ಮುಂದೆ ಕಣ ಮಾಡಿ, ಸಾರಿಸಿ, ವಿಭೂತಿ (ಬೂದಿ) ಬಿಟ್ಟು ಪೂಜೆ ಮಾಡಿ, ಮೆದೆಗೆ ಪತ್ರೆ (ಮಾವಿನಎಲೆ) ಇಡುತ್ತಾರೆ. ತಮ್ಮ ದನಗಳನ್ನು ಕಿಚ್ಚು ಹಾಯಿಸಿದ ಬಳಿಕ ಮನೆ ಬಾಗಿಲಲ್ಲಿ ನಿಲ್ಲಿಸಿ, ಪೂಜೆ ಮಾಡಿ, ಅವುಗಳ ಪಾದಕ್ಕೆ ಚಿನ್ನ ಮುಟ್ಟಿಸಿ, ಬಲಗಾಲು ಮುಂದಾಗಿ ಹೊಸ್ತಿಲು ದಾಟಿಸುತ್ತಾರೆ. ಅವರೆಕಾಯಿ ಹಾಗೂ ಗೆಣಸನ್ನು ಬೇಯಿಸಿ ತಿನ್ನುವುದು ಅಂದಿನ ಇನ್ನೊಂದು ವಿಶೇಷವಾಗಿದೆ. ಮಾಘ ಶುದ್ಧ ಸಪ್ತಮಿಯಂದು ರಥಸಪ್ತಮಿ. ಸೂರ್ಯನನ್ನು ಪೂಜಿಸುವುದು ಈ ಹಬ್ಬದ ವೈಶಿಷ್ಟ್ಯವಾಗಿದೆ. ಆ ಸಮಯಕ್ಕೆ ಸೂರ್ಯ ಹೊಸ ರಥ ಏರಿ ಉತ್ತರಾಯಣಕ್ಕೆ ಪಥ ಬದಲಿಸುತ್ತಾನೆ ಎಂಬ ಭಾವನೆ ಇದೆ.

ಮಾಘ ಮಾಸದ ಅಮಾವಸ್ಯೆಯ ಹಿಂದಿನ ದಿನ ಮಹಾಶಿವರಾತ್ರಿ. ಶಿವಭಕ್ತರಿಗೆ ಇದು ಮಹತ್ವ ಪೂರ್ಣವಾದ ಆಚರಣೆಯಾಗಿದೆ. ಆ ದಿನ ಉಪವಾಸವನ್ನು (ಕೆಲವರು ಇಡೀ ದಿನ ಮತ್ತು ಕೆಲವರು ರಾತ್ರಿ ಪೂಜೆಯಾಗುವವರೆಗೆ) ಕೈಗೊಂಡು ಶಿವನನ್ನು ಪೂಜಿಸುವುದಲ್ಲದೆ, ಶಿವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸಿ ಭಜನೆ, ಸಂಗೀತ ಮೊದಲಾದ ಕಾರ್ಯಕ್ರಮಗಳ ಮೂಲಕ ಜಾಗರಣೆ ಮಾಡುವ ಸಂಪ್ರದಾಯವಿದೆ.

ಫಾಲ್ಗುಣ ಮಾಸದ ಹುಣ್ಣಿಮೆಯಂದು ಆಚರಿಸುವ ಹೋಳಿ ಅಥವಾ ಕಾಮನ ಹಬ್ಬದಂದು ಕೆಲವೆಡೆ ಬಣ್ಣ ಹಚ್ಚಿಕೊಂಡು ನಲಿಯುವ, ಕಾಮನನ್ನು ಸುಡುವ ಆಚರಣೆ ಮಾಡುವುದುಂಟು.

**ಕೊಂತಿ (ಕುಂತಿ) ಪೂಜೆ:** ಕೊಂತಿ ಪೂಜೆಯು ಮಂಡ್ಯ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಪ್ರಚಲಿತದಲ್ಲಿದೆ. ಪಾಂಡವಪುರದ ಬಳಿಯ ಹಾರೋಹಳ್ಳಿಯು ಮಹಾಭಾರತದ ಕಾಲದಲ್ಲಿ ಏಕಚಕ್ರನಗರವಾಗಿತ್ತೆಂಬುದು ಅಲ್ಲಿಯ ಸ್ಥಳ ಪುರಾಣವಾಗಿದೆ. ಪಾಂಡವರು ಈ ಪ್ರದೇಶದಲ್ಲಿ ನೆಲೆಸಿದ್ದರೆಂಬ ಕಾರಣ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ರೈತಾಪಿ ಜನಗಳು ಕಾರ್ತಿಕಮಾಸದ ದೀಪಾವಳಿಯಿಂದ ಆರಂಭವಾಗಿ ಅನುಕೂಲಕ್ಕೆ ತಕ್ಕಂತೆ

ಕಾರ್ತಿಕ ಮಾಸದ ಕೊನೆಯವರೆಗೂ ತಮ್ಮ ಕೈಲಾದಷ್ಟು ದಿನಗಳ ಕಾಲ ಈ ಪೂಜೆಯನ್ನು ಆಚರಿಸುವುದು ರೂಢಿಯಲ್ಲಿದೆ. ಗುಂಡುಕಲ್ಲೊಂದನ್ನು ಕೊಂತಿ ಎಂದು ಪ್ರತಿಷ್ಠಾಪಿಸಿ ಅದಕ್ಕೆ ಪ್ರತಿನಿತ್ಯ ಸಂಜೆಯ ವೇಳೆಯಲ್ಲಿ ಪೂಜೆ ಸಲ್ಲಿಸುತ್ತಾರೆ. ಸಾಮಾನ್ಯವಾಗಿ ಕಡೆಯ ಕಾರ್ತಿಕ ಸೋಮವಾರ ಅಥವಾ ಸುಬ್ರಹ್ಮಣ್ಯ ಷಷ್ಠಿಯ ದಿನ ಕೊಂತಿಯನ್ನು ವಿಸರ್ಜಿಸುತ್ತಾರೆ. ಈ ಸಂದರ್ಭದಲ್ಲಿ ಹೆಂಗಸರು ಹಾಡು ಹೇಳುವುದು, ಹುಡುಗರು ಕೋಲಾಟ ಆಡುವುದು ಹಾಗೂ ವಿವಿಧ-ವೇಷಗಳನ್ನು ಹಾಕಿ ಪ್ರದರ್ಶಿಸುವುದುಂಟು. ಕೊಂತಿ ಪೂಜೆಯು ಕತ್ತಲೆಯನ್ನು ತೊರೆದು ಹೊಸ ಬದುಕನ್ನು ದಯಪಾಲಿಸುತ್ತದೆ ಎಂಬ ಭಾವನೆಯಿಂದ ಆಚರಿಸಲಾಗುತ್ತದೆ.

ಇದಲ್ಲದೆ, ಗ್ರಾಮಗಳಲ್ಲಿ ಗ್ರಾಮದೇವತಾ ಹಬ್ಬವನ್ನು ಆಚರಿಸುವುದೂ ರೂಢಿಯಲ್ಲಿದೆ. ಪಟ್ಟಲದಮ್ಮ, ಮುಳಕಟ್ಟಮ್ಮ, ಮಾಯಮ್ಮ, ಮಾರಮ್ಮ, ಮದ್ದೂರಮ್ಮ, ಊರುಮಾರಮ್ಮ, ಕಾಳಮ್ಮ, ಕುಂದೂರಮ್ಮ, ಹುಲಿಕೆರೆಯಮ್ಮ, ಸಾಕಮ್ಮ, ಹುಚ್ಚಮ್ಮ, ಉಂತೂರಮ್ಮ, ಗುತ್ತಲು ದೇವಮ್ಮ, ಸೋಂಕಿನಮ್ಮ, ಹೊಂಬಾಳಮ್ಮ, ತೋಟದಮ್ಮ, ಚಾಮುಂಡಮ್ಮ, ಲಕ್ಕಿದೇವತಮ್ಮ, ತೊರೆಯಮ್ಮ ಮೊದಲಾದ ಗ್ರಾಮದೇವತೆಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಪ್ರತೀ ಮಾಸದ ಬಹುಳ ಚತುರ್ಥಿಯಂದು ಸಂಕಷ್ಟಹರ ಗಣಪತಿ ಪೂಜೆಯನ್ನೂ ಪ್ರತೀ ಹುಣ್ಣಿಮೆಯಂದು ಸತ್ಯನಾರಾಯಣ ವ್ರತವನ್ನೂ ಅನೇಕ ದೇವಾಲಯಗಳಲ್ಲಿ ಸಾಮೂಹಿಕವಾಗಿ ಆಚರಿಸುವುದು ರೂಢಿಗೆ ಬಂದಿದೆ. ಕೇರಳದ ಶಬರಿಮಲೆಯಲ್ಲಿನ ಅಯ್ಯಪ್ಪನಿಗೆ ವಿಧಿಬದ್ಧವಾದ ವ್ರತಾಚರಣೆಯೊಂದಿಗೆ ಮುಡಿ ಹೊತ್ತುಹೋಗುವ ಭಕ್ತರೂ ಜಿಲ್ಲೆಯಲ್ಲಿ ಡಿಸೆಂಬರ್-ಜನವರಿ ತಿಂಗಳಲ್ಲಿ ವಿಶೇಷವಾಗಿ ಕಾಣಬರುತ್ತಾರೆ.

ಕಾಶಿ ಮತ್ತು ರಾಮೇಶ್ವರದ ಯಾತ್ರೆಗಳನ್ನು ಕೈಗೊಳ್ಳುವುದು ಹಿಂದೂಗಳ ಪವಿತ್ರ ಧಾರ್ಮಿಕಾಚರಣೆಯಾಗಿದೆ. ಮೇಲುಕೋಟೆಯ ಚೆಲುವರಾಯ, ಶ್ರೀರಂಗಪಟ್ಟಣ ಹಾಗೂ ಬಿಳಿಗಿರಿರಂಗನ ಬೆಟ್ಟದ ರಂಗನಾಥ, ನಂಜನಗೂಡು ಶ್ರೀಕಂಠೇಶ್ವರ, ಮೈಸೂರಿನ ಚಾಮುಂಡೇಶ್ವರಿ, ಧರ್ಮಸ್ಥಳದ ಮಂಜುನಾಥೇಶ್ವರ, ಕೊಳ್ಳೇಗಾಲ ತಾಲೂಕಿನ ಮಲೆಮಹದೇಶ್ವರ, ತಿರುಪತಿ ವೆಂಕಟರಮಣ ಮೊದಲಾದುವು ಇಲ್ಲಿಯ ಹಿಂದೂಗಳ ಕೆಲವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ಜೈನರ ಹಬ್ಬಗಳು :** ಜೈನರು ಅನೇಕ ಹಿಂದೂ ಹಬ್ಬಗಳನ್ನು ತಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಚೈತ್ರ ಪ್ರತಿಪದೆಯ ಯುಗಾದಿಯನ್ನು ಆದಿ ತೀರ್ಥಂಕರನಾದ ವೃಷಭದೇವ ಅಥವಾ ಆದಿನಾಥನ ಮಗನಾದ ಭರತನ ವಿಜಯದಿನವೆಂದು ಆಚರಿಸುತ್ತಾರೆ. ಚೈತ್ರ ಶುದ್ಧ ತ್ರಯೋದಶಿಯಂದು ಮಹಾವೀರ ಜಯಂತಿಯನ್ನು ಆಚರಿಸುತ್ತಾರೆ. ವೈಶಾಖ ಶುದ್ಧ ಅಕ್ಷಯ ತೃತೀಯ ದಿನ ಶ್ರೇಯಸ್ ಅರಸನು ಆದಿನಾಥ ತೀರ್ಥಂಕರನಿಗೆ ದೀರ್ಘ ಉಪವಾಸದ ಪಾರಣೆಗೆ ಆಹಾರ ದಾನ ಮಾಡಿದ್ದರ ನೆನಪಿಗಾಗಿ ದಾನಗಳನ್ನು ಮಾಡುವರು. ಭಾದ್ರಪದದಲ್ಲಿ ಬರುವ ಗೌರಿ ಹಬ್ಬವನ್ನು ಹಿಂದೂಗಳಂತೆಯೇ ಇವರೂ ಆಚರಿಸುತ್ತಾರೆ. ಗೌರಿಯು ಹನ್ನೊಂದನೆಯ ತೀರ್ಥಂಕರನ ಯಕ್ಷಿಯೆಂದು ಜೈನರಿಗೆ ಪೂಜ್ಯಳು. ಜೈನಧರ್ಮೀಯರು ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ (೧೦ ದಿವಸಗಳು) ದಶಲಕ್ಷಣ ಪರ್ವಕಾಲವೆಂದು ಆಚರಿಸುತ್ತಾರೆ. ಆ ಅವಧಿಯು ಇವರಿಗೆ ಧಾರ್ಮಿಕ ಆಚರಣೆಯ ಮಹತ್ವದ ದಿವಸಗಳಾಗಿದ್ದು, ಇವರ ಮನೆಗಳಲ್ಲೂ, ಜಿನಮಂದಿರಗಳಲ್ಲೂ ವಿಶೇಷ ಪೂಜೆ, ಉಪನ್ಯಾಸಗಳು ನಡೆಯುತ್ತವೆ. ನವರಾತ್ರಿಯ ಅಷ್ಟಮಿಯನ್ನು ಜೀವದಯಾಷ್ಟಮಿ ಎಂದು ಕರೆದು ಉಪವಾಸ ಕೈಗೊಂಡು ಪ್ರಾಣಿಗಳಲ್ಲಿ ದಯೆ ಹಾಗೂ ಅಹಿಂಸೆಯ ಆಚರಣೆಯ ಪುರಾಣ ಕಥೆಗಳನ್ನು ಹೇಳುವರು. ಮಹಾನವಮಿಯು ಯಕ್ಷಿ ಪದ್ಮಾವತಿದೇವಿಗೆ ಮೀಸಲಾದ ಪೂಜಾದಿನ. ವಿಜಯದಶಮಿಯಂದು ಭರತನು ಸೀಮೋಲ್ಲಂಘನ ಮಾಡಿದ ನೆನಪಿಗಾಗಿ ಹಬ್ಬವನ್ನು ಆಚರಿಸಿ, ಬಡವರಿಗೆ ದಾನ-ಧರ್ಮ ಮಾಡುವರು.

ದೀಪಾವಳಿಯನ್ನು ಮಹಾವೀರನ ಮಹಾನಿರ್ವಾಣದ ದಿನವೆಂದು ಆಚರಿಸಿ ಲಕ್ಷ್ಮಿದೇವಿಯನ್ನು ಪೂಜಿಸುತ್ತಾರೆ. ಶಿವರಾತ್ರಿಯನ್ನು ಜಿನರಾತ್ರಿಯೆಂದು ಕರೆದು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲದೇ ಇನ್ನೂ ಅನೇಕ ಉಪವಾಸ ವ್ರತಗಳನ್ನು ಜೈನರು ಆಚರಿಸುವುದುಂಟು. ಇವರು ತಮ್ಮ ಹಬ್ಬಗಳಲ್ಲಿ ಉಪವಾಸ ಮತ್ತು ದಾನಧರ್ಮಗಳಿಗೆ ಮಹತ್ವ ನೀಡುವರು.

**ಮುಸಲ್ಮಾನರ ಹಬ್ಬಗಳು :** ಮುಸಲ್ಮಾನರ ಪ್ರಮುಖ ಹಬ್ಬಗಳೆಂದರೆ ಈದ್–ಉಲ್–ಫಿತರ್ ಅಥವಾ ರಂಜಾನ್ ತಿಂಗಳ ಕೊನೆಯ ದಿನ ಮತ್ತು ಜಿಲ್‌ಹಜ್ ತಿಂಗಳ ಹತ್ತನೆಯ ದಿನ ಬರುವ ಈದ್–ಉಲ್–ಜುಹಾ ಅಥವಾ ಬಕ್ರೀದ್. ರಂಜಾನ್ ತಿಂಗಳಲ್ಲಿ ಮುಸಲ್ಮಾನರು ಮುಂಜಾವಿಗೆ ಉಪವಾಸ ಪ್ರಾರಂಭಿಸಿ ಸಂಜೆಯ ನಂತರ ಊಟ ಮಾಡುತ್ತಾರೆ. ಈ ಹಬ್ಬಗಳಲ್ಲಿ ಇವರು ಈದ್ ಮೈದಾನಕ್ಕೆ ಹೋಗಿ ಸಾಮೂಹಿಕ ಪ್ರಾರ್ಥನೆಯನ್ನು ಮಾಡುತ್ತಾರೆ. ರಂಜಾನ್ ಹಬ್ಬದಲ್ಲಿ ಇವರು ಬಡಬಗ್ಗರಿಗೆ ದಾನಧರ್ಮಗಳನ್ನು ಮಾಡುವುದು ಮಹತ್ವದ್ದಾಗಿದೆ. ಶಾಬಾನ ತಿಂಗಳ ಹದಿನೈದನೆಯ ದಿವಸದಲ್ಲಿ ಬರುವ ಶಬ್–ಎ–ಬರಾತ್ (ಶಬ್ಬೇರಾತ್) ಹಬ್ಬವನ್ನು ಸಂಜೆಗೆ ಸಾಂಗಗೊಳಿಸುವರು ಮತ್ತು ಆ ಮಹತ್ವದ ಪುಣ್ಯ ದಿನದಲ್ಲಿ ಮುಸ್ಲಿಮರು ಮಸೀದಿಗಳಲ್ಲಿ ಇಡೀ ರಾತ್ರಿ ಪ್ರಾರ್ಥನೆ ಸಲ್ಲಿಸುವರು. ಪೈಗಂಬರರ ಜನ್ಮದಿನವಾದ ಈದೇಮೀಲಾದುನ್ನಬಿ (ಈದ್‌ಮಿಲಾದ್) ಹಾಗೂ ಮೊಹರಂ ಮುಸ್ಲಿಮರು ಆಚರಿಸುವ ಇತರ ಪ್ರಮುಖ ಹಬ್ಬಗಳಾಗಿವೆ. ಮೊಹರಂನಲ್ಲಿ ಹಿಂದೂಗಳೂ ಪಾಲ್ಗೊಳ್ಳುವುದುಂಟು.

**ಕ್ರೈಸ್ತರ ಹಬ್ಬಗಳು :** ಕ್ರೈಸ್ತರು ಜನವರಿ ಒಂದನೇ ತಾರೀಖನ್ನು ಹೊಸ ವರ್ಷದ ಆರಂಭದ ದಿನವೆಂದು ಆಚರಿಸುತ್ತಾರೆ. ಗುಡ್‌ಫ್ರೈಡೇ (ಶುಭ ಶುಕ್ರವಾರ), ಈಸ್ಟರ್‌ಸಂಡೇ (ಪುನರುತ್ಥಾನದ ದಿನ) ಹಾಗೂ ಸೆಪ್ಟೆಂಬರ್ ಎಂಟು (ಸಂತಮೇರಿಯ ಹುಟ್ಟಿದ ಹಬ್ಬ)ಅನ್ನು ಕ್ಯಾಥೊಲಿಕರು ಚರ್ಚಿನಲ್ಲಿ ಆಚರಿಸುತ್ತಾರೆ. ಡಿಸೆಂಬರ್ ಇಪ್ಪತ್ತೈದರಂದು ಬರುವ ಕ್ರಿಸ್‌ಮಸ್ ಹಬ್ಬವು ಕ್ರೈಸ್ತರಿಗೆ ಬಹುಮುಖ್ಯವಾದ ಹಬ್ಬವಾಗಿದೆ. ಹಬ್ಬದ ಹಿಂದಿನ ದಿನ ಭಕ್ತರಿಂದ ದಾನವಾಗಿ ಬಂದ ಬಟ್ಟೆ ಮತ್ತು ಪಾತ್ರೆಗಳನ್ನು ಬಡವರಿಗೆ ನೀಡುತ್ತಾರೆ; ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಬಣ್ಣದ ನಕ್ಷತ್ರ ದೀಪಗಳನ್ನು ಮನೆಯ ಹೊರಗೆ ತೂಗುಬಿಡುತ್ತಾರೆ. ಮನೆಯಲ್ಲಿ ಕ್ರಿಸ್‌ಮಸ್ ಸಸ್ಯವನ್ನು ಇಟ್ಟು ಅಲಂಕರಿಸುತ್ತಾರೆ. ಮಿತ್ರರಿಗೆ ಕೇಕ್ ಹಂಚುತ್ತಾರೆ.

## ಜಾತ್ರೆಗಳು

ಒಂದು ಪ್ರದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಿಭಾಜ್ಯ ಅಂಗವಾಗಿ ಜಾತ್ರೆಗಳು ಇಂದಿಗೂ ನಡೆದುಕೊಂಡುಬರುತ್ತಿವೆ. ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳ ಪರಿಣಾಮವಾಗಿ ಜಾತ್ರೆಗಳ ಆಚರಣೆಯಲ್ಲಿಯೂ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಹಿಂದೆ ಆಚರಿಸುತ್ತಿದ್ದ ಪಶುಬಲಿ, ಸಿಡಿ ಆಡುವುದು, ಬೆತ್ತಲೆಸೇವೆ, ದೇವದಾಸಿ, ಬಸವಿಬಿಡುವುದು ಮೊದಲಾದವುಗಳನ್ನು ಇಂದು ಬಹುಮಟ್ಟಿಗೆ ಕಾನೂನು ರೀತ್ಯಾ ನಿರ್ಬಂಧಿಸಲಾಗಿದೆ. ಪ್ರತೀವರ್ಷ ಸಾಮಾನ್ಯವಾಗಿ ಸುಗ್ಗಿಯ ಆನಂತರ ನಡೆಯುವ ಪರಿಷೆ ಹಾಗೂ ಜಾತ್ರೆಗಳು ಗ್ರಾಮೀಣರ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಬದುಕಿನ ಹಲವು ಅಗತ್ಯಗಳಿಗೆ ಸೂಕ್ತ ವೇದಿಕೆಗಳಾಗಿರುತ್ತವೆ. ಇದು ಹಿಂದೂ ದೇವಾಲಯಗಳಿಗೇ ಅಲ್ಲದೆ, ಜೈನರ ಬಸದಿಗಳು, ಮುಸಲ್ಮಾನರ ದರ್ಗಾಗಳು ಮತ್ತಿತರ ಪೂಜಾಸ್ಥಾನಗಳಿಗೂ ಅನ್ವಯವಾಗುತ್ತದೆ. ಜಾತ್ರೆಯ ಸಮಯದಲ್ಲಿ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ರಥೋತ್ಸವ ನಡೆಸುವರು ಅಥವಾ ಪಲ್ಲಕ್ಕಿಯಲ್ಲಿಟ್ಟು ವಾದ್ಯದ ಸಹಿತ ಮೆರವಣಿಗೆ ಮಾಡುವರು. ಹಳ್ಳಿ–ಪಟ್ಟಣಗಳೆಂಬ, ಜಾತಿ–ಮತಗಳೆಂಬ ಭೇದ–ಭಾವವಿಲ್ಲದೆ ಸ್ತ್ರೀ–ಪುರುಷರು ಜಾತ್ರೆಗಳಲ್ಲಿ ಭಾಗವಹಿಸುವುದು ಸಾಮಾನ್ಯವಾಗಿದೆ. ಇದೇ ಸಂದರ್ಭದಲ್ಲಿ ಕೆಲವೆಡೆ ದನದ ಜಾತ್ರೆಗಳೂ ನಡೆಯುವುದುಂಟು. ಜಾತ್ರೆಗಳು ಗ್ರಾಮೀಣ ಜನರಿಗೆ ತಾವು ಉತ್ಪಾದಿಸುವ ಸರಕುಗಳನ್ನು ಮಾರಾಟ ಮಾಡಲು ಹಾಗೂ ತಮಗೆ ಅಗತ್ಯವಿರುವ ಪಾತ್ರೆ–ಪರಡಿ,

ಬಟ್ಟೆ–ಬರೆ ಮುಂತಾದ ಸರಕುಗಳನ್ನು ಕೊಳ್ಳಲು ಒಳ್ಳೆಯ ಅವಕಾಶ ಕಲ್ಪಿಸುತ್ತವೆ. ಜಿಲ್ಲೆಯ ಕೆಲವೆಡೆ ಮುಸ್ಲಿಮ್ ಸಂತರ (ಸೂಫಿ ಸಂತರ)ಸ್ಮರಣಾರ್ಥ ಉರುಸ್‌ಗಳು ಇಸ್ಲಾಮ್ ಪಂಚಾಂಗದ ಅನುಸಾರ ನಡೆಯುತ್ತವೆ. ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಸೆಪ್ಟೆಂಬರ್ ಎಂಟಕ್ಕೆ ಸಂತ ಮೇರಿ ಉತ್ಸವ ಆಚರಿಸುತ್ತಾರೆ. ಜಿಲ್ಲೆಯಲ್ಲಿ ಚೈತ್ರ ಮಾಸದಲ್ಲಿ ಕನ್ನಂಬಾಡಿಯ ಮಹಾಲಕ್ಷ್ಮಿ, ಶ್ರೀರಂಗಪಟ್ಟಣದ ಪ್ರಸನ್ನ ಗಂಗಾಧರೇಶ್ವರ, ಶ್ರೀರಂಗಪಟ್ಟಣ ತಾಲೂಕು ಮಹದೇವಪುರದ ಕಾಶಿವಿಶ್ವನಾಥ, ಅಕ್ಕಿಹೆಬ್ಬಾಳು ಹೋಬಳಿ ಬದರಿಕಾಶ್ರಮದ ಸಂಗಮೇಶ್ವರ, ಜ್ಯೇಷ್ಠ ಮಾಸದಲ್ಲಿ ಶ್ರೀರಂಗಪಟ್ಟಣದ ನೃಸಿಂಹ, ಅಶ್ವಯುಜ ಮಾಸದಲ್ಲಿ ಕನ್ನಂಬಾಡಿಯಲ್ಲಿ ಕಾವೇರಮ್ಮನ ತೆಪ್ಪೋತ್ಸವ, ಪುಷ್ಯಮಾಸದಲ್ಲಿ ಹೇಮಗಿರಿಯ ವರದರಾಜ ಹಾಗೂ ಶ್ರೀರಂಗಪಟ್ಟಣದ ರಂಗನಾಥ, ಮಾಘಮಾಸದಲ್ಲಿ ಬಿಂಡಿಗನವಿಲೆಯ ಶ್ರೀಚೆನ್ನಕೇಶವ, ಗರುಡ, ಫಾಲ್ಗುಣ ಮಾಸದಲ್ಲಿ ಬರುವ ದೊಡ್ಡಚಿಕ್ಕನಹಳ್ಳಿ ವೆಂಕಟರಮಣ, ಆದಿಚುಂಚನಗಿರಿಯ ಗಂಗಾಧರೇಶ್ವರ ಹಾಗೂ ನಾಗಮಂಗಲದ ಸೌಮ್ಯಕೇಶವ, ಮೇಲುಕೋಟೆಯ ಚೆಲುವನಾರಾಯಣ (ವೈರಮುಡಿ ಉತ್ಸವ) ಮುಂತಾದ ದೇವತೆಗಳ ರಥೋತ್ಸವಗಳು ನಡೆಯುತ್ತವೆ. ನಾಗಮಂಗಲ ತಾಲೂಕು ಬೆಳ್ಳೂರು ಹೋಬಳಿ ಚಾಕೇನಹಳ್ಳಿಯಲ್ಲಿ ಪ್ರತೀ ವರ್ಷ ಫಾಲ್ಗುಣ ಮಾಸದಲ್ಲಿ ನಡೆಯುವ ಶ್ರೀಮಹಾಲಕ್ಷ್ಮಿ ದೇವತಾಂಬ ದೇವಿಯ ಹಾಗೂ ಮದ್ದೂರಿನಲ್ಲಿ ನಡೆಯುವ ಮದ್ದೂರಮ್ಮನ ಜಾತ್ರೆಯನ್ನೂ ಇಲ್ಲಿ ಉದಾಹರಿಸಬಹುದು. ಜಿಲ್ಲೆಯಲ್ಲಿ ನಡೆಯುವ ಕೆಲವು ಪ್ರಮುಖ ಜಾತ್ರೆಗಳನ್ನು, (ಹೆಚ್ಚಿನ ವಿವರಗಳಿಗೆ ಅಧ್ಯಾಯ–೧೭ ಪ್ರೇಕ್ಷಣೀಯ ಸ್ಥಳಗಳು ಹಾಗೂ ಸಿರಿಯೊಡಲು ಸಂಸ್ಮರಣ ಸಂಪುಟ ನೋಡಿ) ಇಂಗ್ಲಿಷ್ ತಿಂಗಳಿನ ಅಂದಾಜಿನ ಮೇರೆಗೆ ಹಾಗೂ ಉರುಸ್‌ಗಳನ್ನು (ಮುಸ್ಲಿಂ ಪಂಚಾಂಗದ ಪ್ರಕಾರ)ಈ ಮುಂದಿನ ಪಟ್ಟಿಯಲ್ಲಿ ತಾಲೂಕುವಾರು ನೀಡಲಾಗಿದೆ.

## ಮಂಡ್ಯ ಜಿಲ್ಲೆಯಲ್ಲಿ ನಡೆಯುವ ಕೆಲವು ಪ್ರಮುಖ ಜಾತ್ರೆಗಳು ಹಾಗೂ ಉರುಸ್‌ಗಳು

| ದೇವರು/ಸಂತರ ಹೆಸರು | ಜಾತ್ರೆ/ಉರುಸ್ ನಡೆಯುವ ಸ್ಥಳ | ತಿಂಗಳು | ಅವಧಿ | ಸೇರುವ ಜನಸಂಖ್ಯೆ (ಅಂದಾಜು) | ದನದ ಜಾತ್ರೆ |
|---|---|---|---|---|---|
| ೧ | ೨ | ೩ | ೪ | ೫ | ೬ |
| **ಕೃಷ್ಣರಾಜಪೇಟೆ ತಾಲೂಕು** | | | | | |
| ಕಲ್ಯಾಣ ವೆಂಕಟರಮಣಸ್ವಾಮಿ | ಹೇಮಗಿರಿ | ಜನವರಿ/ಫೆಬ್ರವರಿ | ೧೦ ದಿನ | ೧,೦೦,೦೦೦ | ಇದೆ |
| ಗವಿರಂಗನಾಥಸ್ವಾಮಿ | ಬಿಲ್ಲೇನಹಳ್ಳಿ, ಸಂತೆಬಾಚಹಳ್ಳಿ (ಹೋ) | ಜನವರಿ | ೧೦ದಿನ | ೫೦,೦೦೦ | ಇದೆ |
| ಲಕ್ಷ್ಮೀನಾರಾಯಣಸ್ವಾಮಿ | ಹೊಸಹೊಳಲು | ಮಾರ್ಚ್ | ೧೦ದಿನ | ೧೦,೦೦೦ | ಇದೆ |
| ಸೋಮೇಶ್ವರ | ಸಾಸಲು | ಏಪ್ರಿಲ್ | ೧೦ದಿನ | ೨೦,೦೦೦ | ಇದೆ |
| ಲಕ್ಷ್ಮೀ ನರಸಿಂಹ | ಅಕ್ಕಿಹೆಬ್ಬಾಳು | ಫೆಬ್ರವರಿ | ೧೦ದಿನ | ೧೦,೦೦೦ | ಇದೆ |
| **ಮದ್ದೂರು ತಾಲೂಕು** | | | | | |
| ನಂದಿ ಬಸವೇಶ್ವರ | ಚಿಕ್ಕಂಕನಹಳ್ಳಿ | ಜನವರಿ | ೭ ದಿನ | ೫೦,೦೦೦ | ಇದೆ |
| ನರಸಿಂಹಸ್ವಾಮಿ | ಮದ್ದೂರು | ಏಪ್ರಿಲ್/ಮೇ | ೭ ದಿನ | ೬೦,೦೦೦ | ಇದೆ |
| ಆತ್ಮಲಿಂಗೇಶ್ವರ | ಭಾರತೀನಗರ | ಏಪ್ರಿಲ್ | ೭ ದಿನ | ೫೦,೦೦೦ | ಇದೆ |
| ಮದ್ದೂರಮ್ಮ | ಮದ್ದೂರು | ಮಾರ್ಚ್/ಏಪ್ರಿಲ್ | | ೧೦,೦೦೦ | ಇದೆ |

| ೧ | ೨ | ೩ | ೪ | ೫ | ೬ |
|---|---|---|---|---|---|
| ಉರುಸು | ನಿಡಘಟ್ಟ, | ಮುಸ್ಲಿಂ | | | |
| | ಮದ್ದೂರು | ಪಂಚಾಂಗದಂತೆ | ೧ ದಿನ | ೨,೦೦೦ | ಇಲ್ಲ |
| **ಮಳವಳ್ಳಿ ತಾಲೂಕು** | | | | | |
| ಮತ್ತಿ ತಾಳೇಶ್ವರ | ಕಲ್ಲುವೀರನಹಳ್ಳಿ | ಏಪ್ರಿಲ್ | ೫ ದಿನ | ೫,೦೦೦ | ಇದೆ |
| ಲಕ್ಷ್ಮೀ ನರಸಿಂಹಸ್ವಾಮಿ | ಮಾರೇಹಳ್ಳಿ | ಏಪ್ರಿಲ್ | ೩ ದಿನ | ೫,೦೦೦ | ಇಲ್ಲ |
| ಪಟ್ಟಲದಮ್ಮ | ಮಳವಳ್ಳಿ | ಫೆಬ್ರವರಿ | ೧ ದಿನ | ೧೦,೦೦೦ | ಇಲ್ಲ |
| ಕಾಳೇಶ್ವರ | ಯತ್ತಂಬಾಡಿ | ಮಾರ್ಚ್ | ೨ ದಿನ | ೫,೦೦೦ | ಇಲ್ಲ |
| ವೀರಭದ್ರಸ್ವಾಮಿ | ಮಿಕ್ಕೆರೆ | ದಸರಾ ಸಮಯಕ್ಕೆ | ೧ ದಿನ | ೨,೦೦೦ | ಇಲ್ಲ |
| ಬಸವೇಶ್ವರಸ್ವಾಮಿ | ಮಾಗನೂರು | ಮಾರ್ಚ್ | ೧ ದಿನ | ೨,೦೦೦ | ಇಲ್ಲ |
| ಬಸವೇಶ್ವರ | ಬಂಡೂರು | ಫೆಬ್ರವರಿ | ೭ ದಿನ | ೩,೦೦೦ | ಇದೆ |
| ಶಿವಸಮುದ್ರದ ಮಾರಮ್ಮ | | | | | |
| (೨ ವರ್ಷಕ್ಕೊಮ್ಮೆ) | ಬಳ್ಳಗೆರೆ | ಮಾರ್ಚ್ | ೧ ದಿನ | ೨,೦೦೦ | ಇಲ್ಲ |
| ದೊಡ್ಡಮ್ಮ ತಾಯಿ | ಮುಟ್ಟನಹಳ್ಳಿ | ಮಾರ್ಚ್ | ೧ ದಿನ | ೫,೦೦೦ | ಇಲ್ಲ |
| ಮಹದೇಶ್ವರ | ಸರಗೂರು | ಮಾರ್ಚ್ | ೧ ದಿನ | ೬,೦೦೦ | ಇಲ್ಲ |
| ಪಾತಾಳೇಶ್ವರ | | | | | |
| (೧೨ ವರ್ಷಕ್ಕೊಮ್ಮೆ) | ಪೂರೀಗಾಲಿ | ಅಕ್ಟೋಬರ್ | ೧ ದಿನ | ೮,೦೦೦ | ಇಲ್ಲ |
| ಮಂಟೇಸ್ವಾಮಿ | ಬೊಪ್ಪಗೌಡನಪುರ | ಮಾರ್ಚ್ | ೧ ದಿನ | ೪,೦೦೦ | ಇಲ್ಲ |
| ಕುಂದೂರಮ್ಮ | ಕುಂದೂರು | ನವೆಂಬರ್ | ೧ ದಿನ | ೫,೦೦೦ | ಇಲ್ಲ |
| ಬೆಟ್ಟದರಸಮ್ಮ | ಗುಂಡಾಪುರ | ಮಾರ್ಚ್ | ೬ ದಿನ | ೨,೦೦೦ | ಇಲ್ಲ |
| ಆಂಜನೇಯಸ್ವಾಮಿ | ಮುತ್ತತ್ತಿ | ಸೆಪ್ಟೆಂಬರ್ | ೪ ದಿನ | ೬,೦೦೦ | ಇಲ್ಲ |
| **ನಾಗಮಂಗಲ ತಾಲೂಕು** | | | | | |
| ವೆಂಕಟರಮಣಸ್ವಾಮಿ | ಕೋಟೆಬೆಟ್ಟ | ಫೆಬ್ರವರಿ | ೧ ವಾರ | ೫,೦೦೦ | ಇದೆ |
| ತಪಸೀರಾಯಸ್ವಾಮಿ | ದೇವರಹಳ್ಳಿ | ಸಂಕ್ರಾಂತಿ | | | |
| | | ಸಮಯಕ್ಕೆ | ೧ ವಾರ | ೨,೦೦೦ | ಇದೆ |
| ಸೌಮ್ಯಕೇಶವಸ್ವಾಮಿ | ನಾಗಮಂಗಲ | ಸಂಕ್ರಾಂತಿ | | | |
| | | ಸಮಯಕ್ಕೆ | | ೧೦,೦೦೦ | ಇಲ್ಲ |
| ಸೋಮನಹಳ್ಳಿ ಅಮ್ಮನವರು | ಸೋಮನಹಳ್ಳಿ | ಫೆಬ್ರವರಿ | | ೧೦,೦೦೦ | ಇಲ್ಲ |
| ಶ್ರೀಚೆನ್ನಕೇಶವ ಗರುಡದೇವರು | ಬಿಂಡಿಗನವಿಲೆ | ಮಾಘಶುದ್ಧ | | | |
| | | ಚತುರ್ದಶಿ | ೧ ವಾರ | ೧೦,೦೦೦ | ಇಲ್ಲ |
| ಆದಿಶಕ್ತಿ ಅಮ್ಮ | ಹುಲಿಕೆರೆ | ಏಪ್ರಿಲ್ | ೨ ದಿನ | ೫,೦೦೦ | ಇಲ್ಲ |
| ಕಾಲಭೈರವೇಶ್ವರ | ಆದಿಚುಂಚನಗಿರಿ | ಹೋಳಿಹಬ್ಬದ ದಿನ | | ೧,೦೦,೦೦೦ | ಇಲ್ಲ |
| ಹಜರತ್ ಗೌಸ್ ಪಾಶಾಉರುಸ್ | ನಾಗಮಂಗಲ | ಮುಸ್ಲಿಂ | | | |
| | | ಪಂಚಾಂಗದಂತೆ | | ೫,೦೦೦ | ಇಲ್ಲ |
| ಹಜರತ್ ಹಬೀದಾಬಿ | ಮಾಯಣ್ಣಗೌಡನ | | | | |
| | ಕೊಪ್ಪಲು | ಮುಸ್ಲಿಂ | | | |
| | | ಪಂಚಾಂಗದಂತೆ | | ೫,೦೦೦ | ಇಲ್ಲ |

| ೧ | ೨ | ೩ | ೪ | ೫ | ೬ |
|---|---|---|---|---|---|
| **ಶ್ರೀರಂಗಪಟ್ಟಣ ತಾಲೂಕು** | | | | | |
| ರಂಗನಾಥಸ್ವಾಮಿ | ಶ್ರೀರಂಗಪಟ್ಟಣ | ರಥಸಪ್ತಮಿ (ಜನವರಿ) | | ೫೦,೦೦೦ | |
| ವೆಂಕಟರಮಣಸ್ವಾಮಿ | ಕರೀಘಟ್ಟ | ಫೆಬ್ರವರಿ ಹಾಗೂ | | | |
| | | ಕೊನೇ ಶ್ರಾವಣ | | | |
| | | ಶನಿವಾರ | | ೧೦,೦೦೦ | |
| ಕಾಶಿವಿಶ್ವನಾಥ | ಮಹದೇವಪುರ | ಚೈತ್ರಮಾಸದ ಹುಣ್ಣಿಮೆ | | ೩,೦೦೦ | |
| ಹಜರತ್ ನವಾಬ್ ಹೈದರ್ | | | | | |
| ಆಲಿಖಾನ್‌ಬಹುದ್ದೂರ್ ಉರುಸ್ | ಶ್ರೀರಂಗಪಟ್ಟಣ | ಮುಸ್ಲಿಂ ಪಂಚಾಂಗದಂತೆ | | ೧೦,೦೦೦ | |
| ಹಜರತ್ ಟೀಪುಸುಲ್ತಾನ್ | | | | | |
| ಉರುಸ್ | ಶ್ರೀರಂಗಪಟ್ಟಣ | ಮುಸ್ಲಿಂ ಪಂಚಾಂಗದಂತೆ | | ೧೦,೦೦೦ | |
| **ಪಾಂಡವಪುರ ತಾಲೂಕು** | | | | | |
| ಮಲ್ಲಿಕಾರ್ಜುನ ಸ್ವಾಮಿ, | ಹಿರೊಡೆ | ಅಕ್ಟೋಬರ್–ನವೆಂಬರ್ | ೭ ದಿವಸ | ೨೫೦೦ | ಹೌದು |
| ವೇಣುಗೋಪಾಲಸ್ವಾಮಿ | ತೊಣ್ಣೂರು | ಮಾರ್ಚ್ | ೫ ದಿವಸ | ೧೫೦೦ | ಹೌದು |
| ಬಾಬಯ್ಯ ಉರುಸ್ | ತೊಣ್ಣೂರು | ಏಪ್ರಿಲ್ | ೧ ದಿನ | ೮೦೦ | ಇಲ್ಲ |
| ಬಾಬಯ್ಯ ಉರುಸ್ | ಪಾಂಡವಪುರ | ಅಕ್ಟೋಬರ್ | ೧ ದಿನ | ೫೦೦ | ಇಲ್ಲ |
| ಚೆಲುವನಾರಾಯಣ ಸ್ವಾಮಿ | ಮೇಲುಕೋಟೆ | ಮಾರ್ಚ್–ಏಪ್ರಿಲ್ | ೪ ದಿವಸ | ೧ ಲಕ್ಷ | ಇಲ್ಲ |
| ಬಾಬಯ್ಯನ ಉರುಸ್ | ಕ್ಯಾತನಹಳ್ಳಿ | ಏಪ್ರಿಲ್ | ೧ ವಾರ | ೫೦೦ | ಇಲ್ಲ |
| ಮಹದೇಶ್ವರ ಸ್ವಾಮಿ | ಬೇಬಿ | ಫೆಬ್ರವರಿ | ೫ ದಿನ | ೨೦೦೦ | ಹೌದು |
| **ಮಂಡ್ಯ ತಾಲೂಕು** | | | | | |
| ಬ್ಯಾಲಕೇಶ್ವರಿ ಜಾತ್ರೆ | ಕೊತ್ತತ್ತಿ | ೨ ವರ್ಷಕ್ಕೊಮ್ಮೆ | | ೫೦೦೦ | |
| ಅರ್ಕೇಶ್ವರ ಸ್ವಾಮಿ | ಗುತ್ತಲು | ಫೆಬ್ರವರಿ | | ೨೫೦೦ | |
| ಭೈರವನ ಕೊಂಡ | ಬಸರಾಳು | ಯುಗಾದಿ | | ೨೫೦೦ | |
| ಆತ್ಮಲಿಂಗೇಶ್ವರ | ಹನುಮಂತನಗರ | ಶಿವರಾತ್ರಿ | | ೧೦೦೦೦ | |
| ಲಕ್ಷ್ಮೀಜನಾರ್ಧನ ಸ್ವಾಮಿ | ಮಂಡ್ಯ | ಏಪ್ರಿಲ್–ಮಾರ್ಚ್ | | ೨೦೦೦ | |